₹ 6 @vishwavaninews epaper.vishwavani.news vishwavani.news ಬೆಂಗಳೂರು | **ಹುಬ್ಬಳ್ಳಿ** | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಸೋಮವಾರ 01.06.2026** **ಸಂಪುಟ:** 68 **ಸಂಚಿಕೆ:** 318 **ಪುಟಗಳು:** 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಭಾರತೀಯ ಸೇನೆಗೆ ಹೊಸ ಸಾರಥಿಗಳು

ಭಾರತದ ನೂತನ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ (ಸಿಡಿಎಸ್) ಜನರಲ್ ಎನ್.ಎಸ್ ರಾಜಾ ಸುಬ್ರಮಣಿ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇದೇ ವೇಳೆ ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ಬೆಂಗಳೂರಿನ ಬಸವನಗುಡಿಯ ಎನ್‌ಆರ್ ಕಾಲೋನಿಯಲ್ಲಿ ಬೆಳೆದ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಭಾನುವಾರ ಅಧಿಕಾರ ಸ್ವೀಕರಿಸಿದ್ದಾರೆ. ಕೃಷ್ಣ ಸ್ವಾಮಿನಾಥನ್ ವಿಜಯಪುರದ ಸೈನಿಕ ಶಾಲೆಯಲ್ಲಿ ಸೇನಾ ಶಿಕ್ಷಣ ಪೂರೈಸಿ, ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಪ್ರವೇಶ ಪರೀಕ್ಷೆ ಪಾಸ್ ಮಾಡಿ 1987ರಲ್ಲಿ ತಮ್ಮ 19ನೇ ವಯಸ್ಸಿನಲ್ಲೇ ಭಾರತೀಯ ನೌಕಾಪಡೆ ಸೇರಿದ್ದರು.

ಡಿಕೆಶಿ ದೆಹಲಿಗೆ ದೌಡು

ಡಿಸಿಎಂ, ಸಚಿವ ಸ್ಥಾನ, ಸ್ಪೀಕರ್ ಹುದ್ದೆ ಆಕ್ಕೈರಿಗೆ ಕಸರತ್ತು

ಪ್ರಮಾಣ ವಚನಕ್ಕೆ ಸರ್ವಧರ್ಮದ ಗುರುಗಳಿಗೆ ಆಹ್ವಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿಯಾಗಿ ಬುಧವಾರ ಡಿ.ಕೆ. ಶಿವಕುಮಾರ್ ಅಧಿಕಾರ ಸ್ವೀಕರಿಸುವುದು ಖಚಿತವಾಗಿದ್ದರೂ, ಅವರೊಂದಿಗೆ ಸಚಿವ ಸಂಪುಟಕ್ಕೆ ಎಷ್ಟು ಮಂದಿ ಸೇರಲಿದ್ದಾರೆ ಎನ್ನುವ ಕುತೂಹಲಕ್ಕೆ ಸೋಮವಾರ ತೆರೆ ಬೀಳುವ ಸಾಧ್ಯತೆಯಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೆಹಲಿಗೆ ತೆರಳಲಿದ್ದು, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಮೊದಲ ಹಂತದ ಚರ್ಚೆ ನಡೆಸಲಿದ್ದಾರೆ. ಆ ವೇಳೆಗೆ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಲಿದ್ದಾರೆ. ಡಿಕೆಶಿ ಜತೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ದೆಹಲಿಗೆ ತೆರಳುವುದು ಖಚಿತವಾಗಿದೆ. ರಾಹುಲ್ ಗಾಂಧಿ, ಖರ್ಗೆ ಅವರೊಂದಿಗೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಸಂಪುಟ ಪುನಾರಚನೆಗೆ ಸಂಬಂಧಿಸಿ ಅಂತಿಮ ಸುತ್ತಿನ ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ.

ಡಿಕೆ ದೆಹಲಿಗೆ ತೆರಳುವುದು ಖಚಿತವಾಗುತ್ತಿದ್ದಂತೆ ಭಾನುವಾರ ಇಡೀ ದಿನ ಡಿಕೆಶಿ ನಿವಾಸಕ್ಕೆ ಸಚಿವಾಕಾಂಕ್ಷಿಗಳು, ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರು ಭೇಟಿ ನೀಡಿ ಡಿಕೆಗೆ ಅಭಿನಂದಿಸುವ ನೆಪದಲ್ಲಿ, ಸಂಪುಟಕ್ಕೆ ಟವೆಲ್ ಹಾಕಿದ್ದಾರೆ. ಸಂಪುಟಕ್ಕೆ ಸೇರಲು 34 ಜನರಿಗೆ ಅವಕಾಶವಿದ್ದರೂ, ಇದಕ್ಕೆ ಮೂರು ಪಟ್ಟು ಶಾಸಕರು ಸಚಿವಾಕಾಂಕ್ಷಿಗಳು ಸಂಪುಟ ಸೇರಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ಸೋಮವಾರದ ಸಭೆ ನಿರ್ಣಾಯಕ ಪಾತ್ರವಹಿಸಲಿದೆ ಎನ್ನುವ ಮಾತುಗಳು ಕಾಂಗ್ರೆಸ್‌ನಲ್ಲಿ ಕೇಳಿಬಂದಿದೆ.

ಡಿಸಿಎಂ ಹುದ್ದೆ ಸೃಷ್ಟಿ; ಮುಗಿಯದ ಗೊಂದಲ

ಈ ನಡುವೆ ಉಪಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿ ಆರೇಳು ಹೆಸರು ಓಡುತ್ತಿದ್ದರೂ, ಡಿ.ಕೆ.ಶಿವಕುಮಾರ್ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವ ವಿಷಯದಲ್ಲಿ ಆಸಕ್ತಿ ತೋರುತ್ತಿಲ್ಲ. ಸಿದ್ದರಾಮಯ್ಯ ಅವರು ಮೂರು ಡಿಸಿಎಂ ಹುದ್ದೆ ಸೃಷ್ಟಿಸಬೇಕು ಎನ್ನುವ ಒತ್ತಡ ಹೇರಿದ್ದರೂ, ಡಿಕೆಶಿ ಡಿಸಿಎಂ ಹುದ್ದೆಯ ಅಗತ್ಯವಿಲ್ಲ ಎನ್ನುವ ಮಾತನ್ನು ಪಕ್ಷದ ಹೈಕಮಾಂಡ್ ಮುಂದೆ ಮಂಡಿಸಿದ್ದಾರೆ ಎನ್ನಲಾಗಿದೆ.

ಇದಕ್ಕೆ ಪೂರಕವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಬಗ್ಗೆ ಯಾವುದೇ ಪ್ರಸ್ತಾಪ ಬಂದಿಲ್ಲ ಎಂದಿದ್ದಾರೆ. ಡಿಸಿಎಂ ಸ್ಥಾನ ಇರಬೇಕೇ ಬೇಡವೇ ಎನ್ನುವ ಸ್ಪಷ್ಟನೆ ಸೋಮವಾರ ಸಿಗಲಿದೆ ಎಂದು ತಿಳಿದುಬಂದಿದೆ.

ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಕಾರ್ಯಕ್ರಮಕ್ಕೆ ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಹೆಚ್ಚಿನ ಜನ ಸೇರಲಾಗುವುದಿಲ್ಲ. ಅದಕ್ಕೆ ಕಾರ್ಯಕರ್ತರು ಕ್ಷಮಿಸಬೇಕು. ನನ್ನೊಂದಿಗೆ ಯಾರೆಲ್ಲ ಪ್ರಮಾಣ ಸ್ವೀಕರಲಿಸಲಿದ್ದಾರೆ ಎಂಬುದನ್ನು ಹೈಕಮಾಂಡ್ ತೀರ್ಮಾನಿಸಲಿದೆ.

-**ಡಿ.ಕೆ.ಶಿವಕುಮಾರ್**, ನಿಯೋಜಿತ ಮುಖ್ಯಮಂತ್ರಿ

ಡಿಕೆ ಶಿವಕುಮಾರ್ ತಮ್ಮೊಂದಿಗೆ ಎಷ್ಟು ಜನ ಪ್ರಮಾಣ ವಚನ ಸ್ವೀಕರಿಸುತ್ತಾರೆ ಎಂಬ ಪ್ರಸ್ತಾವನೆ, ಡಿಸಿಎಂ ಹುದ್ದೆಗಳ ಬಗ್ಗೆಯೂ ಪ್ರಸ್ತಾವನೆ ಸಲ್ಲಿಸಿಲ್ಲ. ಸಚಿವ ಸಂಪುಟ ಎರಡು ಹಂತದಲ್ಲಿ ರಚನೆಯಾಗಲಿದೆ. ಸದ್ಯಕ್ಕೆ ಒಂದು ಹಂತದಲ್ಲಿ ಸಂಪುಟ ರಚನೆಯಾಗಲಿದೆ. ಬಳಿಕ 15 ದಿನ ಅಥವಾ ಒಂದು ತಿಂಗಳೊಳಗಾಗಿ, ಎರಡನೇ ಹಂತದಲ್ಲಿ ಸಂಪುಟ ರಚನೆಯಾಗಬೇಕೆಂದು ಎಂದು ಚರ್ಚೆಯಾಗಿದೆ. ಆದರೆ, ಮುಖ್ಯಮಂತ್ರಿಯವರು ಯಾವ ರೀತಿ ನಿರ್ಧಾರ ಮಾಡುತ್ತಾರೆ ಗೊತ್ತಿಲ್ಲ.

- **ಮಲ್ಲಿಕಾರ್ಜುನ ಖರ್ಗೆ**, ಎಐಸಿಸಿ ಅಧ್ಯಕ್ಷ

ಸರ್ವ ಧರ್ಮದ ಮುಖಂಡರಿಗೆ ಆಹ್ವಾನ

ಡಿಕೆ ಶಿವಕುಮಾರ್ ಸರ್ವ ಧರ್ಮದ ಪ್ರಮುಖರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಲು ನಿರ್ಧರಿಸಿದ್ದಾರೆ. ಲೋಕಭವನದಲ್ಲಿ ನಡೆಯಲಿರುವ ಪ್ರಮಾಣವಚನ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ, ಸುತ್ತೂರು, ಸಿದ್ದಗಂಗಾ ಸೇರಿದಂತೆ 55 ಸ್ವಾಮೀಜಿಗಳು, ಬೆಂಗಳೂರಿನ ಆರ್ಚ್ ಬಿಷಪ್, ಕಲಬುರ್ಗಿಯ ಹಜರತ್ ಹಫೀಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್, ಶ್ರವಣಬೆಳಗೊಳದ ಆಗಮಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಬೆಂಗಳೂರು ಮಹಾಬೋಧಿ ಸೊಸಾಯಿಟಿಯ ಆನಂದ ಬಿಕ್ಕು ಸೇರಿದಂತೆ ನಾನಾ ಧರ್ಮದ ಪ್ರಮುಖರಿಗೆ ಆಹ್ವಾನ ನೀಡಲಾಗಿದೆ.

ರಾಜ್ಯಸಭೆ, ಮೇಲ್ಮನೆ ಬಗ್ಗೆಯೂ ಚರ್ಚೆ

ದೆಹಲಿಗೆ ತೆರಳುತ್ತಿರುವ ಡಿ.ಕೆ.ಶಿವಕುಮಾರ್ ಅವರೊಂದಿಗೆ ರಾಜ್ಯಸಭೆ, ವಿಧಾನಪರಿಷತ್ ಹುದ್ದೆ ಭರ್ತಿಗೆ ಸಂಬಂಧಿಸಿದಂತೆಯೂ ಚರ್ಚೆ ನಡೆಸುವ ಸಾಧ್ಯತೆಯಿದೆ. ರಾಜ್ಯಸಭಾ ಚುನಾವಣೆಗೆ ಹೆಚ್ಚು ಸಮಯ ಇಲ್ಲದೇ ಇರುವುದರಿಂದ ಸೋಮವಾರವೇ, ರಾಜ್ಯಸಭೆಗೆ ಕರ್ನಾಟಕದಿಂದ ಆಯ್ಕೆಯಾಗಲಿರುವ ಮೂರು ಹೆಸರುಗಳನ್ನು ಅಂತಿಮಗೊಳಿಸುವುದು ಬಹುತೇಕ ನಿಶ್ಚಿತ ಎನ್ನುವ ಮಾತುಗಳು ಕೇಳಿಬಂದಿದೆ.

ಮತ್ತೆ ಕಪ್ ನಮ್ದೇ

ಫೈನಲ್ ಪಂದ್ಯದಲ್ಲಿ ವಿರಾಟ್ ಕಿಂಗ್

ಅಹಮದಾಬಾದ್: ಕೊನೆಯ ಎಸೆತದಲ್ಲಿ ಸಿಕ್ಸರ್ ಜೊತೆಗೆ ಎರಡನೇ ಬಾರಿಗೆ ಕಪ್ ಗೆಲ್ಲಿಸಿ ಕೊಡುವ ಮೂಲಕ ರನ್ ಮೆಷಿನ್ ವಿರಾಟ್ ಕೊಹ್ಲಿ ತಾನು ಕ್ರಿಕೆಟ್ ಜಗತ್ತಿನ ಕಿಂಗ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದರು.

ಇಲ್ಲಿನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಫೈನಲ್ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಇಳಿದ ಗುಜರಾತ್ ಟೈಟನ್ಸ್ ತಂಡವು ಆರ್‌ಸಿಬಿಯ ಬಿಗಿ ಬೌಲಿಂಗ್ ದಾಳಿಗೆ ತತ್ತರಿಸಿ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು ಕೇವಲ 155 ರನ್ ಗಳಿಸಿದೆ.

ಈ ಸಾಧಾರಣ ಮೊತ್ತವನ್ನು ಬೆಂಬತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 18 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 161 ರನ್‌ಗಳಿಸಿ ಗೆಲುವಿನ ದಡ ಸೇರಿತು. ವಿರಾಟ್ ಕೊಹ್ಲಿ ಅಜೇಯ 75ರನ್ ಬಾರಿಸಿ ಗೆಲುವಿನ ರೂವಾರಿಯಾದರು.

ಕೇವಲ 4.3 ಓವರ್‌ಗಳಲ್ಲಿ ಮೊದಲ ವಿಕೆಟ್‌ಗೆ 62 ರನ್ ಪೇರಿಸಿದ ಆರ್‌ಸಿಬಿ ಆರಂಭದಲ್ಲಿ ಅಬ್ಬರಿಸಿತು. ಆರಂಭಿಕ ವೆಂಕಟೇಶ್ ಅಯ್ಯರ್ ಕೇವಲ 16 ಬಾಲ್‌ಗಳಲ್ಲಿ 32 ರನ್ ಗಳಿಸಿ ಔಟಾದರು. ಬಳಿಕ ತಾಳ್ಮೆಯ ಆಟವಾಡಿದ ಮಾಜಿ ನಾಯಕ ವಿರಾಟ್ ಕೊಹ್ಲಿ ಅಜೇಯ ಅರ್ಧ ಶತಕ ಬಾರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ದೇವದತ್ತ ಪಡಿಕ್ಕಲ್ (1), ನಾಯಕ ರಜತ್ ಪಾಟೀದಾರ್ (15), ಕೃನಾಲ್ ಪಾಂಡ್ಯ (1) ವಿಫಲರಾದರೂ ಟಿಮ್ ಡೇವಿಡ್ 24 ರನ್‌ಗಳ ಕೊಡುಗೆ ನೀಡಿ ವಿರಾಟ್‌ಗೆ ಸಾಥ್ ನೀಡಿದರು. ಕೊನೆಯಲ್ಲಿ ವಿಕೆಟ್ ಕೀಪರ್ ಜಿತೇಶ್ ಶರ್ಮಾ (11) ಉತ್ತಮ ಬೆಂಬಲ ನೀಡಿದರು.

ಗುಜರಾತ್ ಟೈಟನ್ಸ್‌ಗೆ ಉತ್ತಮ ಆರಂಭ ದೊರಕಲಿಲ್ಲ. ಆರಂಭಿಕ ಸಾಯಿ ಸುದರ್ಶನ್ ಕೇವಲ 12 ರನ್ ಗಳಿಸಿ ಭುವನೇಶ್ವರ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಿಗೇ ಕಳೆದ ಪಂದ್ಯದ ಶತಕ ವೀರ ನಾಯಕ ಶುಭಮನ್ ಗಿಲ್ 10 ರನ್ ಗಳಿಸಿ ಜೋಸ್ ಹೇಜಲ್‌ವುಡ್ ಬಾಲ್‌ನಲ್ಲಿ ನಾಯಕ ರಜತ್ ಪಾಟೀದಾರ್‌ಗೆ ವಿಕೆಟ್ ಒಪ್ಪಿಸಿ ಹೊರನಡೆದರು. 19ನೇ ಆವೃತ್ತಿಯ ಐಪಿಎಲ್‌ನಲ್ಲಿ ಗುಜರಾತ್ ಫೈನಲ್ ಗೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರಿಬ್ಬರು ಔಟಾಗುವುದರೊಂದಿಗೆ ಟೈಟನ್ಸ್ ವಿಜಯದ ಆಸೆ ಆರಂಭದಲ್ಲೇ ಕಮರಿತು.

ಆರ್‌ಸಿಬಿ ಪರ ಭರ್ಜರಿ ಬೌಲಿಂಗ್: ಬೆಂಗಳೂರು ತಂಡದ ಪರ ರಾಸಿಖ್ ಸಲಾಮ್ ದಾರ್ 4 ಓವರ್‌ಗಳಲ್ಲಿ ಕೇವಲ 27 ರನ್ ನೀಡಿ ಪ್ರಮುಖ 3 ವಿಕೆಟ್ ಕಸಿದು ಗುಜರಾತ್ ತಂಡಕ್ಕೆ ಆಘಾತ ನೀಡಿದರು. ಅನುಭವಿ ಭುವನೇಶ್ವರ್ ಕುಮಾರ್ 2 ಮತ್ತು ಜೋಶ್ ಹೇಜಲ್‌ವುಡ್ 2 ತಲಾ ಎರಡು ವಿಕೆಟ್ ಪಡೆದು ಮಿಂಚಿದರು. ಸ್ಪಿನ್ನರ್ ಕೃನಾಲ್ ಪಾಂಡ್ಯ 1 ವಿಕೆಟ್ ಪಡೆದರು.

ಸೊಂಪಾದ ಪುಟಗಳು

ಸಿದ್ದು ವಿದಾಯದ ಅಂತಿಮ ಕ್ಷಣಗಳು

ಮೂರ್ತಿಪೂಜೆ
ಆರ್.ಟಿ. ವಿಠ್ಠಲಮೂರ್ತಿ 6

ಪಿಚ್ ಮೇಲೆ ಮಲಗುತ್ತಿದ್ದ ಐಪಿಎಲ್ ಸ್ಟಾರ್

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ



ನೀವು ಯಾರಿಗೂ, ಏನನ್ನೂ ಸಾಬೀತುಪಡಿಸಬೇಕಿಲ್ಲ ಎಂದಾದರೆ ಸುಮ್ಮನಿರುವುದು ವಾಸಿ. ನೀವು ಹೆಚ್ಚು ಮಾತಾಡಿದಾಗಲೇ ಜನ ನಿಮ್ಮನ್ನು ಅನುಮಾನದಿಂದ ನೋಡುತ್ತಾರೆ. ಸಾಧನೆಗೆ ಮಾತಿನ ಬೆಂಬಲ ಬೇಕಿಲ್ಲ. ಸಾಧನೆಯೇ ಮಾತಾಡುತ್ತದೆ. ಅದು ಎಲ್ಲರಿಗೂ ಕೇಳಿಸುತ್ತದೆ.

ವಕ್ರತುಂಡೋಕ್ತಿ



ಬೆಳಗ್ಗೆಯೇ ಮದುವೆಯಾಗುವುದು ಲೇಸು. ಸರಿ ಹೋಗದಿದ್ದರೆ ಇಡೀ ದಿನ ವೇಸ್ಟ್ ಆಗುವುದಿಲ್ಲ.

ನಲಪಾಡ್‌ಗೆ ಇ.ಡಿ ನೋಟಿಸ್

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದ ತನಿಖೆಯನ್ನು ನಡೆಸುತ್ತಿರುವ ಜಾರಿ ನಿರ್ದೇಶನಾಲಯ(ಇ.ಡಿ), ಪ್ರಕರಣದ ತನಿಖೆಯ ಭಾಗವಾಗಿ ವಿಚಾರಣೆಗೆ ಹಾಜರಾಗುವಂತೆ ಶಾಸಕ ಎನ್.ಎ.ಹ್ಯಾರೀಸ್ ಅವರ ಪುತ್ರ ಮೊಹಮ್ಮದ್ ನಲಪಾಡ್‌ಗೆ ಸಮನ್ಸ್ ಜಾರಿ ಮಾಡಿದೆ. ನಲಪಾಡ್ ಸೋಮವಾರ ಇ.ಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಬೇಕಿದೆ. ಈ ಪ್ರಕರಣವು ರಾಜ್ಯದಲ್ಲಿ ಭಾರೀ ಸದ್ದು ಮಾಡಿದ್ದು, ಹಣ ವರ್ಗಾವಣೆ ಮತ್ತು ಬಿಟ್ ಕಾಯಿನ್ ದುರ್ಬಳಕೆ ಆರೋಪದ ಮೇಲೆ ತನಿಖಾ ಸಂಸ್ಥೆಗಳು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿವೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಐಪಿಎಲ್ 2026 ರ ಚಾಂಪಿಯನ್ ಆದ ಆರ್‌ಸಿಬಿ



ಬೆಳ್ತಂಗಡಿ ತಾಲೂಕಿನ ರೆಂಕೆದಗುತ್ತು ಎಂಬಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಧರ್ಮಸ್ಥಳ ಸಿರಿ ಸಂಸ್ಥೆಯ ಸುಸಜ್ಜಿತ ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್ ಅನ್ನು ರವಿವಾರ ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಉದ್ಘಾಟಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್, ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ, ಸಿರಿ ಸಂಸ್ಥೆಯ ಸಂಸ್ಥಾಪಕಿ ಹೇಮಾವತಿ ವೀರೇಂದ್ರ ಹೆಗ್ಗಡೆ, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಪ್ರತಾಪ ಸಿಂಹ ನಾಯಕ್, ರಾಜ್ಯಸಭಾ ಕಾರ್ಯದರ್ಶಿ ಡಾ. ಕೆ.ಎಸ್. ಸೋಮಶೇಖರ್, ಉಜಿರೆ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಉಪಸ್ಥಿತರಿದ್ದರು.

ಮಾವು ಬೆಳೆಗಾರರಿಂದ ಕೃಷಿ ಆರ್ಥಿಕತೆಗೆ ಶಕ್ತಿ

ಮನ್ ಕಿ ಬಾತ್‌ನಲ್ಲಿ ಮಾವಿನ ಸವಿ

ದೆಹಲಿ: ಭಾರತದಲ್ಲಿನ ಮಾವು ಬೆಳೆಗಾರರು ಸಾಮಾನ್ಯ ರೈತರಲ್ಲ. ಅವರು ಬಹಳ ವಿಶೇಷ. ಅವರು ಮಾವಿನ ಹಣ್ಣು ಬೆಳೆದು ದೇಶದ ಕೃಷಿ ಆರ್ಥಿಕತೆಗೆ ಶಕ್ತಿ ತುಂಬುತ್ತಿದ್ದಾರೆ. ಹಾಗಾಗಿ

ನಾನು ದೇಶದ ಮಾವು ಬೆಳೆಗಾರ ರೈತ ಮಿತ್ರರನ್ನು ಬಹಳವಾಗಿ ಪ್ರಶಂಸಿಸಲು ಬಯಸುವೆ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಜನಪ್ರಿಯ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಹೇಳಿದ್ದಾರೆ.

ಮೋದಿ ಅವರ 'ಮನ್ ಕಿ ಬಾತ್'ನ 134ನೇ ಸಂಚಿಕೆ ಭಾನುವಾರ ಬೆಳಗ್ಗೆ ಆಕಾಶವಾಣಿ ಮತ್ತು ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಯಿತು. ಇದು ಮಾವಿನ ಹಣ್ಣಿನ ಕಾಲ. ಮಾವಿನ ಹಣ್ಣು-ಕಾಯಿಗಳನ್ನು ಬಗೆಬಗೆಯ ರೀತಿಯಲ್ಲಿ ಸೇವಿಸುವ ಭಾರತೀಯರ ಪಾಲಿಗೆ ಇದು ಬಲು ಅಚ್ಚುಮೆಚ್ಚಿನ ಕಾಲ. ಈಗ ಪ್ರತಿ ಮನೆಯಲ್ಲೂ ಮಾತು ಶುರುವಾಗುವುದೇ ಮಾವಿನ ಹಣ್ಣಿನ ವಿಚಾರದಿಂದ. ಮಾವು ಭಾರತೀಯರ ಬದುಕಿನಲ್ಲಿ ಅಷ್ಟೊಂದು ಹಾಸು ಹೊಕ್ಕಾಗಿದೆ. ಮಹಾರಾಷ್ಟ್ರ ಕೊಂಕಣದಲ್ಲಿ ಹಾಪೂಸ್, ಅಲ್ಫೋನ್ಸೊ, ಗುಜರಾತ್‌ನಲ್ಲಿ ಕೇಸರ್, ಉತ್ತರ ಪ್ರದೇಶದಲ್ಲಿ ದಶೇರಿ, ನನ್ನ ಕ್ಷೇತ್ರ ಕಾಶಿಯಲ್ಲಿ ಲಂಗ್ಡಾ, ದಕ್ಷಿಣ ಭಾರತದಲ್ಲಿ ರಸಪುರಿ... ನೂರಾರು ಬಗೆಯ ಮಾವಿನ ಹಣ್ಣುಗಳಿವೆ ಎಂದು ಹೇಳುವ ಮೂಲಕ ಶ್ರೋತೃಗಳು ಒಮ್ಮೆ ಬಾಯಿ ಚಪ್ಪರಿಸುವಂತೆ ಮಾಡಿದರು.

ಬಳಿಕ ಬೇಸಿಗೆ-ಬಿಸಿಗಾಳಿ ವಿಚಾರ ಪ್ರಸ್ತಾಪಿಸಿದ ಪ್ರಧಾನಿ, ದೇಶವಾಸಿಗಳು ಆರೋಗ್ಯದ ಕಡೆ ಗಮನ ಹರಿಸುವಂತೆ ಕರೆ ನೀಡಿದರು. ಬೇಸಿಗೆ ಅವಧಿಯಲ್ಲಿ ಪಂಜಾಬ್-ಹರಿಯಾಣದಲ್ಲಿ ದೊಡ್ಡ ಲೋಟಗಳಲ್ಲಿ ಆಮ್ ಪನ್ನಾ ಲಸ್ಸಿ ಸೇರಿದಂತೆ ಬಗೆಬಗೆಯ ಲಸ್ಸಿ ಸೇವಿಸುವುದನ್ನು ವಿವರಿಸಿದರು. ರಾಜಸ್ಥಾನ-ಗುಜರಾತ್‌ನಲ್ಲಿ ಮಜ್ಜಿಗೆ, ಬಿಹಾರ-ಜಾರ್ಖಂಡ್, ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಸತ್ತು ಷರಬತ್, ಕೊಂಕಣ-ಗೋವಾದಲ್ಲಿ ಕೋಕುಮ್ ಷರಬತ್, ಸೋಲ್ ಕಧಿ ಬಳಕೆ, ದಕ್ಷಿಣ ಭಾರತದಲ್ಲಿ ಪಾನಕ, ನೀರು ಮಜ್ಜಿಗೆ, ಸಾಂಬಾರಂ ಕುಡಿಯುವುದು, ಒಡಿಶಾದಲ್ಲಿ ಬೇಲಾ ಪನ್ನಾ ರೂಢಿಯ ಬಗ್ಗೆ ವಿವರ ನೀಡಿದರು.

→ 4

ಬಾಗೇಪಲ್ಲಿ ಬಳಿ ಭೀಕರ ಅಪಘಾತ: 6 ಮಂದಿ ಕಾರ್ಮಿಕರ ದುರ್ಮರಣ

ಬಾಗೇಪಲ್ಲಿ: ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಬಂದ ಥಾರ್ ಕಾರು, ಆಟೋ ಮತ್ತು ಕಂಟೈನರ್ ನಡುವೆ ನಡೆದ ಸರಣಿ ಅಪಘಾತದಲ್ಲಿ ಆರು ಮಂದಿ ಕೂಲಿ ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಗಂಗೋತ್ರಿ ಪೆಟ್ರೋಲ್ ಬಂಕ್ ಬಳಿ ಭಾನುವಾರ ಮಧ್ಯಾಹ್ನ ಈ ಈ ದುರ್ಘಟನೆ ನಡೆದಿದೆ. ಪ್ಯಾಸೆಂಜರ್ ಆಟೋ ಚಾಲಕ, ನಾಲ್ವರು ಮಹಿಳೆಯರು ಸೇರಿದಂತೆ ಆರು ಮಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಥಾರ್ ಕಾರಿನ ಚಾಲಕ ಸೇರಿ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಬಾಗೇಲ್ಲಿ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರನ್ನು ಉಮಾದೇವಿ (55), ವಿಜಯಾ (40), ಲಕ್ಷ್ಮಮ್ಮ (50), ಸರೋಜಮ್ಮ ಹಾಗೂ ಆಟೋ ಚಾಲಕ ಆಂಜಿನಪ್ಪ (35) ಎಂದು ಗುರುತಿಸಲಾಗಿದೆ. ಇವರೆಲ್ಲರೂ ಬಾಗೇಪಲ್ಲಿ ಪಟ್ಟಣದ ನಿವಾಸಿಗಳು.

ಘಟನೆಯಲ್ಲಿ ನಡೆದಿದ್ದೇನು?: ಮೃತರು ಕೃಷಿ ಕೂಲಿ ಕಾರ್ಮಿಕರಾಗಿದ್ದು ಕೆಲಸ ಮುಗಿಸಿಕೊಂಡು ಆಟೋದಲ್ಲಿ ತಮ್ಮ ಮನೆಗಳಿಗೆ ವಾಪಸ್ ಮರಳುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ನಡೆದಿದೆ. ಪೆರೇಸಂದ್ರದಿಂದ ಬಾಗೇಪಲ್ಲಿ ಕಡೆಗೆ ಪ್ರಯಾಣಿಕರನ್ನು ಹೊತ್ತು ಸಾಗುತ್ತಿದ್ದ ಆಟೋಗೆ, ಹಿಂಬದಿಯಿಂದ ಅತಿ ವೇಗವಾಗಿ ಬಂದ 'ಮಹೀಂದ್ರಾ ಥಾರ್' ಕಾರು ಬಲವಾಗಿ ಡಿಕ್ಕಿ ಹೊಡೆದಿದೆ.

→ 4

ಮಂತ್ರಾಲಯದಲ್ಲಿ ಐವರು ನೀರುಪಾಲು

ಮಂತ್ರಾಲಯ: ಇಲ್ಲಿನ ತುಂಗಭದ್ರಾ ನದಿಯಲ್ಲಿ ಕಾಲು ತೊಳೆಯುವ ವೇಳೆ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿಹೋಗುತ್ತಿದ್ದ ಬಾಲಕಿಯನ್ನು ರಕ್ಷಿಸಲು ನದಿಗೆ ಹಾರಿದ ಒಂದೇ ಕುಟುಂಬದ ಐವರು ಮುಳುಗಿ ಮೃತಪಟ್ಟಿರುವ ದುರ್ಘಟನೆ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ನಡೆದಿದೆ. ಮಂತ್ರಾಲಯದಲ್ಲಿ ಸಂಬಂಧಿಕರ ಮನೆಯಲ್ಲಿ ಏರ್ಪಡಿಸಿದ್ದ ಸತ್ಯನಾರಾಯಣ ಪೂಜೆಗೆ ಇವರು ಬಂದಿದ್ದರು. ಭಾನುವಾರ ಸಂಜೆ ಪೂಜೆಯ ಬಳಿಕ ನದಿಯತ್ತ ತೆರಳಿದ್ದ ವೇಳೆ ದುರ್ಘಟನೆ ನಡೆದಿದೆ.

ಸಮಾಚಾರ ಸಣ್ಣದಲ್ಲ

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಆಗ್ರಹ

ಯಲ್ಲಾಪುರ: ಪಂಚಾಯತ್ ವ್ಯವಸ್ಥೆಯಲ್ಲಿ ಚುನಾವಣೆ ಇಲ್ಲದೇ ಪ್ರಜಾಪ್ರಭುತ್ವ ನಿರ್ಜೀವವಾಗಿದೆ ಎಂದು ಸಂಕಲ್ಪ ಸಂಸ್ಥೆ ಅಧ್ಯಕ್ಷ ಪ್ರಮೋದ ಹೆಗಡೆ ಆಕ್ರೋಶ ವ್ಯಕ್ತಪಡಿಸಿದರು. ಈ ಕುರಿತು ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳ ಅಧಿಕಾರಾವಧಿ ಪೂರ್ಣಗೊಂಡ ನಂತರ ಚುನಾವಣೆ ನಡೆಸದೆ, ಆಡಳಿತಾಧಿಕಾರಿಗಳ ಕೈಗೆ ಅಧಿಕಾರ ನೀಡಿರುವುದು ಸಂವಿಧಾನದ ಉಲ್ಲಂಘನೆ ಯಾಗಿದೆ. ತಾ.ಪಂ, ಜಿ.ಪಂಗಳ ಚುನಾವಣೆ ನಡೆದಿಲ್ಲ. ಜನಪ್ರತಿನಿಧಿಗಳಿಲ್ಲದೆ ಅಧಿಕಾರಿಗಳ ದರ್ಬಾರ ನಡೆಯುತ್ತಿದ್ದು, ಪ್ರಜಾಪ್ರಭುತ್ವದ ಕತ್ತು ಹಿಚುಕಿದಂ ತಾಗಿದೆ ಎಂದರು. ಪಂಚಾಯತ ವ್ಯವಸ್ಥೆಯಲ್ಲಿ ಅನೇಕ ಸಮಸ್ಯೆಗಳಿದ್ದು, ಅವುಗಳನ್ನು ಪರಿಹರಿಸಲು ಸರಕಾರ ಗಂಭೀರವಾಗಿ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಯೋಜನಾ ಸಮಿತಿ ರಚನೆ ಮಾಡಬೇಕು. ದೂರದೃಷ್ಟಿ ಯೋಜನೆಯ ತರಬೇತಿ ಕಾರ್ಯರೂಪಕ್ಕೆ ಬರಬೇಕು. ಜವಾಬ್ದಾರಿ ನಕ್ಕೆ ಆಗಬೇಕು. ಶೇ.99 ರಷ್ಟು ಪಂಚಾಯಿತಿಗಳಲ್ಲಿ ಗೋಮಾಳ, ಎನ್.ಎ ಭೂಮಿ, ಗಾಂವಠಾಣಾ ಸ್ಥಳ ಇಲ್ಲ, ಹೆಚ್ಚಿನವು ಅರಣ್ಯ ಅತಿಕ್ರಮಣವಾಗಿರುವುದರಿಂದ ಇ-ಸ್ವತ್ತು ಜಾರಿಯಾ ಗುವುದೇ ಇಲ್ಲ. ಗಾಂವಠಾಣಾ ವಿಸ್ತಾರವಾಗದಿದ್ದರೆ 230 ಗ್ರಾಮ ಪಂಚಾಯಿತಿಗಳಿಗೆ ಸ್ಥಳವೇ ಇಲ್ಲ. ಉದ್ಯೋಗ ಖಾತರಿ, 15ನೇ ಹಣಕಾಸು ಮುಂತಾದ ಯೋಜನೆಗಳಲ್ಲಿಯೂ ಮೀಸಲಾತಿ ಇದ್ದರೆ ಕೆಲಸ ಮಾಡವುದು ಹೇಗೆ ಎಂದು ಪ್ರಶ್ನಿಸಿದ ಅವರು, ಇಂತಹ ಸಮಸ್ಯೆಗಳನ್ನು ಪರಿಹರಿಸದೇ ಹೋದಲ್ಲಿ ವಿಕೇಂದ್ರೀ ಕರಣ ವ್ಯವಸ್ಥೆಯೇ ಬುಡಮೇಲಾಗಲಿದೆ ಎಂದು ಎಚ್ಚರಿಸಿದರು.

ಡಾ.ಪರಮೇಶ್ವರ್‌ಗೆ ಡಿಸಿಎಂ ಸ್ಥಾನ ನೀಡಿ

ಬನವಾಸಿ: ದಲಿತ ನಾಯಕ ಡಾ.ಜಿ. ಪರಮೇಶ್ವರ್‌ಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲಿ ಎಂದು ಶಿರಸಿ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷೆ ಶ್ರೀಲತಾ

ಕಾಳೇರಮನೆ ಹಾಗೂ ದಲಿತ ಸಂಘರ್ಷ ಸಮಿತಿ ರಾಜ್ಯ ಪದಾಧಿಕಾರಿ ಬಿ.ಶಿವಾಜಿ ಸರಕಾರವನ್ನು ಒತ್ತಾಯಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಈ ರಾಜ್ಯದ ದಲಿತ ಸಮುದಾಯ ಹೆಚ್ಚು ಮತ ನೀಡಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲಾಗಿದೆ. ಕಾಂಗ್ರೆಸ್ಸಿನ ಹೈಕಮಾಂಡ್ ರಾಜ್ಯದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಒಬ್ಬರನ್ನು ಮುಖ್ಯಮಂತ್ರಿ ಮಾಡುವ ವಿಶ್ವಾಸ ನಮ್ಮಲ್ಲಿತ್ತು. ಆದರೆ ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುತ್ತಿರುವುದು ಸ್ವಾಗತರ್ಹ. ಆದರೆ ಪರಮೇಶ್ವರ್ ಅವರು ಹಿಂದೆ 8 ವರ್ಷಗಳ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಸಂಘಟಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಹೀಗಿರುವಾಗ ಪ್ರಾಮಾಣಿಕ ಮತ್ತು ಪಕ್ಷ ನಿಷ್ಠೆ ವ್ಯಕ್ತಿಯಾಗಿರುವ ಡಾಕ್ಟರ್ ಜಿ ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿ ಅವರಿಗೆ ಒಳ್ಳೆಯ ಖಾತೆ ನೀಡಿ ಈ ರಾಜ್ಯದ ದಲಿತರಿಗೆ ಮನ್ನಣೆ ನೀಡುವಂತೆ ಕೋರಿದ್ದಾರೆ. ಮುಂದಿನ ದಿನಗಳಲ್ಲಾದರೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಕರ್ನಾಟಕ ರಾಜ್ಯದ ದಲಿತ ಸಮುದಾಯಕ್ಕೆ ಸೇರಿರುವ ಒಬ್ಬರನ್ನಾದರೂ ಮುಖ್ಯಮಂತ್ರಿಗಳನ್ನಾಗಿ ಮಾಡಿ ಈ ರಾಜ್ಯದ ದಲಿತರನ್ನು ವಿಶ್ವಾಸಕ್ಕೆ ಕಾರಣರಾಗಬೇಕೆಂದು ಈ ಮೂಲಕ ಮನವಿ ಮಾಡಿದ್ದಾರೆ.

ಬೈಕ್ ಅಪಘಾತ: ಸವಾರ ಗಂಭೀರ ಗಾಯ

ಶಿರಸಿ: ತಾಲೂಕಿನ ನೀಡಗೋಡು ಬಳಿ ಅತಿ ವೇಗ ಹಾಗೂ ಅಜಾಗರೂಕತೆಯಿಂದ ಮೋಟಾರ್ ಸೈಕಲ್ ಚಾಲನೆ ಮಾಡಿ, ನಿಯಂತ್ರಣ ತಪ್ಪಿ ರಸ್ತೆ ಮೇಲೆ ಸ್ಕಿಡ್ ಆಗಿ ಬಿದ್ದ ಪರಿಣಾಮ ಸವಾರನಿಗೆ ಗಂಭೀರ ಗಾಯಗಳಾಗಿರುವ ಘಟನೆ ಶುಕ್ರವಾರ ಸಂಭವಿಸಿದೆ. ಈ ಅಪಘಾತಕ್ಕೆ ಸಂಬಂಧಿಸಿದಂತೆ ಮಂಜುನಾಥ್ ರಾಮಯ್ಯ ಶೆಟ್ಟಿ (50) ಅವರು ಶನಿವಾರ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಗೆ ಭಾವಿಸಿ ಅಧಿಕೃತ ದೂರು ನೀಡಿದ್ದಾರೆ. ಯಲ್ಲಾಪುರ ತಾಲೂಕಿನ ಹೆಮ್ಮಾಡಿ ಮೂಲದ, ಪ್ರಸ್ತುತ ಶಿರಸಿ ತಾಲೂಕಿನ ತಾರಗೋಡು ಗ್ರಾಮದ ಬಾಳಗಾರದಲ್ಲಿ ಕೂಲಿ ಕೆಲಸ ಮಾಡಿಕೊಂಡಿರುವ ದತ್ತಾತ್ರೇಯ ಗಣಪತಿ ಚಲುವಾದಿ (28) ಎಂಬಾತನೇ ಅಪಘಾತ ಮಾಡಿಕೊಂಡ ಮೋಟಾರ್ ಸೈಕಲ್ ಸವಾರ ಹಾಗೂ ಪ್ರಕರಣದ ಆರೋಪಿಯಾಗಿದ್ದಾನೆ. ದತ್ತಾತ್ರೇಯ ತನ್ನ ಮೋಟಾರ್ ಸೈಕಲ್ ಅನ್ನು ತಾರಗೋಡು ಕಡೆಯಿಂದ ಬೆಳಲೆ ಕಡೆಗೆ ಅತಿ ವೇಗ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದಿದ್ದಾನೆ. ವಾಹನವು ನೀಡಗೋಡು ಹತ್ತಿರ ತಲುಪಿದಾಗ ಬೈಕ್‌ನ ವೇಗವನ್ನು ನಿಯಂತ್ರಿಸಲು ಸಾಧ್ಯವಾಗದೇ ರಸ್ತೆ ಮೇಲೆಯೇ ಸ್ಕಿಡ್ ಆಗಿ ವಾಹನ ಸಮೇತ ಕೆಳಗೆ ಬಿದ್ದಿದ್ದಾನೆ. ಅಪಘಾತದ ತೀವ್ರತೆಗೆ ಸವಾರ ದತ್ತಾತ್ರೇಯನ ತಲೆಯ ಬಲಭಾಗಕ್ಕೆ ಬಲವಾದ ಹಾಗೂ ಗಂಭೀರ ಸ್ವರೂಪದ ಪೆಟ್ಟು ಬಿದ್ದಿದೆ. ಇದರೊಂದಿಗೆ ಆತನ ಬಲಗಾಲಿನ ಹೆಬ್ಬೆರಳು ಹಾಗೂ ಕಿರುಬೆರಳಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಈ ಸಂಬಂಧ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

{ಮಲ್ಲಿಕಾರ್ಜುನ ಖರ್ಗೆ} ಎಐಸಿಸಿ ಅಧ್ಯಕ್ಷ

ಡಿ.ಕೆ. ಶಿವಕುಮಾರ್‌ಅವರು ಮುಖ್ಯಮಂತ್ರಿಯಾದ ಮೇಲೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಹಜವಾಗಿಯೇ ಬದಲಾವಣೆಯಾಗಲಿದೆ. ಮುಖ್ಯಮಂತ್ರಿಯವರೊಂದಿಗೆ ಉತ್ತಮ ಸಮನ್ವಯತೆ ಹೊಂದಿರುವ ಹಾಗೂ ಸಾರ್ವಜನಿಕವಾಗಿ ದೊಡ್ಡ ಜನಬೆಂಬಲವಿರುವ ಸೂಕ್ತ ವ್ಯಕ್ತಿಯನ್ನೇ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು.

ಪರಿಪೂರ್ಣ ಕಲಾಪ್ರಕಾರ ಯಕ್ಷಗಾನ

ನವರಸ ಯಕ್ಷೋತ್ಸವ | ಕೆಕ್ಕಾರ ನಾಗರಾಜ ಭಟ್ಟ ಅಭಿಮತ

ಸಿದ್ದಾಪುರ: ಚಂಚಲವಾಗಿ ಓಡುವ ಮನುಷ್ಯನ ಮನಸ್ಸಿಗೆ ಒಂದು ಸುಂದರ ನಿಲುಗಡೆ ಹಾಗೂ ಸ್ಥಿರತೆ ಸಿಗಬೇಕಾದರೆ ಅದು ಕಲೆ ಮತ್ತು ಸಾಹಿತ್ಯದ ಆಶ್ರಯದಿಂದ ಮಾತ್ರ ಸಾಧ್ಯ. ಇಂದಿನ ಧಾವಂತದ ಬದುಕಿನಲ್ಲಿ ಮನಸ್ಸಿಗೆ ನೈಜ ಆನಂದವನ್ನು ನೀಡುವ ಕಲೆಯು ಅತ್ಯಂತ ಅಮೂಲ್ಯವಾದ ಆಸ್ತಿಯಾಗಿದ್ದು, ಇದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಭಾರತ ಸೇವಾದಳದ ತಾಲೂಕಾ ಅಧ್ಯಕ್ಷರಾದ ಕೆಕ್ಕಾರ ನಾಗರಾಜ ಭಟ್ಟ ಅಭಿಪ್ರಾಯಪಟ್ಟರು.

ತಾಲೂಕಿನ ಇಟಗಿಯ ಕಲಾಭಾಸ್ಕರ ಸಂಘಟನೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯದೊಂದಿಗೆ ಬಿದ್ರಕಾನ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ವೈಭವದ 'ನವರಸ ಯಕ್ಷೋತ್ಸವ'ದ ಎರಡನೇ ದಿನದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯಕ್ಷಗಾನವು ಕೇವಲ ಒಂದು ಪ್ರದರ್ಶನ ವಲ್ಲ, ಅದು ಕಲೆ ಹಾಗೂ ಸಾಹಿತ್ಯಗಳ ಅದ್ಭುತ ಸಮ್ಮಿಳಿತವಾಗಿ ಮೂಡಿಬಂದಿರುವ ಪರಿಪೂರ್ಣ ಕಲಾಪ್ರಕಾರವಾಗಿದೆ. ನಟನೆ, ನರ್ತನ, ಆಕರ್ಷಕ ವೇಷಭೂಷಣ, ಸಂಗೀತ, ಗಾಯನ, ವಾಕ್ಚತುರ್ತ್ವ ಹಾಗೂ ಹಿಮ್ಮೇಳದ ಗತ್ತು ಸೇರಿದಂತೆ ಯಕ್ಷಗಾನವು ನವರಸಭರಿತ ಕಲೆಗಳ ಅದ್ಭುತ ಸಂಗಮವಾಗಿದೆ. ಈ ಕಾರಣದಿಂದಲೇ ಇದು ನಾಡಿನ ಅತ್ಯಂತ ಪ್ರಬುದ್ಧ ಕಲೆಯಾಗಿ ಗುರುತಿಸಿಕೊಂಡಿದೆ. ಅದರಲ್ಲೂ ಯಕ್ಷಗಾನ ಕ್ಷೇತ್ರಕ್ಕೆ ಸಿದ್ದಾಪುರ ತಾಲೂಕಿನ ಕೊಡುಗೆ ಅತ್ಯಂತ ಅನನ್ಯ ಮತ್ತು ಸ್ಮರಣೀಯ ಎಂದು ಬಣ್ಣಿಸಿದರು.

'ನವರಸ ಯಕ್ಷೋತ್ಸವ'ದಲ್ಲಿ ಭಾರತ ಸೇವಾದಳದ ತಾಲೂಕಾ ಅಧ್ಯಕ್ಷರಾದ ಕೆಕ್ಕಾರ ನಾಗರಾಜ ಭಟ್ಟ ಮಾತನಾಡಿದರು. ಬಿದ್ರಕಾನ ಸೊಸೈಟಿಯ ಉಪಾಧ್ಯಕ್ಷ ಪ್ರಕಾಶ ಹೆಗಡೆ ಮುತ್ತಿಗೆ, ಸಾಮಾಜಿಕ ಕಾರ್ಯಕರ್ತ ಸುಧೀರ ಗೌಡರ್ ಹೆಗ್ಗೋಡಮನೆ, ಜಿ.ಟಿ.ಹೆಗಡೆ ಹಳದೋಟ ಇದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಿದ್ರಕಾನ ಸೊಸೈಟಿಯ ಉಪಾಧ್ಯಕ್ಷ ಪ್ರಕಾಶ ಹೆಗಡೆ ಮುತ್ತಿಗೆ ಅವರು ಸಾಂಸ್ಕೃತಿಕ ಚಟುವಟಿಕೆಗಳ ನಿರಂತರತೆಗೆ ಒತ್ತು ನೀಡಿದರು. ಸಾಮಾಜಿಕ ಕಾರ್ಯಕರ್ತ ಸುಧೀರ ಗೌಡರ್ ಹೆಗ್ಗೋಡಮನೆ ಮತ್ತು ಬಿದ್ರ ಕಾನ ಸೊಸೈಟಿಯ ಮಾಜಿ ಅಧ್ಯಕ್ಷ ಜಿ.ಟಿ.ಹೆಗಡೆ ಹಳದೋಟ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಜಾಗೃತಿ ಮೂಡಿಸುತ್ತಿರುವ ಕಲಾಭಾಸ್ಕರದಂತಹ ಶ್ರೇಷ್ಠ ಕಲಾಸಂಘಟನೆಗೆ ತನು-ಮನ-ಧನಗಳಿಂದ ತ್ರಿಕರಣಪೂರ್ವಕವಾಗಿ ನೆರವು ನೀಡಲು ಕಲಾಭಿಮಾನಿಗಳು ಸದಾ ಮುಂಚೂಣಿಯಲ್ಲಿರಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಕಲಾಭಾಸ್ಕರ ಸಂಘಟನೆಯ ಅಧ್ಯಕ್ಷರಾದ ಇಟಗಿ ಮಹಾಬಲೇಶ್ವರ ಭಟ್ಟ ಅವರು ಸ್ವಾಗತಿಸಿದರು. ಸಂಘಟನೆಯ ಕಾರ್ಯದರ್ಶಿ ವಿನಾಯಕ ಹೆಗಡೆ ಕವಲಕೊಪ್ಪ ಅವರು ನಿರ್ವಹಿಸಿ, ವಂದನಾರ್ಪಣೆ ಮಾಡಿದರು.

ನಿವೃತ್ತ ಶಿಕ್ಷಕಗೆ ಆತ್ಮೀಯ ಬೀಳ್ಕೊಡುಗೆ

ಯಲ್ಲಾಪುರ: ತಾಲೂಕಿನ ಹುತ್ಕಂಡದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಾಧ್ಯಾಪಕರಾಗಿ ಸೇವಾ ನಿವೃತ್ತಿ ಹೊಂದಿದ ಸತೀಶ ಪಿ ಶೆಟ್ಟಿ ಅವರನ್ನು ಎಸ್.ಡಿ.ಎಂ.ಸಿ ಮತ್ತು ಶಿಕ್ಷಕರು ಸನ್ಮಾನಿಸಿ ಬಿಳ್ಕೊಟ್ಟರು.

ಕಾರ್ಯಕ್ರಮವನ್ನು ಶಿಕ್ಷಣ ಸಂಯೋಜಕ ಸುಧಾಕರ ನಾಯಕ ಉದ್ಘಾಟಿಸಿ ಈ ವೃತ್ತಿಯಲ್ಲಿ ಸಿಗುವ ತೃಪ್ತಿ ಬೇರೆಲ್ಲಿ ಸಿಗದು. ನಿವೃತ್ತಿ ಹೊಂದಿದ ಸತೀಶ ಶೆಟ್ಟಿ ಸಮೂಹದೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಶಾಲೆಯ ಶೈಕ್ಷಣಿಕ, ಬೌತಿಕ ಪ್ರಗತಿಯಲ್ಲಿ ಉತ್ತಮ ಕಾರ್ಯವೆಸೆಗಿದ್ದಾರೆ. ಎಸ್‌ಡಿಎಮ್‌ಸಿ ಅಧ್ಯಕ್ಷರು ಮುಖ್ಯಾಧ್ಯಾಪಕರು ಸೇರಿ ಶಾಲೆಯನ್ನು ಸುಂದರವಾಗಿಸಿದ್ದಾರೆ ಎಂದರು. ಸಾಧನೆ ಪತ್ರಿಕೆಯನ್ನು ಬಿಡುಗಡೆಗೊಳಿಸಿದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಆರ್. ಎಸ್.ಭಟ್ಟ ಮಾತನಾಡಿ, ಶಾಲೆಯ ಹೆಸರನ್ನು ಬೆಳಕಿಗೆ ತರುವಲ್ಲಿ ಶೆಟ್ಟಿಯವರ ಪಾತ್ರವಿದೆ. ಅವರ ಕಾಳಜಿ ಮೆಚ್ಚುವಂಥದ್ದು ಎಂದರು.

ನಿವೃತ್ತಿಗೊಂಡ ಸತೀಶ ಶೆಟ್ಟಿಯವರನ್ನು ಅಭಿನಂದಿಸಿ ಶಿಕ್ಷಕಿ ವಿಜಯಲಕ್ಷ್ಮೀ ಭಟ್ಟ, ಸಿ.ಆರ್.ಪಿ ದೀಪಾ ಶೆಟ್, ನೌಕರ ಸಂಘದ ಅಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ, ಹಾಗೂ ಭಾಗ್ಯಶ್ರೀ ಶೆಟ್ಟಿ ಮಾತನಾಡಿದರು. ಸತೀಶ ಶೆಟ್ಟಿ ದಂಪತಿಗಳನ್ನು ಶಾಲಾ ಎಸ್.ಡಿ.ಎಂ.ಸಿ ವತಿಯಿಂದ ಸನ್ಮಾನಿಸಿ ಬಿಳ್ಕೊಡಲಾಯಿತು. ವಿವಿಧ ಶಾಲೆಗಳಿಂದ ಆಗಮಿಸಿದ ಮುಖ್ಯಾಧ್ಯಾಪಕರು ಗಳು, ಶಿಕ್ಷಕರು, ವಿವಿಧ ಸಂಘ ಸಂಸ್ಥೆಗಳವರು ಅಭಿನಂದಿಸಿದರು. ನಿವೃತ್ತಿ ಹೊಂದಿ ಬೀಳ್ಕೊಡಲ್ಪಟ್ಟ ಸತೀಶ ಶೆಟ್ಟಿ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿನ ನನ್ನ ಸೇವೆ ನನಗೆ ಸಾರ್ಥಕತೆ ಎನಿಸಿದೆ. ಎಲ್ಲರ ಸಹಕಾರದಿಂದ ಉತ್ತಮ ಹೆಸರು ಪಡೆಯಲು ಸಾಧ್ಯವಾಗಿದೆ ಎಂದರು.

ಅವರು ಇದೇ ಸಂದರ್ಭದಲ್ಲಿ ಶಾಲೆ 12 ಖುರ್ಚಿಗಳನ್ನು ಕೊಡುಗೆಯಾಗಿ ನೀಡಿದರು. ಸಿ.ಆರ್.ಪಿ ಕೆ.ಆರ್.ನಾಯ್ಕ್, ವಿಷ್ಣು ಭಟ್ಟ, ಹಾಗೂ ನಾಗೇಶ ಅಂಬುಳ್ಳಿ, ಸಂಧ್ಯಾ ಸತೀಶ ಶೆಟ್ಟಿ, ಶಾಲಿನಿ ಶೆಟ್, ಪಿಡಿಓ ಮಹೇಶ ಗಾವಡೆ, ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ಗೀತಾ ಭಟ್ಟ, ನೌಕರ ಸಂಘದ ಸತೀಶ ನಾಯ್ಕ್, ಸಂತೋಷ ನಾಯ್ಕ್, ವಿಶಾಲ್ ನಾಯ್ಕ್, ನಿವೃತ್ತ ಶಿಕ್ಷಕ ಎಸ್.ಬಿ.ನಾಯ್ಕ್, ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ನರಸಿಂಹ ಸಾತೊಡ್ಡಿ ಅಧ್ಯಕ್ಷತೆ ವಹಿಸಿ ನಿವೃತ್ತರು ಮುಂದಿನ ಬದುಕಿನಲ್ಲಿ ಉತ್ತಮ ಕಾರ್ಯದಲ್ಲಿ ಮುನ್ನಡೆಯಲಿ ಎಂದು ಹಾರೈಸಿದರು. ನವ್ಯಾ ಪ್ರಾರ್ಥಿಸಿದರು. ಸಹಶಿಕ್ಷಕಿ ಶಾಲಿನಿ ನಾಯಕ ಸ್ವಾಗತಿಸಿ ದರು. ಮಳಲಗಾಂವ್ ಮುಖ್ಯಶಿಕ್ಷಕ ರಾಘವೇಂದ್ರ ನಿರ್ವಹಿಸಿ ವಂದಿಸಿದರು. ಬಿಇಓ ರೇಖಾ ನಾಯ್ಕ್ ಶಾಲೆಗೆ ಭೇಟಿ ನೀಡಿ ನಿವೃತ್ತರನ್ನು ಅಭಿನಂದಿಸಿದರು.

ಮಾತೃ ವಂದನ ಕಾರ್ಯಕ್ರಮ | ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಆಯೋಜನೆ

ಅಮ್ಮಂದಿರ ಯೋಗಕ್ಷೇಮದ ಕಡೆ ಮಕ್ಕಳು ಗಮನ ನೀಡಲಿ

ಶಿರಸಿ: ಪ್ರಸ್ತುತ ಕಾಲಘಟ್ಟದಲ್ಲಿ ಸನಾತನ ಸಂಸ್ಕೃತಿಯ ಜೀವನ ಪದ್ಧತಿಯನ್ನು ಮುಂದುವರಿಸಲು ಮಾತೃ ಪೂಜನದಂತಹ ಕಾರ್ಯಕ್ರಮಗಳು ಅತ್ಯಂತ ಸಹಕಾರಿಯಾಗಿದೆ ಎಂದು ಕೊಳಗಿಬೀಸ್ ಕಾಲೇಜಿನ ಪ್ರಾಂಶುಪಾಲ ನಾಗಪತಿ ಭಟ್ಟ ಅಭಿಪ್ರಾಯಪಟ್ಟರು.

ಅವರು ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ, ಶಿರಸಿಯ ಮರಾಠಿಕೊಪ್ಪದ ಅಂಜನಾದ್ರಿ, ಶಾಖೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಅತ್ಯಂತ ಭಾವನಾತ್ಮಕ 'ಮಾತೃ ಪೂಜನ, ಮಾತೃ ವಂದನ, ಮಾತೃ ಧ್ಯಾನ ಹಾಗೂ ಮಾತೃ ಭೋಜನ' ಕಾರ್ಯಕ್ರಮದಲ್ಲಿ ಮುಖ್ಯ ಅಭ್ಯಾಗತರಾಗಿ ಪಾಲ್ಗೊಂಡು ಮಾತನಾಡಿದರು.

ಮರಾಠಿಕೊಪ್ಪದ ಅಂಜನಾದ್ರಿ, ಶಾಖೆಯಲ್ಲಿ ಒಂದು ವರ್ಷದ ಉಚಿತ ಯೋಗ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ ಅಂಗವಾಗಿ ಈ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತಾಯಿಯ ಮಹತ್ವವನ್ನು ಕೊಂಡಾಡಿದ ಮುಖ್ಯ ಅತಿಥಿಗಳು, ನಾವು ಈ ಜಗತ್ತಿಗೆ ಬರಲು ನಮ್ಮ ತಾಯಿಯೇ ಕಾರಣ. ಅವಳ ಪ್ರೀತಿ ಮತ್ತು ತ್ಯಾಗದ ಜೀವನ ಅನನ್ಯವಾದದ್ದು. ಬಾಲ್ಯದಲ್ಲಿ ತಾಯಿಯ ಮಡಿಲ ಪ್ರಪಂಚದಲ್ಲಿ ಬೆಳೆದ ನಾವು, ನಂತರದ ದಿನಗಳಲ್ಲಿ ಜೀವನದ ಓಟದಲ್ಲಿ ಅವಳಿಂದ ದೂರವಾಗುತ್ತಿದ್ದೇವೆ. ಕೇವಲ ದೂರವಾಣಿ ಮೂಲಕ ಅವಳ ಯೋಗಕ್ಷೇಮವನ್ನು ವಿಚಾರಿಸುವ ಸ್ಥಿತಿ ಇಂದು ನಿರ್ಮಾಣವಾಗಿದೆ. ತಾಯಿಯ ಕೊನೆಯ ಕಾಲದಲ್ಲಿ ಅವಳ ಮನದಾಳದ ಮಾತುಗಳನ್ನು ಆಲಿಸುವ ತಾಳ್ಮೆ ಮತ್ತು ಸಮಯ ಇಂದು ನಮ್ಮಲ್ಲಿ ಇಲ್ಲದಿರುವುದು ವಿಷಾದನೀಯ ಎಂದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ಅಂಜನಾದ್ರಿ, ಶಾಖೆಯ ಯೋಗಬಂಧು ಕುಮುದ ಅವರು, ನಿತ್ಯ ಜೀವನದ ಜಂಜಾಟದಲ್ಲಿ ನಮ್ಮ ತಾಯಿಯ ತ್ಯಾಗ ಮರೆಯಾಗುತ್ತಿದೆ. ಇಂತಹ ಕಾರ್ಯಕ್ರಮಗಳು ಅವಳ ಅನನ್ಯ ನೆನಪನ್ನು ಹಸಿರಾಗಿಸುವ ಸುಂದರ ಸ್ಮರಣೆಯಾಗಿದೆ ಎಂದು ಹೇಳಿದರು.

ಶಿಕ್ಷಕ ಗಜಾನನ ಭಟ್ಟ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಕಾರ, ಸಂಘಟನೆ ಹಾಗೂ ಸೇವೆ ಎಂಬ ಧ್ಯೇಯೋದ್ದೇಶದೊಂದಿಗೆ ಸ್ಥಾಪಿತವಾದ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಮೂಲ ಉದ್ದೇಶವನ್ನು ವಿವರಿಸಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಉಚಿತವಾಗಿ ಯೋಗ ಶಿಕ್ಷಣ ತಲುಪಬೇಕು ಎಂದ ಅವರು, ಇಂದಿನ ಆಧುನಿಕ ಜೀವನದಲ್ಲಿ ಯೋಗದ ಮಹತ್ವವನ್ನು ತಿಳಿಸಿಕೊಟ್ಟರು.

ಅಷ್ಟನಮಸ್ಕಾರಗಳ ಮೂಲಕ ಯೋಗ ಶಿಕ್ಷಣ ನೀಡುತ್ತಿರುವ ಸಮಿತಿಯ ಗುರುಹಿರಿಯರನ್ನು ಸ್ಮರಿಸಿದ ಅವರು, ನಾವು ಪಡೆದಿರುವ ಈ ಯೋಗ ಶಿಕ್ಷಣವನ್ನು ಉಳಿದ ವರಿಗೂ ಪರಿಚಯಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಹಣತೆಯ ಬೆಳಕಿನಲ್ಲಿ ಮಾತೃ ಧ್ಯಾನ: ಕಾರ್ಯಕ್ರಮದ ಉತ್ತರಾರ್ಧದಲ್ಲಿ ಹಣತೆಯ ಬೆಳಕಿನಲ್ಲಿ ತಾಯಿಯ ಧ್ಯಾನವನ್ನು ನೆರವೇರಿಸಲಾಯಿತು. ನೆರೆದಿದ್ದ ಯೋಗಬಂಧುಗಳು ತಮ್ಮ ತಾಯಂದಿರ ಪಾದಪೂಜೆ ಮಾಡಿ ಆಶೀರ್ವಾದ ಪಡೆದರು. ತಾಯಂದಿರಿಂದ ಕೈತುತ್ತಿನ ಭೋಜನವನ್ನು ಸವಿದು ಧನ್ಯತೆ ಅನುಭವಿಸಿದರು. ಇದಕ್ಕೂ ಮುನ್ನ ಪವಿತ್ರ ಅಗ್ನಿಹೋತ್ರದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಹಳೆಯ ದೇಶಿ ಆಟಗಳನ್ನು ಆಡುವ ಮೂಲಕ ಎಲ್ಲರೂ ತಮ್ಮ ಬಾಲ್ಯದ ಮಧುರ ಕ್ಷಣಗಳನ್ನು ನೆನಪಿಸಿಕೊಂಡರು.

ಸಾವಿತ್ರಿ ಭಟ್ಟ ಪ್ರಾರ್ಥಿಸಿದರು. ಜ್ಯೋತಿ ಯೋಗ ತರಗತಿಯ ವಾರ್ಷಿಕ ವರದಿ ವಾಚಿಸಿದರು. ಯೋಗಬಂಧುಗಳು ತರಗತಿಯ ತಮ್ಮ ಅನಿಸಿಕೆ ಹಾಗೂ ಅನುಭವಗಳನ್ನು ಹಂಚಿಕೊಂಡರು. ರೇಷ್ಮಾ ಸ್ವಾಗತಿಸಿದರು, ದೀಪಾ ವಂದಿಸಿದರು. ಗಾಯತ್ರಿ ಭಟ್ಟ ನಿರೂಪಿಸಿದರು. ಈ ಅಪೂರ್ವ ಸಮಾರಂಭದಲ್ಲಿ 70 ಯೋಗಬಂಧುಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.

ದೇಗುಲದ ಸೋರಿಕೆಗೆ ನಿಲ್ಲಿಸಿ

ಬನವಾಸಿ: ಕನ್ನಡ ನಾಡಿನ ಪ್ರಥಮ ರಾಜಧಾನಿ ಎಂಬ ಮಹಾ ಹೆಗ್ಗಳಿಕೆಗೆ ಭಾಜನವಾಗಿರುವ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಮಳೆಗಾಲ ಬಂತೆಂದರೆ ಸೋರಿಕೆ ಪ್ರಾರಂಭವಾಗಿ ಸುಮಾರು ಹನ್ನೆರೆಡು ವರ್ಷಗಳೇ ಸಂದಿವೆ. ಪ್ರತಿ ವರ್ಷ ಮಳೆಗಾಲ ಆರಂಭವಾದೊಡನೆ ದೇವಾಲಯ ಸೋರುತ್ತಿದೆ ಸರಿ, ದುರಸ್ತಿ ಮಾಡಿ

ಕೊಡಿ ಎಂದು ಪ್ರಾಚ್ಯ ಇಲಾಖೆಗೆ ಕೋರಿಕೆ ಮಾಡುವುದು ವಾಡಿಕೆ ಎಂಬಂತಾಗಿ ಬಿಟ್ಟಿದೆ. ಇಲಾಖೆಯ ಪ್ರತಿನಿಧಿಗಳು ಬರುತ್ತಾರೆ, ಕೆಲವೊಂದಿಷ್ಟು ಕೆಲಸವೂ ಆಗಿದೆ ಆದರೆ ಸೋರಿಕೆ ನಿಲ್ಲುವಿಕೆಗೆ ಶಾಶ್ವತ ಪರಿಹಾರ ಇಲ್ಲವೇಕೆ ಎಂದು ದೆಹಲಿ ನೇಷನಲ್ ಕಮಿಟಿ ಸದಸ್ಯ, ಖ್ಯಾತ ಇತಿಹಾಸಕಾರ ಡಾ.ಲಕ್ಷ್ಮೀಶ ಹೆಗಡೆ ಸೋಂದಾ ಪ್ರಶ್ನಿಸಿದ್ದಾರೆ. ಈ ಕುರಿತು ಬನವಾಸಿ ನೂತನ ತಾಲೂಕು ರಚನಾ ಹೋರಾಟ ಸಮಿತಿ, ಸ್ಥಳೀಯ ಸಂಘಟನೆಗಳು ಗಟ್ಟಿ ಧ್ವನಿ ಎತ್ತುತ್ತಿದ್ದಾರೆ. ಇಲಾಖೆಯ ಅಧಿಕಾರಿಗಳು ಬಂದು ಹೋಗಿದ್ದಾರೆ ಎಂಬ ಮಾಹಿತಿಯೂ ದೊರಕಿದೆ. ಆದರೆ ಶಾಶ್ವತ ಪರಿಹಾರ ಇದೇ ವರ್ಷ ಆಗಬೇಕಿದೆ. ತಾತ್ಕಾಲಿಕವಾಗಿ ಒಂದಿಷ್ಟು ಕೆಲಸಮಾಡಿ ಮುಂದಿನ ವರ್ಷ ಮಳೆಗಾಲ ಬಂತೆಂದರೆ ಮತ್ತೆ ಇಲಾಖೆಗೆ ಬೇಡುವ ಪರಿಸ್ಥಿತಿ ಬೇಕಿಲ್ಲ, ಇದು ಇಲಾಖೆಯ ಕರ್ತವ್ಯ. ಅದನ್ನು ಮಾಡಲೇಬೇಕಿದೆ. ಮುಖ್ಯವಗಿ ಮಧುಕೇಶ್ವರ ದೇವಾಲಯದ ಗರ್ಭಗುಡಿ, ಸಂಕಲ್ಪ ಮಂಟಪ, ಸಭಾಮಂಟಪ, ಸೋದೆ ಸದಾಶಿವರಾಯ ನೀಡಿದ ತ್ರೈಲೋಕ್ಯ ಮಂಟಪದ ಸಮೀಪ, ನೃತ್ಯ ಮಂಟಪ, ಹಾಗೆಯೇ, ದೇಗುಲದ ಕಂಬಗಳ ಸಂದಿಯಲ್ಲೆಲ್ಲ ಈ ಸೋರಿಕೆ, ಪಾರ್ವತಿ ಗುಡಿ, ನರಸಿಂಹ ದೇವಸ್ಥಾನ ಇಲ್ಲೆಲ್ಲ ಸೋರಿಕೆ ಅಧಿಕವಾಗಿದೆ. ಮಧುಕೇಶ್ವರ ದೇವಾಲಯ ಕೇವಲ ಉತ್ತರ ಕನ್ನಡ ಮಾತ್ರವಲ್ಲದೇ ಇಡೀ ಕರ್ನಾಟಕದ ಹೆಮ್ಮೆ ಮತ್ತು ಅಪರೂಪದ ವಾಸ್ತುಶಿಲ್ಪದ ದೇವಾಲಯ. ಈ ದೇವಾಲಯ ಕದಂಬರ ಕಾಲದಿಂದ ಹಿಡಿದು ಸೋದೆ ಅರಸರ ಕಾಲದವರೆಗೂ ವಾಸ್ತುಶಿಲ್ಪೀಯವಾಗಿ ವಿಕಸನ ಮತ್ತು ಜೀರ್ಣೋದ್ಧಾರಗೊಂಡಿದೆ. ಬಹಳ ಮುಖ್ಯವಾಗಿ ಕದಂಬರ ಅಸ್ಮಿತೆ ಕೂಡ ಹೌದು. ಇದನ್ನು ಸರಿಯಾಗಿ ಕಾಪಾಡಿಕೊಳ್ಳುವುದು ಪ್ರಜ್ಞಾವಂತ ಸಮಾಜಿಕರ ಆದ್ಯತೆ. ಇದನ್ನು ಗಮನದಲ್ಲಿರಿಸಿಕೊಂಡು ಆದಷ್ಟು ಶೀಘ್ರ ಪ್ರಾಚ್ಯ ಇಲಾಖೆಯವರು ದೇವಾಲಯದ ಸೋರಿಕೆಯನ್ನು ಶಾಶ್ವತವಾಗಿ ನಿಲ್ಲುವಂತೆ ಕ್ರಮಕೈಗೊಳ್ಳಬೇಕಿದೆ. ಕೈಗೊಳ್ಳುತ್ತಾರೆ ಎಂಬ ಆಶಯವಿದೆ.

ಸೇನಾಪಡೆ ಸೇವೆಗೆ ತರಬೇತಿ: ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಕಾರವಾರ: ಭಾರತೀಯ ಸೇನೆ ಹಾಗೂ ಇತರೆ ಯೂನಿಫಾರ್ಮ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ಪ್ರಸಕ್ತ ಸಾಲಿನ 1ನೇ ತಂಡದ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು (ಬಾಲಕರಿಗೆ ಮಾತ್ರ), ಅರ್ಜಿ ಸಲ್ಲಿಸಲು ಜೂ.15 ವರೆಗೆ ಅವಧಿ ವಿಸ್ತರಿಸಲಾಗಿದೆ.

ಅರ್ಹತೆಗಳು: ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಠ ವಾರ್ಷಿಕ ಆದಾಯ ಮಿತಿ, ಅಭ್ಯರ್ಥಿಯು 10ನೇ ತರಗತಿಯನ್ನು ಉತ್ತೀರ್ಣವಾಗಿದ್ದು, ಪ್ರತಿ ವಿಷಯದಲ್ಲಿ ಕನಿಷ್ಠ 33 ಅಂಕಗಳು ಮತ್ತು ಸರಾಸರಿ ಶೇ.45 ರಷ್ಟು ಅಂಕಗಳನ್ನು ಪಡೆದಿರಬೇಕು. ಗ್ರೇಡಿಂಗ್ ಸಿಸ್ಟಮ್ ಇದ್ದಲ್ಲಿ ಮೇಲ್ಕಂಡಂತೆ ಸಮಾನವಾದ ಗ್ರೇಡ್ ಪಡೆದಿರಬೇಕು.

ಜನ್ಮ ದಿನಾಂಕ ಮತ್ತು ವಯಸ್ಸು 28-05 -2026 ಕ್ಕೆ ಅನ್ವಯಿಸುವಂತೆ ಅಭ್ಯರ್ಥಿಯ ವಯ ಸ್ಸನ್ನು ಪರಿಗಣಿಸಲಾಗುವುದು. ಅಭ್ಯರ್ಥಿಯು 28-05-2006 ರಿಂದ 28-05-2009ರ ನಡುವಿನ ಅವಧಿಯಲ್ಲಿ ಜನಿಸಿರಬೇಕು. ಅಭ್ಯರ್ಥಿಗಳ ವಯೋಮಿತಿ 17 ರಿಂದ 20 ವರ್ಷದೊಳಗಿಬೇಕು. ತರಬೇತಿಯನ್ನು ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ ಕಾರವಾರ ಇಲ್ಲಿ ನೀಡಲಾಗುವುದು. ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ, ನೆಲಮಹಡಿ, ಕೊಠಡಿ ಸಂಖ್ಯೆ: 1 ರಲ್ಲಿರುವ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಇಲ್ಲಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದೆ.

ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಜಿಲ್ಲಾ/ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಡೆದು, ಭರ್ತಿ ಮಾಡಿ ನೋಂದಾ ಯಿತ ಅಂಚೆಯ ಮುಖಾಂತರ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :08382 -226588 ಕಚೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಮಧಾರಿ ಸಮಾಜದ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸಮಾಜದ ಮಕ್ಕಳ ಪ್ರತಿಭೆ ಗುರುತಿಸಲು ವೇದಿಕೆಯಾಗಲಿ

ಸಿದ್ದಾಪುರ: ಸಮಾಜ ಸಂಘಟನೆಯನ್ನು ಸಂಕುಚಿತ ಮನೋಭಾವನೆ ಹೊಂದದೆ ವಿಶಾಲ ಮನೋಭಾವದಿಂದ ಸಮಾಜದ ಅಭಿವೃದ್ಧಿ ದಿಸೆಯಲ್ಲಿ ಸಮಾಜದ ಆಂತರಿಕ ಸಮಸ್ಯೆಗಳ ಬಗೆಹರಿಸುವಿಕೆಗೆ ಹಾಗೂ ಪ್ರತಿಭೆ ಗುರುತಿಸಲು ವೇದಿಕೆ ಆಗಬೇಕು ಎಂದು ಸಾಮಾಜಿಕ ಹೋರಾಟಗಾರ ರವೀಂದ್ರ ನಾಯ್ಕ ಹೇಳಿದರು.

ಸಿದ್ದಾಪುರ ತಾಲೂಕಿನ ತಂಡಾಗುಂಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಂಕಾರ ಗ್ರಾಮದಲ್ಲಿ ಜರುಗಿದ ಶ್ರೀ ವೆಂಕಟನಾರಾಯಣ ಆರ್ಯ ಈಡಿಗ, ಬಿಲ್ಲವ, ಪೂಜಾರಿ, ನಾಮಧಾರಿ ಸಮಾಜ ಸಂಘದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಮಾಜದಲ್ಲಿ ವಂಚಿತರಾದ ಸದಸ್ಯರಿಗೆ ಧ್ವನಿಯಾಗಿ ಹಕ್ಕುಗಳ ರಕ್ಷಣೆ ಮತ್ತು ಸಾಮಾಜಿಕವಾಗಿ ಸಮುದಾಯ ಬಲಪಡಿಸಲು ಸಂಘಟನೆಯು ಕಾರ್ಯ ಪ್ರವರ್ತರಾಗಬೇಕು. ಅಲ್ಲದೇ, ತಲತಲಾಂತರದಿಂದ ಸಾಂಸ್ಕೃತಿಕ ಉಳುವಿಗಾಗಿ ಸಂಘಟನೆ ಶ್ರಮಿಸುವ ಅಗತ್ಯತೆಯನ್ನು ಅವರು ತಿಳಿಸಿದರು.

ಮಾನವನ ಹುಟ್ಟಿನಿಂದ ಸಾವಿನವರೆಗೂ ಸಂಪ್ರದಾಯ ಮತ್ತು ಸಂಸ್ಕೃತಿ ಗುರುತಿಸುವಿಕೆಗೆ ಭದ್ದನಾಗಿರುತ್ತಾನೆ. ಪ್ರಭುದ್ದವಾದ ಮಾನವ ಶಿಕ್ಷಣದಿಂದ ಸ್ವತಂತ್ರವಾಗಿ, ಸಂಘಟನೆಯಿಂದ ಬಲಯುತರಾಗುವ ಸಿದ್ಧಾಂತವನ್ನ ಎಲ್ಲಾ ಜಾತಿಗಳು ಅಳವಡಿಸಿಕೊಳ್ಳಬೇಕೆಂದು ಅವರು ಹೇಳಿದರು.

ಟಿ.ವಿ. ಮತ್ತು ಮೊಬೈಲ್‌ಗಳನ್ನ ಶಿಕ್ಷಣ ಪೂರಕ ಚಟುವಟಿಕೆಗೆ ಮಾತ್ರ ಮಕ್ಕಳಿಗೆ ನೀಡಬೇಕು. ಸಮಾಜದಲ್ಲಿನ ದುಶ್ಚಟದ ವಿರುದ್ಧ ಜಾಗೃತಿ ಮೂಡಿಸುವುಸುದು, ಸಂಘಟನೆಯ ಪ್ರಮುಖ ಕಾರ್ಯ. ಮಕ್ಕಳಲ್ಲಿ ಶಿಕ್ಷಣ ಬದುಕಿನ ಯಶಸ್ಸಿನ ಗುಟ್ಟು ಎಂದು ಹೇಳುತ್ತಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಇಂದಿನ ಸಂಘಟನೆಯ ಪ್ರಮುಖ ಕಾರ್ಯವಾಗಬೇಕು ಎಂದು ಶಿಕ್ಷಕ ಕೆ.ಜಿ. ನಾಯ್ಕ ನೇರ್ಲಮನೆ ಅವರು ಹೇಳಿದರು.

ಯುವಕರಿಗೆ ಶಿಕ್ಷಣದ ಜ್ಞಾನ ವೃದ್ದಿಸಬೇಕು, ಶಿಕ್ಷಣದೊಂದಿಗೆ ಮಾನವೀಯತೆಯ ಮೌಲ್ಯ ಬಿಂಬಿಸಬೇಕು, ಸಕಾರಾತ್ಮಕ ಸಂಘಟನೆಯನ್ನ ಬಿಂಬಿಸಲು ಕಾರ್ಯ ಪ್ರವೃತ್ತರಾಗಬೇಕು.
- ಎಮ್.ಎಚ್. ನಾಯ್ಕ, ವಲಯ ಅರಣ್ಯಾಧಿಕಾರಿ

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಸೂರಜ ನಾಯ್ಕ, ಪ್ರಮೋದ ನಾಯ್ಕ ಬೀರನಜಡ್ಡಿ, ಸಮರ್ಥ ಟ್ರಸ್ಟ್ ಅಧ್ಯಕ್ಷೆ ಪ್ರತಿಭಾ ಮಂಜುನಾಥ ನಾಯ್ಕ, ಮಂಜುನಾಥ ಎಮ್ ನಾಯ್ಕ, ಸುಬ್ರಾಯ ನಾಯ್ಕ ವಿದ್ಯುತ್ ಗುತ್ತಿಗೆದಾರರು, ಮೋಹನ್ ಜಿ ನಾಯ್ಕ ಮತ್ತು ಮಂಜುನಾಥ ಪೂಜಾರಿ ದ್ಯಾವಕಾರ ಉಪಸ್ಥಿತರಿದ್ದರು.

ಗ್ರಾಮೀಣ ಭಾಗದ ಹತ್ತು ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧನ ಸಹಾಯದೊಂದಿಗೆ ಪ್ರತಿಭಾ ಪುರಸ್ಕರಿಸಲಾಯಿತು. ಶಿಕ್ಷಕ ನಾಗರಾಜ ನಾಯ್ಕ ವಂದಿಸಿದರು. ಶಿಕ್ಷಕಿ ಮಮತಾ ವಿ ನಾಯ್ಕ ನಿರೂಪಿಸಿದರು. ಗೌರವಾಧ್ಯಕ್ಷ ಮಂಜುನಾಥ ನಾಯ್ಕ ಸ್ವಾಗತಿಸಿದರು. ಅಧ್ಯಕ್ಷ ಹರಿಹರ ನಾಯ್ಕ ಪ್ರಸ್ತಾವಿಕ ಮಾತನಾಡಿದರು. ದೈಹಿಕ ಶಿಕ್ಷಣ ಶಿಕ್ಷಕ ಎಮ್.ವಿ. ನಾಯ್ಕ ಮಾತನಾಡಿದರು.

ದೇಶಪಾಂಡೆ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕಾರ್ಯಾಗಾರ | ಡಾ.ಗಣೇಶ ಬಿಷ್ಟಣ್ಣ

ವೃತ್ತಿಪರ ಯಶಸ್ಸಿಗೆ ಸಮಗ್ರತೆ, ಸಮಯಪಾಲನೆ ಅಗತ್ಯ

ಕಾರವಾರ: ಹಳಿಯಾಳದ ದೇಶಪಾಂಡೆ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪೂರ್ಣಗೊಳಿಸುತ್ತಿರುವ ವಿದ್ಯಾರ್ಥಿಗಳಿಗಾಗಿ 'ವೃತ್ತಿಪರ ಯಶಸ್ಸಿನ ಗುಟ್ಟು - ನೈತಿಕತೆ ಮತ್ತು ಕಾರ್ಯಸ್ಥಳದ ಶಿಷ್ಟಾಚಾರ' ವಿಷಯದ ಕುರಿತು ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ. ಗಣೇಶ್ ಬಿಷ್ಟಣ್ಣನವರ್ ಅವರು ಮಾತನಾಡಿ, ಇಂದಿನ ಔದ್ಯೋಗಿಕ ಕ್ಷೇತ್ರದಲ್ಲಿ ಶಿಸ್ತು, ಪ್ರಾಮಾಣಿಕತೆ ಹಾಗೂ ಸಮಯಪಾಲನೆ ಅತ್ಯಗತ್ಯ ಗುಣಗಳಾಗಿವೆ ಎಂದು ತಿಳಿಸಿದರು.

ಜ್ಞಾನ ಮತ್ತು ತಾಂತ್ರಿಕ ಕೌಶಲ್ಯ ಎಷ್ಟು ಮುಖ್ಯವೋ, ಅದೇ ರೀತಿ ವ್ಯಕ್ತಿಯ ನಡವಳಿಕೆ ಮತ್ತು ವೃತ್ತಿಪರ ನೈತಿಕತೆಯೂ ಯಶಸ್ಸಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂದು ಹೇಳಿದರು.

ಐಟಿಐ ತರಬೇತಿ ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನೈತಿಕತೆ, ಜವಾಬ್ದಾರಿ ಮತ್ತು ಕಾರ್ಯಸ್ಥಳದ ಶಿಷ್ಟಾಚಾರಗಳ ಕುರಿತು ಅವರು ವಿವಿಧ ಉದಾಹರಣೆಗಳ ಮೂಲಕ ಮನಮುಟ್ಟುವಂತೆ ವಿವರಿಸಿದರು. ಸೌಜನ್ಯತೆ, ಸುರಕ್ಷತೆ ಹಾಗೂ ಸ್ವಚ್ಛತೆಯನ್ನು ಜೀವನದ ಅವಿಭಾಜ್ಯ ಅಂಗಗಳಾಗಿ ಮಾಡಿಕೊಂಡು ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ದಿನೇಶ್ ಆರ್ ನಾಯ್ಕ್ ಅವರು ಮಾತನಾಡಿ, ಬದಲಾವಣೆ ಇಲ್ಲದಿದ್ದರೆ ಬೆಳವಣಿಗೆ ಸಾಧ್ಯವಿಲ್ಲ ಎಂದು ಹೇಳಿ, ಕಾಲಾನುಗುಣವಾಗಿ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಹೊಂದಿಕೊಂಡು ತಮ್ಮ ಕಾರ್ಯ ಸ್ಥಳದಲ್ಲಿ ಯಶಸ್ಸನ್ನು ಸಾಧಿಸಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಕಾರ್ಯಕ್ರಮವನ್ನು ಸಂಸ್ಥೆಯ ಸಾಂಸ್ಕೃತಿಕ ಸಮಿತಿಯ ಸದಸ್ಯರಾದ ದಿನೇಶ್ ಡಿ ನಾಯ್ಕ್ ಅವರು ಯಶಸ್ವಿಯಾಗಿ ಆಯೋಜಿಸಿ ನಿರ್ವಹಿಸಿದರು.

ರಂಗಸ್ಥಳದಲ್ಲಿ ವೈಭವೀಕೃತಗೊಂಡ 'ಭಸ್ಮಾಸುರ ಮೋಹಿನಿ' ಪ್ರಸಂಗ

ಸಿದ್ದಾಪುರ: ಸಭಾ ಕಾರ್ಯಕ್ರಮದ ನಂತರ ಕವಿ ಕನ್ಯಾನ ವೆಂಕಟರಮಣ ಭಟ್ಟ ವಿರಚಿತ 'ಭಸ್ಮಾಸುರ ಮೋಹಿನಿ' ಎಂಬ ಪ್ರಸಿದ್ಧ ಯಕ್ಷಗಾನ ಪ್ರದರ್ಶನವು ರಂಗವೇರಿತು. ಪ್ರದರ್ಶನದ ಹಿಮ್ಮೇಳ ಮತ್ತು ಮುಮ್ಮೇಳಗಳ ಸಮನ್ವಯತೆ ಅತ್ಯಂತ ಆಕರ್ಷಕವಾಗಿ ಮೂಡಿಬಂದಿತು.

ಭಾಗವತರಾಗಿ ಸೃಜನ್ ಗಣೇಶ ಹೆಗಡೆ ಸಾಗರ ಅವರು ತಮ್ಮ ಕಂಠಸಿರಿಯಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರೆ, ಮದ್ದಳೆ ವಾದನದಲ್ಲಿ ಗುಡ್ಡೆದಿಂಬ ಶ್ರೀವತ್ಸ ಹಾಗೂ ಚಂಡೆವಾದನದಲ್ಲಿ ಕೆ.ಎನ್.ಭಾರ್ಗವ ಹೆಗ್ಗೋಡು ಅವರು ರಂಗಸ್ಥಳಕ್ಕೆ ಭವ್ಯವಾದ ಹಿನ್ನೆಲೆ ಒದಗಿಸಿದರು.

ಮುಮ್ಮೇಳದಲ್ಲಿ ಕಲಾವಿದರು ಪಾತ್ರಗಳಿಗೆ ಜೀವ ತುಂಬಿದರು. ಅಸುರ ಗತ್ತಿನ ಭಸ್ಮಾಸುರನಾಗಿ ಶ್ರೀಕಾಂತ ಹೆಗ್ಗೋಡು ಅಬ್ಬರಿಸಿದರೆ, ಈಶ್ವರನಾಗಿ ಬೆಳೆಯೂರು ಸಂಜಯ ಗಾಂಭೀರ್ಯ ಮೆರೆದರು. ಪಾರ್ವತಿಯಾಗಿ ದೀಪಕ ಕುಂಕಿ ಹಾಗೂ ಲಾವಣ್ಯಮಯಿ ಮೋಹಿನಿಯಾಗಿ ಸದಾಶಿವ ಭಟ್ಟ ಯಲ್ಲಾಪುರ ಅವರ ನೃತ್ಯ ಮತ್ತು ಅಭಿನಯ ಪ್ರೇಕ್ಷಕರ ಮನಸೂರೆಗೊಂಡಿತು. ದೇಂದ್ರನಾಗಿ ಚಪ್ಪರಮನೆ ವೆಂಕಟಗಿರಿ ಹೆಗಡೆ, ವಿಷ್ಣುವಾಗಿ ಅತ್ತಿಮುರುಡು ನರೇಂದ್ರ ಹೆಗಡೆ ಮತ್ತು ವಿಶಿಷ್ಟ ಶೈಲಿಯ ಬ್ರಾಹ್ಮಣನಾಗಿ ಇಟಗಿ ಮಹಾಬಲೇಶ್ವರ ಅವರು ಕಾಣಿಸಿಕೊಂಡು ಕಲಾಪ್ರದರ್ಶನದ ಯಶಸ್ಸಿಗೆ ಕಾರಣರಾದರು.

ಸಮಾಚಾರ ಸಣ್ಣದಲ್ಲ

ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಧಾರವಾಡ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಧಾರವಾಡ ಕಚೇರಿಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಭಾಭವನದಲ್ಲಿ ಹುಬ್ಬಳ್ಳಿ - ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರ-74 ರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆನಂದ ಮುಶಣ್ಣವರ ಅಧ್ಯಕ್ಷತೆಯಲ್ಲಿ ಪಂಚ ಗ್ಯಾರಂಟಿ ಯೋಜನೆ ಸಭೆ ಜರುಗಿತು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಸದಸ್ಯರಾದ ಲಕ್ಷ್ಮೀ ಅರುಣ ಗುತ್ತೆ, ಬೈರಕದಾರ, ತ್ರಿಶೈಲಾ ಅಳೆಬಸಪ್ಪನವರ, ಸುನಂದಾ ಕೋಲಕರ, ಮುಮತಾಜ ಹಾನಗಲ್, ಮಹೀರ ಝುಂಡವಾಲೆ, ಲತಾ ಕಾಟಾಪುರ, ಮನಸೂರಾ ನದಾಫ್, ಸಹಾಯಕ ಆಯುಕ್ತ ಅರವಿಂದ ಜಮಖಂಡಿ ಉಪಸ್ಥಿತರಿದ್ದರು.

ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಧಾರವಾಡ: ತೋಟಗಾರಿಕೆ ಇಲಾಖೆಯು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ವಿವಿಧ ಘಟಕಗಳಾದ ಹೊಸ ಪ್ರದೇಶ ವಿಸ್ತರಣೆ (ಡ್ರ್ಯಾಗನ್ ಫ್ರೂಟ್, ಬಾಳೆ, ಲಿಂಬೆ), ಹೂ ಬೆಳೆ ಪ್ರದೇಶ ವಿಸ್ತರಣೆ, ತರಕಾರಿ ಬೆಳೆಗಳ ಪ್ರದೇಶ ವಿಸ್ತರಣೆ, ಈರುಳ್ಳಿ ಶೇಖರಣಾ ಘಟಕ, ವೈಯಕ್ತಿಕ ಕೃಷಿ ಹೊಂಡ, ತಳ್ಳುಗಾಡಿ, 20 ಎಚ್.ಪಿ.ಗಿಂತ ಕಡಿಮೆ ಇರುವ ಟ್ರ್ಯಾಕ್ಟರ್ ಘಟಕಗಳಿಗೆ ಸಹಾಯಧನ ಪಡೆಯಲು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ರೈತರು ಜೂನ್ 15 ರೊಳಗಾಗಿ ನವಲಗುಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಬಂಧ, ಚಿತ್ರಕಲಾ ಸ್ಪರ್ಧೆ ಜೂ. 2ರಂದು

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮತ್ತು ಜೆ.ಎಸ್.ಎಸ್ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜೂ. 2 ರಂದು ವಿದ್ಯಾಗಿರಿಯ ಜೆ.ಎಸ್.ಎಸ್ ಆವರಣದಲ್ಲಿನ ಉತ್ಸವ ಹಾಲ್ದಲ್ಲಿ ಹುಬ್ಬಳ್ಳಿ-ಧಾರವಾಡ ನಗರದ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲಾ ವಿಧ್ಯಾರ್ಥಿಗಳಿಗೆ ಹವಾಮಾನ ಬದಲಾವಣೆ (ಪ್ರಕೃತಿಯಿಂದ ಪ್ರೇರಿತ. ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ) ಎಂಬ ವಿಷಯದ ಬಗ್ಗೆ ನಿಬಂಧ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಜೂನ್ 5 ರಂದು ಬೆಳಗ್ಗೆ 11 ಘಂಟೆಗೆ ವಿದ್ಯಾಗಿರಿಯ ಜೆ.ಎಸ್.ಎಸ್ ಆವರಣದಲ್ಲಿನ ಉತ್ಸವ ಹಾಲ್ದಲ್ಲಿ ಜರಗುವ ಮುಖ್ಯ ಸಮಾರಂಭದಲ್ಲಿ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಗುವುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಜಗದೀಶ ಐ.ಎಚ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಧಾರವಾಡ: ತಾಲೂಕಿನ ತೋಟಗಾರಿಕೆ ಇಲಾಖೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಹಣ್ಣು (ಬಾಳೆ, ಪಪ್ಪಾಯ, ಮಾವು), ಹೂ (ಗುಲಾಬಿ, ಸೇವಂತಿಗೆ, ಸುಗಂಧರಾಜ, ಚೆಂಡು ಹೂ), ಹೈಬ್ರಿಡ್ ತರಕಾರಿಗಳ ಹೊಸ ಪ್ರದೇಶ ವಿಸ್ತರಣೆ, ಸಾಂಬಾರು ಬೆಳೆ ಪ್ರದೇಶ ವಿಸ್ತರಣೆ, ಸುಗಂಧಿ ದ್ರವ್ಯಗಳ ಪ್ರದೇಶ ವಿಸ್ತರಣೆ, ಪುನಶ್ಚೇತನ ಕಾರ್ಯಕ್ರಮ, ಪ್ಲಾಸ್ಟಿಕ್ ಮಲ್ಚಿಂಗ್, ಎರೆಹುಳು ಘಟಕ, ಜೇನು ಸಾಕಾಣಿಕೆ, ಸಣ್ಣ ಟ್ರ್ಯಾಕ್ಟರ್, ತಳ್ಳುವ ಗಾಡಿ, ಈರುಳ್ಳಿ ಶೇಖರಣಾ ಘಟಕಗಳಿಗೆ ರೈತರಿಗೆ ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ರೈತರು ಜೂನ್ 15 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಇಮ್ತಿಯಾಜ್ ಚಂಗಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರದ ಸುತ್ತ ನಿರ್ಬಂಧ ಘೋಷಣೆ

ಹಾವೇರಿ: ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ಮಂಡಳಿ ಜೂನ್-2026ರ ಪೂರಕ ಪರೀಕ್ಷೆಗಳು ದೇವಗಿರಿ ಯಲ್ಲಾಪುರ ಹಾವೇರಿ ವಿಜ್ಞಾನಗಳ ಸಂಸ್ಥೆಯಲ್ಲಿ ಜೂನ್ 2 ರಿಂದ 5 ರವರೆಗೆ ನಡೆಯಲಿದ್ದು, ಈ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ವಿಜಯಮಹಾಂತೇಶ ಬಿ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

{ಡಾ.ಕೆ. ಸುಧಾಕರ್} ಸಂಸದ

ದೇಶದ ಭವಿಷ್ಯವನ್ನು ಪ್ರತಿಭೆ ಮತ್ತು ಜ್ಞಾನದ ಮೂಲಕ ಕಟ್ಟಬೇಕಾಗಿದೆ.ಅನಾದಿ ಕಾಲದಿಂದಲೂ ಭಾರತದ ಜ್ಞಾನ ಪರಂಪರೆ ವಿಶ್ವಕ್ಕೆ ಮಾದರಿಯಾಗಿದೆ. ಪ್ರಾಚೀನ ಕಾಲದಲ್ಲಿ ನಳಂದಾ ವಿಶ್ವವಿದ್ಯಾಲಯಕ್ಕೆ ಸುಮಾರು 70ಕ್ಕೂ ಹೆಚ್ಚು ದೇಶಗಳ ವಿದ್ಯಾರ್ಥಿಗಳು ಬಂದು ಶಿಕ್ಷಣ ಪಡೆಯುತ್ತಿದ್ದರು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ

ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಘಟಿಕೋತ್ಸವ| ಎಐ ಬಳಕೆಗೆ ಐಐಐಟಿ ತಂತ್ರಜ್ಞಾನ ರೂಪಿಸಿ: ಸಚಿವ ಪ್ರಲ್ಹಾದ ಜೋಶಿ

ಇಂಧನ ಉತ್ಪಾದನೆಗೆ ಕೃತಕ ಬುದ್ಧಿಮತ್ತೆ ಅಗತ್ಯ

ವಿಶ್ವವಾಣಿ ಸುದ್ದಿಮನೆ ಧಾರವಾಡ

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಕೃತಕ ಬುದ್ಧಿಮತ್ತೆ ಬಳಕೆಗೆ ಅಗತ್ಯ ತಂತ್ರಜ್ಞಾನ ನೀಡಿದರೆ ಇಂಧನ ಉತ್ಪಾದನೆಗೆ ಅನುಕೂಲವಾಗುತ್ತದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ 8ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಕೇಂದ್ರ ಸರಕಾರ ಆದ್ಯತೆ ನೀಡುತ್ತಿದ್ದು, ಐಐಟಿ, ಐಐಐಟಿ ಸಂಸ್ಥೆಗಳು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಮುಂದಾದರೆ ಅಗತ್ಯ ಅನುದಾನ ನೀಡಲಾಗುವುದು. 2025ರ ವೇಳೆಗೆ ಭಾರತೀಯ ಕೃತಕ ಬುದ್ಧಿಮತ್ತೆ ಸುರಕ್ಷತಾ ಕೇಂದ್ರ ಆರಂಭಿಸುವ ಉದ್ದೇಶ ಕೇಂದ್ರ ಸರಕಾರದ್ದಾಗಿದೆ ಎಂದರು.

2030ರ ವೇಳೆಗೆ ಭಾರತದ ಐಟಿ ಕ್ಷೇತ್ರ 4000 ಬಿಲಿಯನ್ ಗಳಿಸುವ ಸಾಕ್ಷರರಾಗುವುದು ಅವಶ್ಯಕವಾಗಿದೆ. ಬುದ್ಧಿಮತ್ತೆಯಿಂದ ಉದ್ಯೋಗ ಆತಂಕಿತರಾಗಿದ್ದಾರೆ. ಆದರೆ, ಎಐ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ. ಸದ್ಬಳಕೆ ಯುವ

ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ 8ನೇ ಘಟಿಕೋತ್ಸವದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಒಟ್ಟು 253 ಪದವೀಧರರಿಗೆ ಪದವಿ ಪ್ರದಾನ ಮಾಡಿದರು.

ಮಾಡಿಕೊಳ್ಳಲು ಪದವೀಧರರು ಸನ್ನದ್ಧರಾಗಬೇಕಿದೆ. ಕೌಶಲ ಅಭಿವೃದ್ಧಿ ಪಡಿಸಿಕೊಂಡ ಯುವಜನರು ಧೈರ್ಯದಿಂದ ಮುನ್ನುಗ್ಗುವ ಸ್ವಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ ಎಂದರು.

ನೂತನ ತಂತ್ರಜ್ಞಾನಗಳ ಅನುಷ್ಠಾನದ ಮಧ್ಯೆಯೂ ಡಿಜಿಟಲ್ ಅರೆಸ್ಟ್ ಸೇರಿದಂತೆ ಸೈಬರ್ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ಬೇಸರದ ಸಂಗತಿ. ಡಿಜಿಟಲ್ ಟ್ರಾನ್ಸಾಕ್ಷನ್ ನಲ್ಲಿ ಭಾರತ ವಿಶ್ವದಲ್ಲೇ ಅಗ್ರಸ್ಥಾನದಲ್ಲಿದೆ. ಇತರ ಮುಂದುವರೆದ ದೇಶಗಳನ್ನು ಹಿಂದಿಕ್ಕಿ ಭಾರತ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ. ಆದರೆ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚಾಗುತ್ತಿವೆ. ಸೈಬರ್ಅಪರಾಧಗಳು ನಿರಂತರ ನಡೆದಿವೆ ಎಂದರು. ಏಷ್ಯನ್ ಪೇಂಟ್ಸ್ ಸಹ ಸಂಸ್ಥಾಪಕ ಹಾಗೂ ಐಐಐಟಿ ಧಾರವಾಡ ಆಡಳಿತ ಮಂಡಳಿ ಅಧ್ಯಕ್ಷ ಜಲಜ್ ದಾನಿ ಮಾತನಾಡಿ, ಅಡ್ವಾನ್ಸಡ್ ಸಿಸ್ಟಮ್ ರೂಪಿಸುವ ಯುವ ತಂತ್ರಜ್ಞರಿಗಿಂತ ನೈಪುಣ್ಯದಿಂದ ಸಾಮಾಜಿಕ ಜವಾಬ್ದಾರಿ ನಿಭಾಯಿಸುವವರ ಭವಿಷ್ಯ ಉಜ್ವಲವಾಗಿದೆ ಎಂಬುದನ್ನು ಮನಗಾಣಬೇಕು. ಸಹಾನುಭೂತಿ ಇಲ್ಲದ ಜಾಣ್ಮೆ ಕಂದಕಗಳನ್ನು ಸೃಷ್ಟಿಸುತ್ತದೆ. ಸುಸ್ಥಿರತೆ ಇಲ್ಲದ ಅಭಿವೃದ್ಧಿ ಭವಿಷ್ಯ ರೂಪಿಸುವುದಕ್ಕೆ ಅಡ್ಡಿಯಾಗುವುದು ಮೌನವೀಯ ಮೌಲ್ಯವಿಲ್ಲದ ಆವಿಷ್ಕಾರ ಜನರ ಬಾಂಧವ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯಪಟ್ಟರು.

ಭಾರತೀಯ ಯುವ ಪ್ರತಿಭೆಯ ಮೇಲೆ ಜಗತ್ತಿನ ಆಗಾಧ ನಿರೀಕ್ಷೆಯಿದೆ. ಡಿಜಿಟಲ್ ಮೂಲಸೌಲಭ್ಯ, ಉದ್ಯಮಶೀಲತೆ ತ್ವರಿತ ಬೆಳವಣಿಗೆ ಅಗತ್ಯವಾಗಿದೆ.

> ನಾವೆಲ್ಲರೂ ಸಮಾಜದ ಭಾಗ ಎಂಬುದನ್ನು ಒಪ್ಪಿಕೊಳ್ಳಬೇಕು. ನಮ್ಮ ಅನ್ವೇಷಣೆ, ಸಂಶೋಧನೆಯಿಂದ ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆಯಾಗಬೇಕು. ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ಎದುರಿಸುವಲ್ಲಿ ನಾವು ಕೊಡುಗೆ ನೀಡಬೇಕಿದೆ. ಎಐ ಬಳಕೆಗಾಗಿ ಮಾನವ ಹಾಣೆ, ಮೌಲ್ಯಗಳನ್ನು ಪರಿಗಣಿಸುವುದು ಅವಶ್ಯಕವಾಗಿದೆ.
>
> -ಪ್ರೊ. ರಂಗನ್ ಬ್ಯಾನರ್ಜಿ, ಐಐಟಿ ದೆಹಲಿ ನಿರ್ದೇಶಕ

ತಂತ್ರಜ್ಞಾನ ಬಳಕೆಯಿಂದ ದೇಶದ ಪ್ರಗತಿ ಸಾಧ್ಯ

ಎಐ ತಂತ್ರಜ್ಞಾನದ ಬಳಕೆ ವ್ಯಾಪಕವಾಗುತ್ತಿದೆ. ಆಹಾರ ಧಾನ್ಯ ಸಂಗ್ರಹ ಹಾಗೂ ಸಾಗಣೆಯಲ್ಲಿ ತಂತ್ರಜ್ಞಾನದ ನೆರವಿನಿಂದ ಸೋರಿಕೆ ಕಡಿಮೆ ಮಾಡಿದ್ದರಿಂದ ಕೋಟ್ಯಾಂತರ ಹಣ ಉಳಿತಾಯವಾಗಿದೆ. ಎಐ ನೆರವಿನಿಂದ ಸೋರಿಕೆ ಶೇ.0.01ಗೆ ಇಳಿಮುಖವಾಗಿದೆ. ತಂತ್ರಜ್ಞಾನದ ಸಮರ್ಪಕ ಬಳಕೆ ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ಕೇವಲ ತಂತ್ರಜ್ಞಾನ ಪ್ರಗತಿಯ ಭಾಗವಾಗದೇ ಉಜ್ವಲ ಭವಿಷ್ಯ ರೂಪಿಸುವಲ್ಲಿ ನಮ್ಮ ದೇಶಕ್ಕೆ ಆಗಾಧ ಅವಕಾಶಗಳಿವೆ. ಯುವ ಜನಾಂಗ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುವುದರಲ್ಲಿ ಸಂಶಯವಿಲ್ಲ ಎಂದು ನುಡಿದರು.

ಘಟಿಕೋತ್ಸವದಲ್ಲಿ ಒಟ್ಟು 253 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ಇಬ್ಬರಿಗೆ ಎಂಟೆಕ್ ಪದವಿ ನೀಡಲಾಯಿತು. ವೇದಿಕೆ ಮೇಲೆ ಐಐಐಟಿ ನಿರ್ದೇಶಕ ಪ್ರೊ. ಎಸ್.ಆರ್. ಮಹಾದೇವ ಪ್ರಸನ್ನ, ಕುಲಸಚಿವ ಪ್ರೊ. ಸತೀಶ ಅಣ್ಣಿಗೇರಿ ಇದ್ದರು.

ಡಿಕೆಶಿ ಸಿಎಲ್‌ಪಿ ನಾಯಕರಾಗಿ ಆಯ್ಕೆ: ಸಂಭ್ರಮ

ಹುಬ್ಬಳ್ಳಿ: ಸಿಎಲ್‌ಪಿ ನಾಯಕರಾಗಿ ಡಿ.ಕೆ. ಶಿವಕುಮಾರ್‌ಅವರು ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ವತಿಯಿಂದ ಅಕ್ಷಯ ಪಾರ್ಕ್ ವೃತ್ತ, ಗೋಕುಲ ರಸ್ತೆಯಲ್ಲಿ ಅತ್ಯಂತ ಸಂಭ್ರಮದಿಂದ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಯಿತು.

ಪಕ್ಷದ ಹಿರಿಯ ಮುಖಂಡರು, ಸ್ಥಳೀಯ ಪದಾಧಿಕಾರಿಗಳು ಮತ್ತು ಅಪಾರ ಸಂಖ್ಯೆಯ ಕಾರ್ಯಕರ್ತರು ಭಾಗವಹಿಸಿದ್ದರು. ಕಾರ್ಯಕರ್ತರು ಸಿಹಿ ಹಂಚಿ, ಪಟಾಕಿ ಸಿಡಿಸಿ ಹಾಗೂ ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಸಂತೋಷ ಹಂಚಿಕೊಂಡರು.

ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಡಿ. ಕೆ. ಶಿವಕುಮಾರ ಅವರಲ್ಲಿರುವ ಸಂಘಟನಾ ಚತುರತೆ, ಬದ್ಧತೆ ಮತ್ತು ಕಷ್ಟದ ಸಮಯದಲ್ಲೂ ಸ್ಥಿರವಾಗಿ ನಿಲ್ಲುವ ಗುಣ ನಮಗೆಲ್ಲರಿಗೂ ಆದರ್ಶಪ್ರಾಯ. ಅವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಕಾಣಲಿದೆ ಮತ್ತು ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಅವರು ಯಶಸ್ವಿಯಾಗಲಿದ್ದಾರೆ ಎಂಬ ದೃಢ ವಿಶ್ವಾಸ ನನಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ವತಿಯಿಂದ ಅಕ್ಷಯ ಪಾರ್ಕ್ ವೃತ್ತ, ಗೋಕುಲ ರಸ್ತೆಯಲ್ಲಿ ಅತ್ಯಂತ ಸಂಭ್ರಮದಿಂದ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಯಿತು.

ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ವೀರೇಶ್ ಕಡಕೋಳಮಠ ,ಷರೀಫ್ ಗರ್ಗದ, ಪಾಲಿಕೆ ಸದಸ್ಯ ಸೆಂಥಿಲ್ ಕುಮಾರ್, ಸಾದಿಕ್ ಯಕ್ಕುಂಡಿ, ಸುವರ್ಣ ಕಲ್ಲಕುಂಟ್ಲ, ಇಕ್ಬಾಲ್ ನವಲೂರ, ಸಂಗಮೇಶ್ ಗೌರಕ್ಕನವರ, ಮದಾರ್ ಮಕಾಂದರ, ಸಂತೋಷ್ ನಾಯಕ್, ಮಹೇಶ್, ದೀಪಕ್, ರಘುವೀರ್ ಪಾಟೀಲ್, ಬಸವರಾಜ್ ಮ್ಯಾಗೆಡಿ, ಪರ್ವೇಜ್ ಕಟ್ಟಿಮನಿ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು ಮತ್ತು ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಜೂ. 14ರಂದು ಜನತಾ ಸಹಕಾರಿ ಸಂಘ ಚುನಾವಣೆ

ಹಾನಗಲ್ಲ : ಹಾನಗಲ್ಲಿನ ಪ್ರತಿಷ್ಠಿತ ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘ ಚುನಾವಣೆಗೆ ಸಿದ್ಧಗೊಂಡಿದ್ದು, 1333 ರಷ್ಟು ಸದಸ್ಯರು ಮತದಾನದ ಮೂಲಕ ಜೂನ್ 14 ರಂದು 15 ಜನ ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಲಾಗುವುದು. ಮೇ 29 ರಂದು ಅರ್ಹ ಮತದಾರರ ಪಟ್ಟಿ ಪ್ರಕಟಣೆ, ಮೇ 31 ರಿಂದ ಜೂನ್ 6 ರವರೆಗೆ ನಾಮಪತ್ರ ಸಲ್ಲಿಕೆ ನಡೆಯಲಿದೆ. ಜೂನ್ 7 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಜೂನ್ 8 ರಂದು ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಹಿಂಪಡೆಯಲು ಅವಕಾಶವಿದೆ. ಜೂನ್ 14 ರಂದು ಮತದಾನ ನಡೆಯಲಿದ್ದು, ಮತದಾನದ ಮುಕ್ತಾಯದ ನಂತರ ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟಣೆ ನಡೆಯಲಿದೆ ಎಂದು ಚುನಾವಣೆ ರಿಟರ್ನಿಂಗ್ ಆಫೀಸರ್ ಎಚ್.ಜಿ.ಪ್ರಶಾಂತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 1333 ಸದಸ್ಯರು 9 ಸಾಮಾನ್ಯ ಸದಸ್ಯರು, ಒಂದು ಸ್ಥಾನ ಪರಿಶಿಷ್ಟ ಜಾತಿ ಮೀಸಲು ಸ್ಥಾನ, ಒಂದು ಸ್ಥಾನ ಪರಿಶಿಷ್ಟ ಪಂಗಡ ಮೀಸಲು ಸ್ಥಾನ, 2 ಮಹಿಳಾ ಮೀಸಲು ಸ್ಥಾನ, 2 ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಜೂನ್ 14 ರಂದು ಮುಂಜಾನೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘದ ಆವರಣದಲ್ಲಿರುವ ಶ್ರೀ ಕುಮಾರೇಶ್ವರ ಮಹಾವಿದ್ಯಾಲಯದಲ್ಲಿ 4 ಪೋಲಿಂಗ ಬೂತ್ಗಳಲ್ಲಿ ಮತದಾನ ನಡೆಯಲಿದೆ ಎಂದು ಸಹ ಚುನಾವಣಾಧಿಕಾರಿ ಸುಭಾಸ ಮಾದರ ತಿಳಿಸಿದರು.

ಹಾನಗಲ್ಲ ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘದ ಕಚೇರಿ.

ರುದ್ರಪ್ಪಗೆ ಸಚಿವ ಸ್ಥಾನ ನೀಡಲು ಆಗ್ರಹ

ಹಾವೇರಿ: ದಣಿವರಿಯದ ಜನಪ್ರಿಯ ನಾಯಕ ಹಾವೇರಿ ಮೀಸಲು ವಿಧಾನಸಭಾ ಕ್ಷೇತ್ರದ ಹಿರಿಯ ಶಾಸಕ ಉಪಸಭಾಪತಿ ರುದ್ರಪ್ಪ ಲಮಾಣಿಯವರಿಗೆ ಕ್ಯಾಬಿನೆಟ್ ಸಚಿವ ಸ್ಥಾನ ಅಥವಾ ಡಿಸಿಎಂ ಹುದ್ದೆ ನೀಡುವಂತೆ ಜಿಲ್ಲಾ ಬಂಜಾರ ಸಮಾಜದ ಮುಖಂಡ ಐ.ಡಿ ಲಮಾಣಿ ಕಾಂಗ್ರೆಸ್ ಹೈ ಕಮಾಂಡ್ ಗೆ ಹಕ್ಕೊತ್ತಾಯಿಸಿದ್ದಾರೆ. ಸುದ್ದಿಗೋಷ್ಠಿ ನೀಡಿರುವ ಅವರು ಕಾಂಗ್ರೆಸ್ ಪಕ್ಷದ ಏಕೈಕ ಲಂಬಾಣಿ ಸಮುದಾಯದ ಶಾಸರಾಗಿರುವ ರುದ್ರಪ್ಪ ಲಮಾಣಿ ಪಕ್ಷಕ್ಕಾಗಿ ನಿಷ್ಠೆಯಿಂದ ನಡೆದುಕೊಂಡಿದ್ದಾರೆ. ಸರ್ವ ಸಮುದಾಯದ ನೆಚ್ಚಿನ ನಾಯಕರಾಗಿದ್ದಾರೆ. ಈ ಹಿಂದೆ ಜವಳಿ ಮತ್ತು ಮುಜರಾಯಿ ಖಾತೆ ಸಚಿವರಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅಪಾರ ಅನುಭವಿಗಳಾಗಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರ ಗಳ ಪೈಕಿ ಪರಿಶಿಷ್ಟ ಜಾತಿಯ ಒಟ್ಟು 36 ಮೀಸಲು ಮತ ಕ್ಷೇತ್ರಗಳು ಹಾಗೂ ಪರಿಶಿಷ್ಟ ಪಂಗಡದ ಒಟ್ಟು 15 ಮೀಸಲು ಮತ ಕ್ಷೇತ್ರಗಳಲ್ಲಿ ಲಂಬಾಣಿ (ಬಂಜಾರ) ಸಮುದಾಯದ ಮತಗಳು ನಿರ್ಣಾಯಕವಾಗಿದ್ದು, ಆ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ನಮ್ಮ ಸಮಾಜದ ಏಕೈಕ ಶಾಸಕರಾಗಿರುವ ಹಾವೇರಿ ಕ್ಷೇತ್ರದ ರುದ್ರಪ್ಪ ಲಮಾಣಿ ರವರು ಸಮಾಜದಲ್ಲಿ ಮತ್ತು ರಾಜಕೀಯವಾಗಿ ಸುದೀರ್ಘ ಅನುಭವ ಹೊಂದಿರುವ ಸೌಮ್ಯ ಹಾಗೂ ದಕ್ಷ ನಾಯಕರಾಗಿದ್ದಾರೆ.

ಪ್ರಸ್ತುತ ಸರಕಾರದಲ್ಲಿ ವಿಧಾನಸಭೆಯ ಉಪಸಭಾಪತಿ ಯಾಗಿಯೂ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯದಲ್ಲಿ ಲಂಬಾಣಿ ಸಮುದಾಯದ ಏಳಿಗೆಗಾಗಿ ಅವರು ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯದ ಹಿರಿಯ ನಾಯಕರು ಬಂಜಾರ ಸಮಾಜದ ಹಿತದೃಷ್ಟಿಯಿಂದ ರುದ್ರಪ್ಪ ಲಮಾಣಿ ರವರಿಗೆ ಸೂಕ್ತ ಸ್ಥಾನಮಾನ ನೀಡಿ ಗೌರವಿಸಬೇಕು ಅವಕಾಶ ನೀಡದೇ ಹೋದಲ್ಲಿ ಮುಂದಿನ ದಿನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂಜಾರ ಸಮುದಾಯದ ಜನ ತಕ್ಕ ಪಾಠ ಕಲಿಸಲು ಸನ್ನದ್ಧ ಎಂದು ಜಿಲ್ಲಾ ಬಂಜಾರ ಸಮಾಜದ ಮುಖಂಡ ಐ.ಡಿ ಲಮಾಣಿ ಪ್ರಕಟಣೆಯ ಮೂಲಕ ಆಗ್ರಹಿಸಿದ್ದಾರೆ.

ರಾಜ್ಯ ಸರಕಾರ ಕನಿಷ್ಠ ವೇತನ ಪರಿಷ್ಕರಣೆ ಜಾರಿಗೆ ಆಗ್ರಹ

ಹಾವೇರಿ: ರಾಜ್ಯ ಸರಕಾರ ಕನಿಷ್ಠ ವೇತನ ಪರಿಷ್ಕರಣೆ ಮಾಡಿ, ಇಂದಿನ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚಕ್ಕೆ ಅನುಗುಣವಾಗಿ ಎಲ್ಲ ಕಾರ್ಮಿಕರಿಗೆ ಸರಾಸರಿ ರು. 36,000 ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಒತ್ತಾಯಿಸಿದರು.

ನಗರದ ಹೊರವಲಯದಲ್ಲಿರುವ ಜಿಲ್ಲಾಡಳಿತ ಭವನದ ಎದುರು ಸೆಂಟರ್ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಜಿಲ್ಲಾ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿ, ಕಾರ್ಮಿಕರ ನಿರಂತರ ಹೋರಾಟದ ಫಲವಾಗಿ ಪ್ರತಿ ಉದ್ದಿಮೆಗೆ ಪ್ರತ್ಯೇಕವಾಗಿ ಕನಿಷ್ಠ ವೇತನ ಅಧಿಸೂಚನೆ ಹೊರಡಿಸದೇ ಬಹುತೇಕ ಉದ್ದಿಮೆಗಳಿಗೆ ಏಕರೂಪವಾಗಿ ಹಾಗೂ ಹಿಂದೆ ಇದ್ದ ನಾಲ್ಕು ವಲಯಕ್ಕೆ ಬದಲಾಗಿ ಮೂರು ವಲಯಗಳಾಗಿ ಮಾಡಿ ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಮೇ 22ರಂದು ರಾಜ್ಯ ಸರಕಾರ ಹೊರಡಿಸಿರುವ ಅಂತಿಮ ಕನಿಷ್ಟ ವೇತನ ಅಧಿಸೂಚನೆ ಸ್ವಾಗತರ್ಹವಾಗಿದ್ದು, ಬೆಲೆ ಏರಿಕೆ ಸೇರಿದಂತೆ ಆರ್ಥಿಕ ಸಂಕಷ್ಟಕ್ಕೀಡಾಗಿದ್ದ ಲಕ್ಷಾಂತರ ಕಾರ್ಮಿಕರಿಗೆ ಸಹಾಯವಾಗಲಿದೆ ಎಂದರು.

ನಗರದ ಹೊರವಲಯದಲ್ಲಿರುವ ಜಿಲ್ಲಾಡಳಿತ ಭವನದ ಪ್ರತಿಭಟನೆಯಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿದರು.

ಆದರೇ ಸದರಿ ಕನಿಷ್ಟ ವೇತನ ಅಧಿಸೂಚನೆಯಿಂದ ಹೊರಗಿಟ್ಟಿರುವ ಬಹುತೇಕ ಲಕ್ಷಾಂತರ ಬಡ ಮಹಿಳೆಯರಿರುವ ಗಾರ್ಮೆಂಟ್ಸ್, ಪ್ಲಾಂಟೇಷನ್, ಬೀಡಿ, ಕೈಮಗ್ಗ ಮುಂತಾದ 19 ಉದ್ದಿಮೆಗಳಲ್ಲಿಯ ಕಾರ್ಮಿಕರಿಗೆ ಅನ್ಯಾಯವಾಗಲಿದೆ. ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯತಿ ನೌಕರ ಸಂಘದ ಜಿಲ್ಲಾ ಮುಖಂಡ ಫಕ್ಕಿರೇಶ ಹಕ್ಕಿಮರೆಣ್ಣನವರ, ಮಂಜು ರಟ್ಟಿಹಳ್ಳಿ, ಆಂಜನೇಯ ನಾಗಣ್ಣನವರ, ಕಟ್ಟಡ ಕಾರ್ಮಿಕ ಸಂಘಟನೆ ಮುಖಂಡ ಚನವೀರಯ್ಯ ಹಿರೇಮಠ, ರಿಯಾಜ್ ಅಹಮದ್ ಮರಫಾಜಿ, ರಿಯಾಜ್ ಕೋಟೆನವರ, ಸಾಬೀರ ಕಡಕೋಳ, ಸ್ವಚ್ಛವಾಹಿನಿ ಕಾರ್ಮಿಕ ಮುಖಂಡ ಗಾಯತ್ರಿ ಬಲ್ಮುರಿ, ಮಮತಾ ಆನವಟ್ಟಿ, ಲತಾ ಯಲಗಚ್ಚ, ದೀಪಾ ಶಿರಗಂಬಿ, ಶೋಭಾ ಬೂದಗಟ್ಟಿ ಇದ್ದರು.

ಜಿಲ್ಲಾ ಕೃಷಿಕ ಸಮಾಜ ಕಾರ್ಯಕಾರಿ ಸಮಿತಿ ಸಭೆ ಯಶಸ್ವಿ

ಧಾರವಾಡ: ಜಿಲ್ಲಾ ಕೃಷಿಕ ಸಮಾಜ ಕಾರ್ಯಕಾರಿ ಸಮಿತಿ ಜಿಲ್ಲಾಧ್ಯಕ್ಷ ಮಲ್ಲನಗೌಡ ಸೋಮನಗೌಡ ಪಾಟೀಲ ಅಧ್ಯಕ್ಷತೆಯಲ್ಲಿ ಸಭೆಯು ಜಂಟಿ ಕೃಷಿ ನಿರ್ದೇಶಕರ ಕಚೇರಿ ಶನಿವಾರ ಜರುಗಿತು.

ಕೃಷಿ ಇಲಾಖೆಯಿಂದ ರೈತರಿಗೆ ಸಹಾಯಧನದಡಿಯಲ್ಲಿ ದೊರೆಯುವ ಮುಂಗಾರು ಬಿತ್ತನೆ ಬೀಜಗಳ ಮಾಹಿತಿ ತಿಳಿಸಲಾಯಿತು ಹಾಗೂ ಬೇಡಿಕೆಗನುಗುಣವಾಗಿ ಜಿಲ್ಲೆಯಲ್ಲಿ ಬಿತ್ತನೆ ಬೀಜ ಲಭ್ಯವಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು, ಹನಿ ನೀರಾವರಿ ರಾಷ್ಟ್ರೀಯ ತೋಟಗಾರಿಕಾ ಮಿಶನ್ ಹಾಗೂ ಯಾಂತ್ರಿಕರಣ ಯೋಜನೆಯಡಿ ರೈತರಿಗೆ ಸಹಾಯಧನದಡಿಯಲ್ಲಿ ಸ್ಪ್ರೇಯರ್ಸ್, ಮಿನಿ ಟ್ರ್ಯಾಕ್ಟರ್, ಟ್ರೇಲರ್, ರೋಟಾವೇಟರ್ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ರೇಷ್ಮೆ ಇಲಾಖೆ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಉತ್ತೇಜನಕ್ಕಾಗಿ ಸರಕಾರದಿಂದ ರೇಷ್ಮೆ ನಾಟಿಗೆ, ರೇಷ್ಮೆ ಮನೆಗೆ ಹಾಗೂ ಗೂಡು ಮಾರಾಟಕ್ಕೆ ಇರುವ ಸಹಾಯಧನದ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಪಶು ಸಂಗೋಪನೆ ಇಲಾಖೆಯ ಉಪ ನಿರ್ದೇಶಕರು, ಪ್ರಸ್ತುತ ಇಲಾಖೆಯಲ್ಲಿ ಸಾಂಕ್ರಾಮಿಕ ರೋಗದ ಲಸಿಕಾ ಕಾರ್ಯಕ್ರಮ ಚಾಲ್ತಿಯಲ್ಲಿದ್ದು ವರ್ಷಕ್ಕೆ ಎರೆಡು ಬಾರಿ ಲಸಿಕೆ ನೀಡಲಾಗುವುದು ಹಾಗೂ ರೈತರಿಗೆ 50 % ಸಹಾಯಧನದಡಿಯಲ್ಲಿ ಮೇವು ಕತ್ತರಿಸುವ ಯಂತ್ರ ಮತ್ತು ರಾಸುಗಳ ನೇಲಹಾಸುಗಳನ್ನು ವಿತರಿಸುವ ಕಾರ್ಯಕ್ರಮ ಇರುತ್ತದೆ ಎಂದರು.

ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರು ಮಾತನಾಡಿ, ಇಲಾಖೆಯಿಂದ ಮೀನುಕೊಳ ನಿರ್ಮಿಸಿಕೊಳ್ಳಲು 40 % ಸಹಾಯಧನ, ಮೀನು ಮಾರಾಟಗಾರರಿಗೆ ಮೋಟರ್‌ಸೈಕಲ್ ತೆಗೆದುಕೊಳ್ಳಲು ಸಹಾಯಧನ, ಈಗಾಗಲೇ ಕೃಷಿ ಹೊಂಡ ಹೊಂದಿದ ರೈತರಿಗೆ ಉಚಿತವಾಗಿ 500 ಮೀನು ಮರಿಗಳನ್ನು ವಿತರಿಸುವ ಕಾರ್ಯಕ್ರ ಮವಿರುತ್ತದೆ ಎಂದು ತಿಳಿಸಿದರು. ಕೌಶಲಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಇದುವರೆಗೆ 3500 ಯುವಕರಿಗೆ ಕೌಶಲ ತರಬೇತಿ ನೀಡಲಾಗಿದ್ದು, ಜಿಲ್ಲೆಯಲ್ಲಿ ಇದುವರೆಗೆ 7 ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ.

ಜಂಟಿ ಕೃಷಿ ನಿರ್ದೇಶಕ ಮಂಜುನಾಥ ಅಂತರವಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗಪ್ಪಾ ಬಾಡಿನ, ಜಿಲ್ಲಾ ಖಜಾಂಜಿ ಬಸಪ್ಪ ಗುಡೆಣ್ಣವರ ಇದ್ದರು.

ಜಿಲ್ಲಾ ಕೃಷಿಕ ಸಮಾಜ ಕಾರ್ಯಕಾರಿ ಸಮಿತಿ ಜಿಲ್ಲಾಧ್ಯಕ್ಷ ಮಲ್ಲನಗೌಡ ಸೋಮನಗೌಡ ಪಾಟೀಲ ಅಧ್ಯಕ್ಷತೆಯಲ್ಲಿ ಸಭೆಯು ಜಂಟಿ ಕೃಷಿ ನಿರ್ದೇಶಕರ ಕಚೇರಿ ಶನಿವಾರ ಜರುಗಿತು.

ರಾಜ್ಯ ಸರಕಾರ ಹೊರಡಿಸಿರುವ ಅಧಿಸೂಚನೆಯಿಂದ ಲಕ್ಷಾಂತರ ಬಡ ಮಹಿಳೆಯರಿಗೆ ಅನ್ಯಾಯ

ಕನಿಷ್ಠ ವೇತನ ಪರಿಷ್ಕರಣೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ ಹುಬ್ಬಳ್ಳಿ

ಹಮಾಲಿ, ಬಿಸಿಯೂಟ, ಸ್ವಚ್ಛವಾಹಿನಿ, ಗ್ರಾಮ ಪಂಚಾಯತಿ ಮುಂತಾದ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ತಹಸೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿ ತಹಸೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಕಾರ್ಮಿಕರ ನಿರಂತರ ಹೋರಾಟದ ಫಲವಾಗಿ ಪ್ರತಿ ಉದ್ದಿಮೆಗೆ ಪ್ರತ್ಯೇಕವಾಗಿ ಕನಿಷ್ಟ ವೇತನ ಅಧಿಸೂಚನೆ ಹೊರಡಿಸದೇ ಬಹುತೇಕ ಉದ್ದಿಮೆಗಳಿಗೆ ಏಕರೂಪವಾಗಿ ಹಾಗೂ ಹಿಂದೆ ಇದ್ದ ನಾಲ್ಕು ವಲಯಕ್ಕೆ ಬದಲಾಗಿ ಮೂರು ವಲಯಗಳಾಗಿ ಮಾಡಿ ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಮೇ 22ರಂದು ರಾಜ್ಯ ಸರಕಾರ ಹೊರಡಿಸಿರುವ ಅಂತಿಮ ಕನಿಷ್ಟ ವೇತನ ಅಧಿಸೂಚನೆ ಸ್ವಾಗತರ್ಹವಾಗಿದ್ದು. ಬೆಲೆ ಏರಿಕೆ ಸೇರಿದಂತೆ ಆರ್ಥಿಕ ಸಂಕಷ್ಟಕ್ಕೀಡಾಗಿದ್ದ ಲಕ್ಷಾಂತರ ಕಾರ್ಮಿಕರಿಗೆ ಸಹಾಯವಾಗಲಿದೆ.

ಕನಿಷ್ಠ ವೇತನ ಅಧಿಸೂಚನೆಯಿಂದ ಹೊರಗಿಟ್ಟಿರುವ ಬಹುತೇಕ ಲಕ್ಷಾಂತರ ಬಡ ಮಹಿಳೆಯರಿರುವ ಗಾರ್ಮೆಂಟ್ಸ್, ಪ್ಲಾಂಟೇಷನ್, ಬೀಡಿ, ಕೈಮಗ್ಗ ಮುಂತಾದ 19 ಉದ್ದಿಮೆಗಳಲ್ಲಿಯ ಕಾರ್ಮಿಕರಿಗೆ ಅನ್ಯಾಯವಾಗಲಿದ್ದು. ಈ ಉದ್ದಿಮೆಗಳಿಗೆ ಪರಿಷ್ಕೃತ ಕನಿಷ್ಟ ವೇತನವನ್ನು ಜಾರಿ ಮಾಡಿ ಅಧಿಸೂಚನೆ ಹೊರಡಿಸಬೇಕು. ಲೋಡಿಂಗ್ ಅನ್ಲೋಡಿಂಗ್ (ಹಮಾಲಿ) ಸೇರಿದಂತೆ ತುಂಡು ಕೆಲಸ ಸ್ವರೂಪದ ಶ್ರಮಿಕ ಪ್ರಾಧಾನ್ಯ ಉದ್ದಿಮೆಗಳಿಗೆ ಪರಿಷ್ಕರಣೆ ಮಾಡಲಾಗುವುದೆಂದು ಅಧಿಸೂಚನೆಯಲ್ಲಿ ಹೇಳಲಾಗಿದೆ. ಅದಕ್ಕೆ ಯಾವುದೇ ಕಾಲಮಿತಿ ನಿಗದಿ ಮಾಡಿಲ್ಲ. ಕೂಡಲೇ ಈ ಕಾರ್ಮಿಕರಿಗೂ ಪರಿಷ್ಕೃತ ಕನಿಷ್ಟ ವೇತನ ನಿಗದಿಮಾಡಬೇಕು ಹಾಗೂ ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸ್ಕೀಂ ನೌಕರರನ್ನು ಕನಿಷ್ಟ ವೇತನ ವ್ಯಾಪ್ತಿಗೆ ತರಬೇಕೆಂದು ಒತ್ತಾಯಿಸಿ ಇಂದು ಸಿಐಟಿಯು ಧಾರವಾಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಈ ಮನವಿ ಪತ್ರವನ್ನು ತಮಗೆ ಸಲ್ಲಿಸುತ್ತಿದ್ದು ಸರಕಾರ ಕೂಡಲೇ ಕ್ರಮವಹಿಸಲು ಆಗ್ರಹಿಸುತ್ತೇವೆ. ರಾಜ್ಯ ಸರಕಾರ ಕನಿಷ್ಟ ವೇತನದ ಕರಡು ಅಧಿಸೂಚನೆ ಹೊರಡಿಸಿದ ದಿನಾಂಕವಾದ 2025 ಏಪ್ರಿಲ್ 11 ರಿಂದಲೇ ಪೂರ್ವಾನ್ವಯಿಸಿ ಕನಿಷ್ಠ ವೇತನ ಜಾರಿಗೆ ತರಬೇಕು. ಒಂದು ವರ್ಷದ ಅರಿಯರ್ಸ್ ಕಾರ್ಮಿಕರಿಗೆ ನೀಡಬೇಕು. ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ಸ್ಕೀಂ ನೌಕರರನ್ನು ಹಾಗೂ ಸ್ವಚ್ಛವಾಹಿನಿ ನೌಕರರನ್ನು ಕನಿಷ್ಟ ವೇತನ ವ್ಯಾಪ್ತಿಗೆ ತರಬೇಕು. ಮಾಲೀಕರ ಯಾವುದೇ ಒತ್ತಡಕ್ಕೆ ಮಣಿಯದೆ ಈ ಪರಿಷ್ಕೃತ ಕನಿಷ್ಠ ವೇತನದ ಆದೇಶವನ್ನು ರಾಜ್ಯ ಸರಕಾರ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಆಗ್ರಹಿಸಿದರು.

ಹಮಾಲಿ, ಬಿಸಿಯೂಟ, ಸ್ವಚ್ಛವಾಹಿನಿ, ಗ್ರಾಮ ಪಂಚಾಯತಿ ಮುಂತಾದ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ತಹಸೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕಾರ್ಮಿಕರಿಗೆ 36,000 ರು. ಕನಿಷ್ಟ ವೇತನ ನಿಗದಿ ಮಾಡಿ

ಸುಪ್ರೀಂ ಕೋರ್ಟ್ ಐತಿಹಾಸಿಕ 'ರೆಪ್ತಕೋಸ್ ಬ್ರೆಟ್ ಆಂಡ್ ಕಂ' ಪ್ರಕರಣದಲ್ಲಿ ನಿಗದಿಪಡಿಸಿದ ಮಾನದಂಡಗಳನ್ನು ಆಧರಿಸಿ ಕನಿಷ್ಟ ವೇತನ ನಿಗದಿಪಡಿಸಬೇಕೆಂಬ ಹೈಕೋರ್ಟ್ ನಿರ್ದೇಶನದಂತೆ ರಾಜ್ಯ ಸರಕಾರ ಕನಿಷ್ಟ ವೇತನ ಪರಿಷ್ಕರಣೆ ಮಾಡಬೇಕು. ಇಂದಿನ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚಕ್ಕೆ ಅನುಗುಣವಾಗಿ ಎಲ್ಲ ಕಾರ್ಮಿಕರಿಗೆ ಸರಾಸರಿ ರು. 36,000 ಕನಿಷ್ಟ ವೇತನ ನಿಗದಿಪಡಿಸಬೇಕು.

ಪರಿಷ್ಕೃತ ಕನಿಷ್ಟ ವೇತನ ಅಧಿಸೂಚನೆಯಿಂದ ಹೊರಗಿಟ್ಟಿರುವ ಬಹುತೇಕ ಲಕ್ಷಾಂತರ ಬಡ ಮಹಿಳೆಯರಿರುವ ಗಾರ್ಮೆಂಟ್ಸ್, ಪ್ಲಾಂಟೇಷನ್, ಬೀಡಿ, ಕೈಮಗ್ಗ ಮುಂತಾದ 19 ಉದ್ದಿಮೆಗಳಲ್ಲಿಯ ಕಾರ್ಮಿಕರಿಗೆ ಅನ್ಯಾಯವಾಗಲಿದ್ದು. ಈ ಉದ್ದಿಮೆಗಳಿಗೆ ಪರಿಷ್ಕೃತ ಕನಿಷ್ಟ ವೇತನವನ್ನು ಜಾರಿ ಮಾಡಿ ಅಧಿಸೂಚನೆ ಹೊರಡಿಸಬೇಕು. ಕೂಡಲೇ ಈ ಕಾರ್ಮಿಕರಿಗೂ ಕನಿಷ್ಟ ವೇತನ ದರಗಳನ್ನು ನಿಗದಿ ಮಾಡಬೇಕು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ ಪತ್ತಾರ, ಜಿಲ್ಲಾಧ್ಯಕ್ಷ ಬಿ.ಐ. ಈಳೀಗೇರ, ಮುಖಂಡರಾದ ಬಸವಣ್ಣೆಪ್ಪ ನೀರಲಗಿ, ಗುರುಸಿದ್ದಪ್ಪ ಅಂಬಿಗೇರ, ನಾರಾಯಣ ಆರೇರ, ಮಂಜುನಾಥ ಹುಜರಾತಿ, ಶೋಭಾ ಮೂಲಿಮನಿ, ನೀಲವ್ವ ಕುರುಬರ, ಶಕುಂತಲಾ ಘಾಡಿ, ಮಂಜುನಾಥ ದೊಡಮನಿ, ಮಹೇಶ ಹುಲಗೋಡ, ಗಾಳೆಪ್ಪ ಮುತ್ಯಾಳ ಮುಂತಾದವರು ಪ್ರತಿಭಟನೆ ನೇತೃತ್ವ ವಹಿಸಿದ್ದರು.

ಸಮಾಚಾರ ಸಣ್ಣದಲ್ಲ

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರನ್ನಾಗಿ ಸಂತೋಷ್ ಕುಮಾರ್ ಅವರನ್ನು ನೇಮಕ ಮಾಡಿ ಸರಕಾರ ಆದೇಶಿಸಿದೆ. ಮೇ 27ರಿಂದ ಜಾರಿಗೆ ಬರುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ಸಂತೋಷ್‌ರನ್ನು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ತಿಳಿಸಿದೆ. ಅಧ್ಯಕ್ಷರ ನೇಮಕಾತಿ ಜತೆಗೆ ಮೂವರು ಸದಸ್ಯರನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಸತ್ಯನಾರಾಯಣ ಶೆಟ್ಟಿ, ಜಗನ್ನಾಥ ಹಲಮಡಗಿ ಮತ್ತು ವೆಂಕಟೇಶ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ನೇಮಕ ಮಾಡಿ ಸರಕಾರ ಆದೇಶಿಸಿದೆ ಎಂದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಕೆಪಿಸಿಸಿ ಮುಖ್ಯವಕ್ತಾರರಾಗಿ ಡಿ.ಬಸವರಾಜ್ ನೇಮಕ

ದಾವಣಗೆರೆ: ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಅವರಿಗೆ ಬಡ್ತಿ ನೀಡಿ ಕೆಪಿಸಿಸಿ ಮುಖ್ಯ ವಕ್ತಾರರನ್ನಾಗಿ ನೇಮಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಮಾಧ್ಯಮ ವಿಭಾಗದ ಅಧ್ಯಕ್ಷ

ರಮೇಶ್ ಬಾಬು ಅವರು ಬಸವರಾಜ್ ಅವರನ್ನು ಬೆಂಗಳೂರು ವಿಭಾಗದ ಕೆಪಿಸಿಸಿ ಮಾಧ್ಯಮ ಮುಖ್ಯಸ್ಥರನ್ನಾಗಿಯೂ ನೇಮಿಸಿ ಆದೇಶ ಹೊರಡಿಸಿದ್ದಾರೆ. ದಾವಣಗೆರೆ, ಚಿತ್ರದುರ್ಗ, ತುಮಕೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ವ್ಯಾಪ್ತಿಯ ಉಸ್ತುವಾರಿಯನ್ನು ನೀಡಲಾಗಿದೆ. ಬೆಂಗಳೂರು ವಿಭಾಗಕ್ಕೆ ಮುಖ್ಯ ವಕ್ತಾರರಾಗಿ ನೇಮಕಗೊಂಡಿರುವ ಐಶ್ವರ್ಯ ಮಹದೇವ್ ಅವರಿಗೆ ಬೆಂಗಳೂರು ನಗರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ ಎಂದು ಕೆಪಿಸಿಸಿ ಪ್ರಕಟಣೆ ತಿಳಿಸಿದೆ.

ಮನ್ ಕಿ ಬಾತ್‌ನಲ್ಲಿ ಮಾವಿನ ಸವಿ

← ಮೊದಲಪುಟದಿಂದ

ದೇಸೀ ತಂಪು ಪಾನೀಯದಲ್ಲೂ ಏಕ ಭಾರತ್ –ಶ್ರೇಷ್ಠ ಭಾರತ್ ಎಂದು ಘೋಷಿಸಿದರು. ಜಲಸಂರಕ್ಷಣೆ, ಸಮಾಜಕ್ಕೆ ಉತ್ತಮ ಕೆಲಸಗಳನ್ನು ಮಾಡುವವರನ್ನು ಗುರುತಿಸಿ ಗೌರವಿಸಬೇಕಾದ ಬಗೆಗೂ ಗಮನ ಸೆಳೆದರು. ಚೋಳ ಮಹಾರಾಜರ ಆಡಳಿತ ಕಾಲದ ಅಮೂಲ್ಯ ಕಲಾಕೃತಿ ಭಾರತಕ್ಕೆ ಮರಳಿರುವುದನ್ನು ವಿವರಿಸಿದರು. ಭಾರತದ ಯುವಶಕ್ತಿ ತಂತ್ರಜ್ಞಾನ, ಕ್ರೀಡೆ ಮತ್ತು ನಾವೀನ್ಯತೆಗಳಲ್ಲಿ ಜಾಗತಿಕವಾಗಿ ಹೇಗೆ ಮುಂಚೂಣಿಗೆ ಬರುತ್ತಿದೆ ಎಂಬುದನ್ನು ಒತ್ತಿ ಹೇಳಿದರು. ನಮ್ಮ ದೇಶದ ಇತಿಹಾಸ, ಸಂಸ್ಕೃತಿ ಮತ್ತು ಕ್ರೀಡೆಯನ್ನು ಒಟ್ಟಿಗೆ ಕೊಂಡೊಯ್ಯುವ ಮೂಲಕ ದೇಶವು ವಿಕಸಿತ ಭಾರತ'ದತ್ತ ಮುನ್ನಡೆಯುತ್ತಿದೆ ಎಂದರು.

8 ತಿಂಗಳ ವಿರಾಮದ ಬಳಿಕ ಜೂ.10ರಿಂದ ಸ್ಟಾರ್ ಏರ್ ಸೇವೆ ಪುನರಾರಂಭ | ಸಾರ್ವಜನಿಕರ ಬೇಡಿಕೆಗೆ ಮಣಿದು ಬೆಳಗಿನ ವೇಳೆಯಲ್ಲೇ ಸಂಚಾರ

ಕಲಬುರಗಿ-ಬೆಂಗಳೂರು ವಿಮಾನಯಾನಕ್ಕೆ ಮತ್ತೆ ಚೈತನ್ಯ

ದೇವೇಂದ್ರ ಜಾಡಿ ಕಲಬುರಗಿ

ಎಂಟು ತಿಂಗಳಿನಿಂದ ಸ್ಥಗಿತಗೊಂಡಿದ್ದ ಕಲಬುರಗಿ-ಬೆಂಗಳೂರು ವಿಮಾನ ಸೇವೆ ಜೂ.10ರಿಂದ ಪುನರಾರಂಭವಾಗುತ್ತಿರುವುದು ಕಲ್ಯಾಣ ಕರ್ನಾಟಕ ಭಾಗದ ಜನತೆಗೆ ಮಹತ್ವದ ಸೌಲಭ್ಯವಾಗಿ ಪರಿಣಮಿಸಿದೆ. ವ್ಯಾಪಾರ, ಉದ್ಯಮ, ಶಿಕ್ಷಣ, ವೈದ್ಯಕೀಯ ಹಾಗೂ ಆಡಳಿತಾತ್ಮಕ ಕಾರಣಗಳಿಂದ ರಾಜ್ಯ ರಾಜಧಾನಿಯೊಂದಿಗೆ ನೇರ ಸಂಪರ್ಕದ ಅಗತ್ಯವನ್ನು ನಿರಂತರವಾಗಿ ಒತ್ತಿಹೇಳುತ್ತಿದ್ದ ಸಾರ್ವಜನಿಕರು, ಉದ್ಯಮಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಬೇಡಿಕೆಗೆ ಕೊನೆಗೂ ಸ್ಪಂದನೆ ದೊರೆತಿದೆ.

ಕಳೆದ ವರ್ಷದ ಅಕ್ಟೋಬರ್ 15ರಂದು ಸ್ಥಗಿತಗೊಂಡಿದ್ದ ವಿಮಾನ ಸೇವೆ ಪುನರಾರಂಭಗೊಳ್ಳಲು ರಾಜ್ಯ ಸರಕಾರ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ನೀಡಿದ ವೆಚ್ಚ ಸರಿದೂಗಿಸುವ ನಿಧಿ (ವಿಜಿಎಫ್) ನೆರವಾಗಿದೆ. ಈ ಪ್ರಕ್ರಿಯೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಪ್ರಯತ್ನಗಳು ಪ್ರಮುಖ ಪಾತ್ರ ವಹಿಸಿವೆ ಎನ್ನಲಾಗಿದೆ.

ಆರಂಭದಲ್ಲಿ ಸಂಜೆ ವೇಳೆಯಲ್ಲಿ ರೌಂಡ್ ಟ್ರಿಪ್ ಸೇವೆ ಆರಂಭಿಸುವ ಕುರಿತು ಮಾಹಿತಿ ನೀಡಲಾಗಿದ್ದರೂ ಬಳಿಕ ಸಾರ್ವಜನಿಕರು ಮತ್ತು ಕಲ್ಯಾಣ ಕರ್ನಾಟಕ ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ಸಲ್ಲಿಸಿದ ಮನವಿಯನ್ನು ಪರಿಗಣಿಸಿ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದೆ. ಅದರಂತೆ ಜೂ.10ರಿಂದಲೇ ಕಲಬುರಗಿ-ಬೆಂಗಳೂರು ನಡುವೆ ಬೆಳಗಿನ ವೇಳೆಯ ವಿಮಾನ ಸೇವೆ ಲಭ್ಯವಾಗಲಿದೆ.

ಬೆಳಗಿನ ವಿಮಾನ ಸೇವೆ ಆರಂಭಿಸುವುದು ಹಲವು ವರ್ಷಗಳಿಂದ ಈ ಭಾಗದ ಜನರ ಪ್ರಮುಖ ಬೇಡಿಕೆಯಾಗಿತ್ತು. ಬೆಳಗ್ಗೆ ಬೆಂಗಳೂರಿಗೆ ತೆರಳಿ ಅದೇ ದಿನ ವಿವಿಧ ಕೆಲಸಗಳನ್ನು ಮುಗಿಸಿ ಮರಳುವ ಅವಕಾಶ ದೊರೆಯುವುದರಿಂದ ಉದ್ಯಮಿಗಳು, ವಿದ್ಯಾರ್ಥಿಗಳು, ವೈದ್ಯಕೀಯ ಸೇವೆ ಪಡೆಯುವ ರೋಗಿಗಳು ಹಾಗೂ ಸರಕಾರಿ ಅಧಿಕಾರಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

ಕಲಬುರಗಿ ವಿಮಾನ ನಿಲ್ದಾಣದ ಮೂಲಕ ಪ್ರಯಾಣಿಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ವಿಮಾನ ಸೇವೆಗಳ ವಿಸ್ತರಣೆಗೆ ಬೇಡಿಕೆಯೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬೆಳಗಿನ ಸೇವೆಯ ಜತೆಗೆ ಸಂಜೆ ವೇಳೆಯಲ್ಲಿಯೂ ಹೆಚ್ಚುವರಿ ವಿಮಾನ ಸಂಚಾರ ಆರಂಭಿಸುವಂತೆ ಕೆಕೆಸಿಸಿಐ ಸ್ಟಾರ್ ಏರ್ ಸಂಸ್ಥೆಗೆ ಮತ್ತೊಮ್ಮೆ ಮನವಿ ಮಾಡಿದೆ. ಒಟ್ಟಾರೆ, ಎಂಟು ತಿಂಗಳ ಬಳಿಕ ಪುನರಾರಂಭವಾಗುತ್ತಿರುವ ಈ ವಿಮಾನ ಸೇವೆ ಕೇವಲ ಸಾರಿಗೆ ಸೌಲಭ್ಯವಷ್ಟೇ ಅಲ್ಲ, ಕಲ್ಯಾಣ ಕರ್ನಾಟಕದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಹೊಸ ಚೈತನ್ಯ ನೀಡುವ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಸಾರ್ವಜನಿಕರ ಹೋರಾಟಕ್ಕೆ ಸಿಕ್ಕ ಫಲ

ಸುಮಾರು ಎಂಟು ತಿಂಗಳ ಬಳಿಕ ಕೆಕೆಆರ್‌ಡಿಬಿ ಹಾಗೂ ರಾಜ್ಯ ಸರಕಾರದ ವಿಜಿಎಫ್ ನೆರವು ಪ್ರಮುಖ ಕಾರಣವಾಗಿದೆ. ಕಲಬುರಗಿ ಬೆಂಗಳೂರು ವಿಮಾನ ಸೇವೆ ಸ್ಥಗಿತಗೊಂಡ ಬಳಿಕ ಉದ್ಯಮಿಗಳು, ವಾಣಿಜ್ಯ ಸಂಸ್ಥೆಗಳು, ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರು ನಿರಂತರವಾಗಿ ಸರಕಾರದ ಮೇಲೆ ಒತ್ತಡ ಹೇರಿದ್ದರು. ಕೆಕೆಸಿಸಿಐ ನೇತೃತ್ವದಲ್ಲಿ ನಡೆದ ಮನವಿ, ಸಭೆಗಳು ಹಾಗೂ ಪ್ರತಿನಿಧಿ ಮಂಡಳಿಗಳ ಪ್ರಯತ್ನ ಫಲವಾಗಿ ಸ್ಟಾರ್ ಏರ್ ಸಂಸ್ಥೆ ಜೂ.10ರಿಂದ ಸೇವೆ ಮರು ಆರಂಭಿಸಲು ತೀರ್ಮಾನಿಸಿದೆ.

ಕಲಬುರಗಿ-ಬೆಂಗಳೂರು ವಿಮಾನ ಸೇವೆ ಪುನರಾರಂಭವಾಗುತ್ತಿರುವುದು ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಸಂತಸದ ವಿಚಾರ. ಈ ಸಂಪರ್ಕದಿಂದ ವ್ಯಾಪಾರ, ಕೈಗಾರಿಕೆ, ಶಿಕ್ಷಣ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಉತ್ತೇಜನ ಸಿಗಲಿದ್ದು, ಇನ್ನಷ್ಟು ನಗರಗಳಿಗೆ ವಿಮಾನ ಸಂಪರ್ಕ ವಿಸ್ತರಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು.

-ಉಮೇಶ್ ಜಾಧವ್ ಮಾಜಿ ಸಂಸದ

ಜೂ.10ರಿಂದ ಬೆಂಗಳೂರು-ಕಲಬುರಗಿ ವಿಮಾನ ಸೇವೆ ಪುನರಾರಂಭಗೊಳ್ಳುತ್ತಿರುವುದು ಕಲ್ಯಾಣ ಕರ್ನಾಟಕದ ಹೆಮ್ಮೆಯ ಕ್ಷಣ. ಈ ವಾಯು ಸಂಪರ್ಕವು ನಮ್ಮ ಭಾಗದ ವ್ಯಾಪಾರ, ಪ್ರವಾಸೋದ್ಯಮ ಮತ್ತು ಉದ್ಯೋಗಾವಕಾಶಗಳ ಬೆಳವಣಿಗೆಗೆ ಹೊಸ ದಾರಿಯಾಗಲಿದ್ದು, ಸಮಗ್ರ ಅಭಿವೃದ್ಧಿಗೆ ಕೈಗನ್ನಡಿಯಾಗಲಿದೆ.

-ಶರಣು ಪಪ್ಪಾ, ಕೆಕೆಸಿಸಿಐ ಅಧ್ಯಕ್ಷ

ಮುಂದಿನ ಗುರಿ ದೆಹಲಿ-ತಿರುಪತಿ ಸಂಪರ್ಕ

ವಿಮಾನ ಸೇವೆ ಪುನರಾರಂಭದೊಂದಿಗೆ ಕಲಬುರಗಿಯಿಂದ ದೆಹಲಿ, ತಿರುಪತಿ ಹಾಗೂ ಇತರ ಪ್ರಮುಖ ನಗರಗಳಿಗೆ ನೇರ ಸಂಪರ್ಕ ಕಲ್ಪಿಸುವ ಬೇಡಿಕೆ ಮತ್ತೆ ಬಲ ಪಡೆದಿದೆ. ಕೇಂದ್ರ ಸರಕಾರದ ಉಡಾನ್ ಯೋಜನೆಯಡಿ ಹೆಚ್ಚಿನ ಮಾರ್ಗಗಳು ಮತ್ತು ಹೆಚ್ಚುವರಿ ವಿಮಾನ ಸೇವೆಗಳನ್ನು ಒದಗಿಸಿದರೆ ಕಲ್ಯಾಣ ಕರ್ನಾಟಕದ ಕೈಗಾರಿಕೆ, ಪ್ರವಾಸೋದ್ಯಮ ಹಾಗೂ ಹೂಡಿಕೆ ಅವಕಾಶಗಳಿಗೆ ಉತ್ತೇಜನ ನೀಡಬೇಕೆಂಬ ಒತ್ತಾಯ ಕೇಳಿಬಂದಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ.50 ರಷ್ಟು ಕಡಿಮೆ ನೀರಿನ ಸಂಗ್ರಹ

ಮುಂಗಾರು ಕೊರತೆ: ಬರಿದಾದ ಜಲಾಶಯ

ಬೆಂಗಳೂರು: ಪೂರ್ವ ಮುಂಗಾರು ಮಳೆ ಸಾಕಷ್ಟು ಪ್ರಮಾಣ ದಲ್ಲಿ ಬೀಳದ ಹಿನ್ನೆಲೆಯಲ್ಲಿ ಜಲಾಶಯಗಳ ಒಡಲು ಬರಿದಾಗುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಕಾವೇರಿ ಕೊಳ್ಳದ ಜಲಾಶಯಗಳಿಗೆ ಒಳ ಹರಿವು ಆರಂಭವಾಗಿಲ್ಲ. ಹೀಗಾಗಿ ಗಣನೀಯ ಪ್ರಮಾಣದಲ್ಲಿ ಜಲಾಶಯದ ನೀರು ಕಡಿಮೆಯಾಗುತ್ತಿದೆ. ಮುಂಗಾರು ಸಕಾಲದಲ್ಲಿ ಆರಂಭಗೊಂಡು ಜಲಾನಯನ ಪ್ರದೇಶದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾದರೆ ಜಲಾಶಗಳಿಗೆ ಸಾಕಷ್ಟು ನೀರು ಹರಿದು ಬರಲಿದೆ. ಇಲ್ಲದಿದ್ದರೆ, ಜಲಾಶಯಗಳೂ ನೀರಿನ ಕೊರತೆ ಎದುರಿಸ ಬೇಕಾದ ಪರಿಸ್ಥಿತಿ ತಲೆದೋರಲಿದೆ. ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಮೇ 30ರ ವೇಳೆಗೆ ಕಾವೇರಿ ಕೊಳ್ಳದ ನಾಲ್ಕು ಜಲಾಶಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ.50ರಷ್ಟು ಕಡಿಮೆ ನೀರಿನ ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 67.06 ಟಿಎಂಸಿ ಅಡಿ ನೀರು ನಾಲ್ಕು ಜಲಾಶಯ ಗಳಲ್ಲಿತ್ತು. ಆದರೆ, ಈ ವರ್ಷ ಕೇವಲ 33.83 ಟಿಎಂಸಿ ಅಡಿಯಷ್ಟಿದೆ. ಅಂದರೆ ಶೇ. 30ರಷ್ಟು ಮಾತ್ರ ನೀರಿದೆ.

ಹಾರಂಗಿ ಜಲಾಶಯದಲ್ಲಿ 2.98 ಟಿಎಂಸಿ ನೀರಿದ್ದು, ಕಳೆದ ವರ್ಷ 5.11 ಟಿಎಂಸಿ ನೀರಿತ್ತು. ಹೇಮಾವತಿ ಜಲಾಶಯದಲ್ಲಿ 14.77 ಟಿಎಂಸಿ ನೀರಿದ್ದು, ಕಳೆದ ರ್ಷ 23.31 ಟಿಎಂಸಿ ನೀರು ಸಂಗ್ರಹವಾಗಿತ್ತು. ಕೆಆರ್‌ಎಸ್ ಜಲಾಶಯಲ್ಲಿ 11.36 ಟಿಎಂಸಿ ನೀರಿದ್ದು, 22.89 ಟಿಎಂಸಿ ನೀರು ಕಳೆದ ವರ್ಷ ಸಂಗ್ರಹವಾಗಿತ್ತು. ಕಬಿನಿ ಜಲಾಶಯದಲ್ಲಿ 4.73 ಟಿಎಂಸಿ ನೀರಿದ್ದು, ಕಳೆದ ವರ್ಷ 15.75 ಟಿಎಂಸಿ ನೀರು ಸಂಗ್ರಹವಾಗಿತ್ತು. ನಾಲ್ಕು ಜಲಾಯಶಗಳ ಗರಿಷ್ಠ ಸಾಮರ್ಥ್ಯ 114.57 ಟಿಎಂಸಿ ಆಗಿದ್ದು, ಈಗ ಕೇವಲ 33.83 ಟಿಎಂಸಿಯಷ್ಟು ಮಾತ್ರ ಇದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಸಾಮರ್ಥ್ಯ 124.80 ಅಡಿಗಳಾಗಿದ್ದು, ಪ್ರಸ್ತುತ 81.28 ಅಡಿಗಳಷ್ಟಿದೆ. ಕಳೆದ ವರ್ಷ 100.10 ಅಡಿ ನೀರು ಸಂಗ್ರಹವಾಗಿತ್ತು.

ಕಳೆದ ವರ್ಷ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಕಾವೇರಿ ಕೊಳ್ಳದ ಜಲಾನಯನ ಭಾಗದಲ್ಲಿ ಉತ್ತಮವಾಗಿತ್ತು. ಹೀಗಾಗಿ ಈ ನಾಲ್ಕು ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ತುಂಬಿದ್ದವು. ಹಿಂಗಾರು ಮಳೆ ಕೈಕೊಟ್ಟಿತ್ತು. ಜತೆಗೆ ಬೇಸಿಗೆ ಮಳೆಯೂ ವಾಡಿಕೆ ಪ್ರಮಾಣದಲ್ಲಿ ಬೀಳಲಿಲ್ಲ. ಮಾರ್ಚ್ ಮತ್ತು ಮೇ ನಡುವಿನ ಪೂರ್ವ ಮುಂಗಾರು ಮಳೆಯೂ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ. ಕೆಲವೆಡೆ ಮಳೆಯಾದರೂ ಜಲಾಶಯಗಳಿಗೆ ಒಳ ಹರಿವು ಬರುವಷ್ಟು ಮಳೆಯಾಗಿಲ್ಲ. ಬೇಸಿಗೆಯ ಬಿಸಿಲು ಹೆಚ್ಚಾದ್ದ ರಿಂದ ಕೃಷಿ ಹಾಗೂ ಕುಡಿಯುವ ನೀರಿಗೆ ಸಾಕಷ್ಟು ಪ್ರಮಾಣದಲ್ಲಿ ನೀರಿನ ಬಳಕೆಯಾಗಿದೆ. ಅಲ್ಲದೆ, ನೀರು ಆವಿಯೂ ಆಗುತ್ತದೆ. ಒಳ ಹರಿವು ಇಲ್ಲದೆ, ಸಂಗ್ರಹಗೊಂಡಿದ್ದ ನೀರು ಬಳಸಿ ದಂತೆಲ್ಲಾ ಕಡಿಮೆಯಾಗುತ್ತಾ ಬಂದಿದೆ. ಮುಂಗಾರು ಮಳೆ ಆರಂಭವಾಗಿ ವಾಡಿಕೆ ಹಾಗೂ ವಾಡಿಕೆಗಿಂತ ಹೆಚ್ಚಾದರೆ, ಜಲಾಶಯಗಳು ಭರ್ತಿ ಯಾಗಲಿವೆ. ಆದರೆ, ವಾಡಿಕೆಗಿಂತ ಮಳೆ ಕಡಿಮೆಯಾಗಲಿದೆ ಎಂಬ ಮುನ್ಸೂಚನೆ ಇರುವುದ'ರಿಂದ ಆತಂಕ ಪಡುವಂತಾಗಿದೆ.

ಕಳಪೆ ಮುಂಗಾರು ಉಂಟಾಗುವ ಐತಿಹಾಸಿಕ ಸಾಧ್ಯತೆ

ದೇಶದಲ್ಲಿ ಸಂಪೂರ್ಣ ಬರಗಾಲ ಅಥವಾ ತೀವ್ರ ಮಳೆ ಕೊರತೆ ಉಂಟಾಗುವ ಸಾಧ್ಯತೆಯು ಶೇ.0 ರಷ್ಟಿದೆ. ಸಾಮಾನ್ಯವಾಗಿ ಯಾವುದೇ ಒಂದು ವರ್ಷದಲ್ಲಿ ಇಷ್ಟು ಕಳಪೆ ಮುಂಗಾರು ಉಂಟಾಗುವ ಐತಿಹಾಸಿಕ ಸಾಧ್ಯತೆ ಕೇವಲ ಶೇ.6 ರಷ್ಟು ಮಾತ್ರ ಇರುತ್ತದೆ. ಆದರೆ ಐಎಂಡಿ ಈ ಬಾರಿ ಆ ಭೀತಿಯನ್ನು ನಾಲ್ಕು ಪಟ್ಟು ಹೆಚ್ಚು ಮಾಡಿದೆ. ಕಳೆದ ಏಪ್ರಿಲ್‌ನಲ್ಲೇ ಐಎಂಡಿ ತನ್ನ ಮೊದಲ ಮುನ್ಸೂಚನೆಯಲ್ಲಿ ಮಳೆಯ ಪ್ರಮಾಣ ಶೇ.92ರಷ್ಟು ಇರಲಿದೆ ಎಂದು ಎಚ್ಚರಿಸಿತ್ತು. ಅದು ತಾಂತ್ರಿಕವಾಗಿ ಸಾಮಾನ್ಯಕ್ಕಿಂತ ಕಡಿಮೆ ಎನಿಸಿಕೊಂಡರೂ, ಚೇತರಿಕೆಯ ಭರವಸೆ ಇತ್ತು. ಆದರೆ ಈಗ ಕೇವಲ ಕೆಲವೇ ವಾರಗಳಲ್ಲಿ ಆ ಮುನ್ಸೂಚನೆ ಶೇ. 90 ಕ್ಕೆ ಕುಸಿದಿದೆ (ಇದರಲ್ಲಿ ಶೇ.4 ರಿಂದ 5ರಷ್ಟು ಹೆಚ್ಚು-ಕಡಿಮೆಯಾಗುವ ಮಾದರಿ ದೋಷದ ಮಾರ್ಜಿನ್ ಇದೆ). ಅಷ್ಟೇ ಅಲ್ಲದೆ, ಮಳೆಯು ಈ ಶೇ. 90 ಕ್ಕಿಂತಲೂ ಕೆಳಕ್ಕೆ ಕುಸಿಯುವ ಸಾಧ್ಯತೆ ಶೇ.35 ರಷ್ಟಿದೆ ಎಂದು ಐಎಂಡಿ ಕಳವಳ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ಇನ್ನೂ ಒಂದು ವಾರ ಮಳೆ

ಬೆಂಗಳೂರು: ನೈಋತ್ಯ ಮುಂಗಾರು ಆರಂಭಕ್ಕೂ ಮುನ್ನ ರಾಜ್ಯದಲ್ಲಿ ಮಳೆ ಆರ್ಭಟ ಜೋರಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ ಇನ್ನೂ ಒಂದು ವಾರ ಮಳೆ ಮುಂದುವರೆಯಲಿದೆ. ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆಗಳಿದ್ದು, ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.

ಕಳೆದ ಎರಡು ವಾರಗಳಿಂದ ರಾಜ್ಯದಲ್ಲಿ ಚದುರಿದಂತೆ ಅಲ್ಲಲ್ಲಿ ಮಳೆಯಾಗುತ್ತಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು, ಮಂಡ್ಯ, ಹಾಸನ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಐದರಿಂದ ಹತ್ತು ಸೆಂ.ಮೀ.ನಷ್ಟು ಉತ್ತಮ ಮಳೆಯಾಗಿದೆ. ತುಮಕೂರಿನ ತಿಮರಾಜನಹಳ್ಳಿ 111.5 ಮಿ.ಮೀ.ನಷ್ಟು ಭಾರಿ ಮಳೆಯಾಗಿದೆ.

ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಅಲ್ಲಲ್ಲಿ ಸಾಧಾರಣ ಮಳೆಯಾಗಿದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗುವ ಮುನ್ಸೂಚನೆಗಳಿವೆ. ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಹೆಚ್ಚಾಗಲಿದೆ. ಆದರೆ, ಭಾರಿ ಮಳೆ ಮುನ್ನೆಚ್ಚರಿಕೆಗಳಿಲ್ಲ. ಉತ್ತರ ಕರ್ನಾಟಕ ಭಾಗಕ್ಕೆ ಮೂರು ದಿನಗಳ ಕಾಲ ಯೆಲ್ಲೋ ಅಲರ್ಟ್ ಘೋಷಿಸಿದೆ. ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ರಾಜ್ಯಾದ್ಯಂತ ಮಳೆ ಮುಂದುವರಿ ಯಲಿದ್ದು, ಮಧ್ಯಾಹ್ನದ ನಂತರ ಅಲ್ಲಲ್ಲಿ ಮೋಡ ಕವಿದ ವಾತಾವರಣ ಕಂಡು ಬರಲಿದೆ. ಹಲವೆಡೆ ಸಂಜೆ ಹಾಗೂ ರಾತ್ರಿ ವೇಳೆ ಮಿಂಚು, ಗುಡುಗಿನಿಂದ ಕೂಡಿದ ಮಳೆಯಾಗಲಿದೆ.

ಜಾರಕಿಹೊಳಿ ವಿರುದ್ಧ ಸುಳ್ಳು ಸುದ್ದಿ: ದೂರು

ಬೆಳಗಾವಿ: ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ ವಿರುದ್ಧ ಸುಳ್ಳು ಸುದ್ದಿ ಹರಡಿಸಲಾಗುತ್ತಿದ್ದು ಈ ಕುರಿತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಎಂಬುವವರು ಭಾನುವಾರ ಬೆಳಗಾವಿ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

ಕರುನಾಡ ಕುರುಬಗೌಡ್ರು ಹಾಗೂ ಬಂಡಾಯ ಧ್ವನಿ ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರ ವಿರುದ್ಧ 37 ಶಾಸಕರಿಂದ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರು ಸಹಿ ಸಂಗ್ರಹ ಮಾಡಲಾಗಿದೆ ಎಂಬ ಗಂಭೀರ ಆರೋಪ ಮಾಡಲಾಗಿದೆ. ಆದರೆ ಈ ಆರೋಪವನ್ನು ಸ್ವತಃ ಮಾಜಿ ಸಚಿವ ಸತೀಶ್ ಜಾರಕಿಹೊಳಿ ನಿರಾಕರಿಸಿದ್ದಾರೆ. ಹೀಗಾಗಿ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಇಲ್ಲಸಲ್ಲದ ಅಪವಾದ ಹೊರಿಸಿ ಅವರ ಹೆಸರು ಹಾಳು ಮಾಡಲು ನಕಲಿ ಫೇಸ್ ಬುಕ್ ಖಾತೆಯಲ್ಲಿ ಸಂಚು ರೂಪಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕುರುಬ ಜನಾಂಗ ಮತ್ತು ವಾಲ್ಮೀಕಿ ಜನಾಂಗದ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಸಾರ್ವಜನಿಕರಲ್ಲಿ ಶಾಂತಿಭಂಗ ಮತ್ತು ದೊಂಬಿ ಉಂಟು ಮಾಡುವಂತೆ ಮಾಡಲು ಸುಳ್ಳು, ಸುದ್ದಿಗಳನ್ನು ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ. ಶೀಘ್ರವೇ ಸುಳ್ಳು ಸುದ್ದಿ ಹರಡಿಸುವವರ ಹಾಗೂ ಈ ಎರಡು ನಕಲಿ ಫೇಸ್ ಬುಕ್ ಮಾಡಿ ಅವಹೇಳನಕಾರಿ ಪೋಸ್ಟ್ ಹಾಕಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೈಬರ್ ಕ್ರೈಂ ಠಾಣೆಗೆ ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ದೂರಿನಲ್ಲಿ ದಾಖಲಿಸಿದ್ದಾರೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **23.06.2026 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	31888740000151	ಫೌಜಿಯ	9.8
2	31888740000214	ಫೌಜಿಯ	26.3
3	31888740000622	ಮರಿಯ ಜಾಯಿಸ್ ಪಿ	13
4	31888740000690	ಸೈಯದ್ ಆರಿಫ್	8.1
5	31888740000368	ಜೈನಾಬ್ ಶೇಕ್	24.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಟ್ ನಂ. 1 & 2, ಜಿಎಫ್ & ಎಂಎಫ್, ಕಯ್ಯಾರ್ ಕಾರ್ನರ್ ಸ್ಟೋನ್ ಬಿಲ್ಡಿಂಗ್ 80 ಅಡಿ ರಸ್ತೆ, ಸೈಂಟ್ ಬೆಡ್, ಕೋರಮಂಗಲ, 4ನೇ ಬ್ಲಾಕ್, ಬೆಂಗಳೂರು–560034.			
6	46458730011391	ಮುನಿಯಮ್ಮ ಎನ್	2.5
7	46458730011224	ನಾರಾಯಣಮ್ಮ ಎಂ	8.7
8	46458160003175	ಲೋಕೇಶ್ ಎಸ್	243.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್ ಹೊಸಕೋಟೆ–562114.			
9	45488730022693	ರಾಮಾಂಜನೇಯ ಹೆಚ್	11.6
10	45488730022641	ವಿಶ್ವೇಶ್ವರಯ್ಯ ಎನ್	11
11	31988730033831	ಎಸ್ ಇಶಾಕ್ ಬಾಶಾ	50
12	45488160008511	ಶಿವ ಮೂರ್ತಿ	150.4
13	45488160008501	ಶಿವಮೂರ್ತಿ	163.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101.			
14	33818160006305	ಹಾಲೇಶ್	35.5
15	31128730040099	ಸುಬ್ರಮಣ್ಯ ಆರ್	1.9
16	33818730036505	ಕರಿಬಸಪ್ಪ ಕರಿಬಸಪ್ಪ	27.4
17	31128730040047	ಆರ್ ಸಂತೋಷ್	9.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಎ ಮತ್ತು 6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ಶಾಮನೂರು ರಸ್ತೆ, ದಾವಣಗೆರೆ–577004.			
18	33648730035235	ಅರಳಮ್ಮ	2.8
19	33648740000081	ನರಸಿಂಹ ಮೂರ್ತಿ	11.1
20	33638730062549	ತುಳಸಿ ಜಿ	15.6
21	33648740000204	ದೇವರಾಜು ಸಿ	12.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ತ್ರೋ ವಿದ್ಯಾಗಣಪತಿ ದೇವಾಲಯದ ಎದುರು, ಜನಲಕ್ಷ್ಮಿ ಸಮೀಪ ಬೆಂಗಳೂರು, ಪಿನ್ ಕೋಡ್ –560060.			
22	31138730067979	ಹುಸೇನ್‌ಬಾಷಾ ಇನಾಂದಾರ್	3.9
23	45450660000417	ಬಸವರಾಜ್ ಸಿ ಜಿ	115.2
24	45428730016079	ಗೋಪಾಲ್ ಶಹಾಪುರ್	5.8
25	31768730021852	ಆಕಾಶ್	5.4
26	45428730016066	ಗೋಪಾಲ್ ಶಹಾಪುರ್	17.4
27	31768730021823	ಬಸವರಾಜ್ ಎಂ	6.2
28	45428160000273	ಮೀರಾಬಾಯಿ ಲಮಾಣಿ	33.3
29	31768730021750	ವಿಶಾಲ್ ಕುಮಾರ್ ಎಸ್	8
30	31768730021734	ಹಬೀಬ್ ಖಾನ್	19.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೋನಿ, ಸೋಲಾಪುರ ರಸ್ತೆ, ಬಿಜಾಪುರ–586103.			
31	31878730047876	ಪ್ರಮೋದ ಎಲ್	5.9
32	31878730047840	ಶಶಿ	4.1
33	31878730047761	ಸರವಣ ಸುಂದರ್	1.8
34	31878740000379	ಶಾರದ ರಾಮಕೃಷ್ಣ	178.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು–560078.			
35	45370670000013	ವನಿತ ಸಚ್ಚಿದಾನಂದ	96.4
36	30138730039836	ಮಹೇಶ್ವರಿ ರಾಜು	14.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು ಮೆಝ್ಯನೈನ್ ಮಹಡಿ, ನಂ ಎಂ–25, ಸೆಕ್ಟರ್ –11, 10ನೇ ಮುಖ್ಯ ರಸ್ತೆ, ಹೆಚ್‌ಎಎಲ್ 3ನೇ ಹಂತ, ಜೀವನ್‌ಭೀಮಾ ನಗರ್, ಕೋಡಿಹಳ್ಳಿ, ಬೆಂಗಳೂರು–5600075.			
37	46658160004987	ವಿಶ್ವನಾಥ ಎನ್	103.9
38	46658160004974	ನೀಲ ಸಿಎಂ ಮುನಿಯಪ್ಪ	29
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ಕಾಂಪ್ಲೆಕ್ಸ್, ನಂ. 300/ಎ–70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560041.			
39	33878730047396	ಶಿವ ರುದ್ರ	14.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.			
40	31838740000816	ಪ್ರವೀಣ್ ಕುಮಾರ್ ಎಂ	16.1
41	31838740000803	ಮಮತ ಹೆಚ್ ಜೆ	11.4
42	31838740000782	ನಿರ್ಮಲ ಜಿ	16.2
43	31838160002102	ಎನ್ ಮಂಜುನಾಥ್	99.5
44	31838740000779	ಪ್ರೇಮ ಎಂ	164.7
45	32568730029780	ಮುನಿತಹ್‌ತನ ಎಂ	6.1
46	31838730059926	ಬೇಬಿ ವೇಲು	5.3
47	30198730042499	ಜಾನೆಟ್ ರೋಸ್ಲಿನ್	6
48	31838740000944	ಉಷಾ ಯು	64.5
49	31838740000868	ಮಹೇಶ್ ಎನ್ ಎಂ	7.7
50	31838740000641	ಲಿಂಗರಾಜು ಎ ಜೆ	40.8
51	31838740000905	ಚೇತನ್ ಜೆ	12
52	31838740000881	ಪೂರ್ಣಿಮ ವಿ	18.8
53	32568160006280	ಮುರಳಿ ವೈ	51.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ಕಾಂಪ್ಲೆಕ್ಸ್, ನಂ. 300/ಎ–70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–560041.			
54	32508740000306	ಚೆಲುವರಾಜ್ ವೈ	51.4
55	32508730048641	ಹೀನಾಕೊಸರ್ ಎ	3.7
56	32508730048615	ಪೌನ್ ಎಂ	5.9
57	32508740000358	ಹನುಮಂತ ಎನ್	5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್–560068			
58	46448730041011	ದ್ರಾಕ್ಷಾಯಿಣಿ ಎನ್	6.8
59	46448730040991	ಅಮಲ ಶಿವರ್ಜನ್	11.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.			
60	33458730028620	ಮನೋಹರ್ ಬಿಎಸ್	4.1
61	30948730023193	ಮಂಜುನಾಥ್ ಎನ್	2.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಟ್ ನಂ.1, ನೆಲ ಮಹಡಿ ಸಾತ್ವಿಕ್ ಸ್ಪ್ಲೆಂಡರ್ ಕಟ್ಟಡ ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ವಿವಿ ಮೊಹಲ್ಲಾ, ಮೈಸೂರು–570002, ಕರ್ನಾಟಕ.			
62	45448730008812	ಅಶ್ವಿನಿ ದೇವೇಂದ್ರಪ್ಪ ಅರಳಿಕಟ್ಟಿ	4.2
63	45448730008762	ಮೊಹಮ್ಮದ್ ರಫೀಕ್ ಬಾಬುಸಾಬ್ ಹವಲ್ದಾರ್ ಬಾಬುಸಾಬ್ ಹವಲ್ದಾರ್	4.9
64	30488730034903	ಬೀರಪ್ಪ ಬಿರಜನವರ್	4
65	45448730007861	ಸಾದತ್‌ಹುಸೇನ್ ಮಣಿಯಾರ್	3.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಬಿವಿಬಿ ಇಂಜಿನಿಯರಿಂಗ್ ಕಾಲೇಜು ಎದುರು ಮೆಕ್ ಡೊನಾಲ್ಡ್ ಹತ್ತಿರ, ಹಳೆ ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ –580021.			

ಸ್ಥಳ: ಕರ್ನಾಟಕ
ದಿನಾಂಕ: 01.06.2026

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಬಾಗೇಪಲ್ಲಿ ಬಳಿ ಭೀಕರ ಅಪಘಾತ: 6 ಮಂದಿ ಕಾರ್ಮಿಕರ ದುರ್ಮರಣ

← ಮೊದಲಪುಟದಿಂದ

ಡಿಕ್ಕಿಯ ರಭಸಕ್ಕೆ ಆಟೋ ನಿಯಂತ್ರಣ ತಪ್ಪಿ ಮುಂದೆ ಚಲಿಸುತ್ತಿದ್ದ ಬೃಹತ್ ಕಂಟೈನರ್ ವಾಹನದ ಹಿಂಭಾಗಕ್ಕೆ ಅಪ್ಪಳಿಸಿದೆ. ಎರಡು ವಾಹನಗಳ ನಡುವೆ ಸಿಲುಕಿದ ಆಟೋ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಕಬ್ಬಿಣದ ಉಂಡೆಯಂತಾಗಿತ್ತು. ಅಪಘಾತದ ಸಮಯದಲ್ಲಿ ಆಟೋದಲ್ಲಿ ಚಾಲಕ ಸೇರಿ ಒಟ್ಟು 8 ಮಂದಿ ಪ್ರಯಾಣಿಸುತ್ತಿದ್ದರು. ಮೃತರ ದೇಹಗಳು ಆಟೋದೊಳಗೆ ಸಿಲುಕಿಕೊಂಡಿದ್ದು, ನೋಡುಗರ ಕಣ್ಣಾಲಿಗಳು ಒದ್ದೆಯಾಗುವಂತಿತ್ತು. ಮೂವರು ಗಾಯಾಳುಗಳ ಸ್ಥಿತಿಯೂ ಗಂಭೀರವಿದೆ. ಅಪಘಾತದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿತ್ತು. ಕ್ರೇನ್ ಸಹಾಯದಿಂದ ನಜ್ಜುಗುಜ್ಜಾದ ವಾಹನಗಳನ್ನು ರಸ್ತೆಯಿಂದ ತೆರವುಗೊಳಿಸಿ ಬಾಗೇಪಲ್ಲಿ ಪೊಲೀಸರು ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಬೆಂಗಳೂರಿನ ದಂಪತಿ, ಮಕ್ಕಳು ಹಿ.ಪ್ರದಲ್ಲಿ ಅಪಘಾತಕ್ಕೆ ಬಲಿ

ಶಿಮ್ಲಾ: ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆ ಕಾರು ಕಂದಕಕ್ಕೆ ಉರುಳಿ ಬೆಂಗಳೂರಿನ ಪ್ರವಾಸಿ ದಂಪತಿ ಮತ್ತು ಇಬ್ಬರು ಮಕ್ಕಳು ಸೇರಿ 8 ಪ್ರವಾಸಿಗರು ಸಾವನ್ನಪ್ಪಿದ್ದಾರೆ. ಚುರಾಹ್ ಉಪವಿಭಾಗದ ಬೈರಗಢ್‌ಸಚ್ ಪಾಸ್‌ಕಿಲ್ಲರ್ ಮಾರ್ಗದಲ್ಲಿ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ 500 ಮೀಟರ್ ಆಳದ ಕಂದಕಕ್ಕೆ ಉರುಳಿದೆ. ಬೆಂಗಳೂರಿನಿಂದ ಹೋಗಿದ್ದ ಪ್ರವಾಸಿ ಕುಟುಂಬವು ಡಾಲ್‌ಹೌಸಿಯಲ್ಲಿ ತಂಗಿತ್ತು. ಇಲ್ಲಿಯೇ ತಂಗಿದ್ದ ಮತ್ತೊಂದು ಪ್ರವಾಸಿ ಕುಟುಂಬದೊಂದಿಗೆ ವಾಹನವನ್ನು ಹಂಚಿಕೊಂಡು ಸಚ್ ಪಾಸ್‌ನ ಹಿಮಾಚ್ಛಾದಿತ ಪ್ರದೇಶಗಳಿಗೆ ಪ್ರವಾಸಕ್ಕೆ ತೆರಳುವ ವೇಳೆ ದುರ್ಘಟನೆ ಸಂಭವಿಸಿದೆ.

ಮಂತ್ರಾಲಯದಲ್ಲಿ ಐವರು ನೀರುಪಾಲು

ಬಾಲಕಿಯನ್ನು ರಕ್ಷಿಸುವ ಉದ್ದೇಶದಿಂದ ಐವರು ನದಿಗೆ ಹಾರಿದ್ದರು. ಬಾಲಕಿಯನ್ನು ಸುರಕ್ಷಿತವಾಗಿ ರಕ್ಷಿಸಲಾದರೂ ನದಿಗೆ ಹಾರಿದವರು ನೀರು ಪಾಲಾದರು.ಮೃತರನ್ನು ಹೈದರಾಬಾದ್ ಮೂಲದ ಸತೀಶ್ (35) ಅವರ ಮಗ ಯಮನ ಚಂದ್ರ (5) ಧನುಷ್ (23) ರಾಘವೇಂದ್ರ (25), ಸಂಧ್ಯಾ (23) ಎಂದು ಗುರುತಿಸಲಾಗಿದೆ.

ಖಾನಾಪುರದಲ್ಲಿ ಅಕ್ರಮ ಶಸ್ತ್ರಾಸ್ತ್ರ ಜಾಲ ಭೇದಿಸಿದ ಪೊಲೀಸರು

ಬೆಳಗಾವಿ: ಖಾನಾಪುರ ತಾಲೂಕಿನ ಕತ್ಗಲಿ ಗ್ರಾಮದಲ್ಲಿ ಅಕ್ರಮವಾಗಿ ಬಂದೂಕುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಖಾನಾಪುರ ಪೊಲೀಸರು ಭೇದಿಸಿದ್ದು,



13 ಮಂದಿಯನ್ನು ಬಂಧಿಸಿ 9 ದೇಶೀ ಬಂದೂಕುಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಸಾಮಗ್ರಿಯನ್ನು ವಶಪಡಿಸಿಕೊಂಡಿದ್ದಾರೆ.

2024ರಿಂದ ಕತ್ಗಲಿ ಗ್ರಾಮದ ಮಾರುತಿ ಶ್ರೀಕಾಂತ್ ಸುತಾರ್ ಎಂಬಾತ ಅಕ್ರಮವಾಗಿ ದೇಶೀ ಬಂದೂಕುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ಇದರ ಆಧಾರದ ಮೇಲೆ ಮೇ 11ರಂದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಪೊಲೀಸರು, ಮಾರುತಿ ಸುತಾರ್‌ನನ್ನು ಬಂಧಿಸಿ ಆತ ತಯಾರಿಸುತ್ತಿದ್ದ ದೇಶೀ ಬಂದೂಕನ್ನು ವಶಪಡಿಸಿಕೊಂಡರು. ಮುಂದಿನ ತನಿಖೆಯಲ್ಲಿ ಮಾರುತಿ ಸುತಾರ್‌ನಿಂದ ಅಕ್ರಮ ಶಸ್ತ್ರಾಸ್ತ್ರ ಖರೀದಿಸಿದ್ದ ಎಂಟು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಅವರಿಂದ ಮತ್ತಷ್ಟು 8 ದೇಶೀ ಬಂದೂಕುಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ಮಾರ್ಕಂಡೇಯ ನಗರದ ಸೋಮನಾಥ ಚೌಗುಲೆ, ಸಂತೋಷ ನಾಯಕ್, ಮಾರುತಿ ಗುಡದ್ಯಾಗೋಳ, ಬಾಳು ನಾಯಕ್, ಲಕ್ಷ್ಮಣ ಗುಜನಾಳ ಹಾಗೂ ಮುದಿಕೊಪ್ಪದ ಬಸವರಾಜ ಸಾಲೋಟಗಿ, ಬಸವಂತ ಯಾರ್ಮಲ್ಕರ್ ಮತ್ತು ಲಕ್ಷ್ಮಣ ಗುರವ್ ಎಂದು ಗುರ್ತಿಸಲಾಗಿದೆ. ಇದೇ ಪ್ರಕರಣದಲ್ಲಿ ಅಕ್ರಮ ಶಸ್ತ್ರಾಸ್ತ್ರ ತಯಾರಿಕೆಗೆ ಆರ್ಥಿಕ ನೆರವು ನೀಡಿದ್ದ ಆರೋಪದಡಿ ಮರಿಯಪ್ಪ ನಾಯಕ್ ಎಂಬಾತನನ್ನೂ ಬಂಧನಕ್ಕೊಳಪಡಿಸಿದ್ದಾರೆ.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಧರ್ಮಸ್ಥಳಕ್ಕೆ ಭೇಟಿ

ಬೆಳ್ತಂಗಡಿ: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದರು.

ಸಾಂಪ್ರದಾಯಿಕ ಉಡುಪಿನಲ್ಲಿ ದೇವಾಲಯಕ್ಕೆ ಆಗಮಿಸಿದ ಉಪರಾಷ್ಟ್ರಪತಿ, ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಅನ್ನಪೂರ್ಣ ಛತ್ರಕ್ಕೆ ತೆರಳಿ ಅಲ್ಲಿನ ವ್ಯವಸ್ಥೆಗಳು ಹಾಗೂ ಸೇವಾ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಕೆಲಕಾಲ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಸೇವಾ ಕಾರ್ಯಗಳ ಬಗ್ಗೆ ಮಾಹಿತಿ ಪಡೆದ ಅವರು, ಕ್ಷೇತ್ರದ ಸಮಾಜಮುಖಿ ಸೇವೆಗಳನ್ನು ಶ್ಲಾಘಿಸಿದರು. ಭೇಟಿಯ ಸಂದರ್ಭದಲ್ಲಿ ಹೆಗ್ಗಡೆಯವರ ಕುಟುಂಬ ಸದಸ್ಯರೂ ಉಪಸ್ಥಿತರಿದ್ದರು. ರಾಜ್ಯಪಾಲ ತಾವರಚಂದ್ ಗೆಹ್ಲೋಥ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಉಪತಹಸೀಲ್ದಾರ್ ಆತ್ಮಹತ್ಯೆಗೆ ಶರಣು

ಹಾಸನ: ನಗರದ ಖಾಸಗಿ ಲಾಡ್ಜ್‌ನಲ್ಲಿ ಉಪ ತಹಸೀಲ್ದಾರ್‌ರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ರಾತ್ರಿ ನಡೆದಿದೆ. ಮೈಸೂರು ಜಿಲ್ಲೆಯ ಸಾಲಿಗ್ರಾಮದಲ್ಲಿ ಉಪ ತಹಸೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ತಿಮ್ಮಯ್ಯ (52) ಅವರು ಹಾಸನದ ಬಿ.ಎಂ. ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೊಡಗು ಜಿಲ್ಲೆಯವರಾದ ತಿಮ್ಮಯ್ಯ, ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದರು. 3 ವರ್ಷಗಳ ಹಿಂದೆ ಹಾಸನದಲ್ಲಿ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ಮೈಸೂರು ಜಿಲ್ಲೆಯ ಸಾಲಿಗ್ರಾಮದಲ್ಲಿ ಉಪ ತಹಸೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದರು. ಆತ್ಮಹತ್ಯೆಗೂ ಮುನ್ನ 4 ಪುಟಗಳ ಡೆತ್‌ನೋಟ್ ಬರೆದಿಟ್ಟಿರುವುದು ಬೆಳಕಿಗೆ ಬಂದಿದೆ. ಬಡಾವಣೆ ಪೊಲೀಸ್ ಠಾಣೆಯ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದ್ವಿ-ಸಾಪ್ತಾಹಿಕ ರೈಲು ಸಂಚಾರ ಇಂದಿನಿಂದ



ಹುಬ್ಬಳ್ಳಿ: ಬೆಂಗಳೂರಿನ ಯಶವಂತಪುರ ಮತ್ತು ವಿಜಯಪುರ ನಡುವೆ ಹೊಸ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಪ್ರಾರಂಭಕ್ಕೆ ರೈಲ್ವೆ ಇಲಾಖೆ ಅನುಮೋದಿಸಿದ್ದು, ಜೂನ್ 1ರಿಂದ ಸಂಚಾರ ಆರಂಭವಾಗಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ವಿಜಯಪುರ ನಾಗರಿಕರ ಬೇಡಿಕೆಯಾಗಿದ್ದ ಈ ವಿಶೇಷ ರೈಲು, ಯಶವಂತಪುರ ಹಾಗೂ ವಿಜಯಪುರವನ್ನು ನೇರವಾಗಿ ಸಂಪರ್ಕಿಸಲಿದೆ. ಗದಗ, ಬಾದಾಮಿ, ಬಾಗಲಕೋಟೆ, ಆಲಮಟ್ಟಿ ಬೈಪಾಸ್ ಮುಖಾಂತರ ಸಂಚರಿಸಲಿದೆ. ಪ್ರತಿ ಶನಿವಾರ ಮತ್ತು ಸೋಮವಾರ ಯಶವಂತಪುರ-ವಿಜಯಪುರ (06577) ಹಾಗೂ ಪ್ರತಿ ಭಾನುವಾರ ಹಾಗೂ ಮಂಗಳವಾರ ವಿಜಯಪುರ-ಯಶವಂತಪುರ (06578) ನಡುವೆ ವಿಶೇಷ ರೈಲು ಸಂಚರಿಸಲಿದೆ. ಕರ್ನಾಟಕದ ರೈಲ್ವೆ ಮೂಲ ಸೌಕರ್ಯ ಬಲಪಡಿಸಲು ಕೇಂದ್ರ ಸರಕಾರ ನಿರಂತರವಾಗಿ ಶ್ರಮಿಸುತ್ತಿದೆ. ಈ ವಿಶೇಷ ರೈಲು ಸಂಚಾರಕ್ಕೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು ಎಂದು ಸಚಿವ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಸರಕಾರಿ ಶಾಲೆಗಳು ಆರಂಭ

ಬೆಂಗಳೂರು: ಜೂನ್ 1ರಿಂದ ಸರಕಾರಿ ಶಾಲೆಗಳು ಪುನರಾರಂಭವಾಗಲಿದ್ದು, ಶಾಲಾ ಮಟ್ಟದಲ್ಲಿಯೇ ಶಾಲಾ ಆರಂಭೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಹಿಂದೆ ಶಿವಮೊಗ್ಗದಲ್ಲಿ ರಾಜ್ಯಮಟ್ಟದ ಶಾಲಾ ಆರಂಭೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆದರೆ ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ಸಂಪುಟ ವಿಸರ್ಜನೆಯಾಗಿದೆ. ಆದ್ದರಿಂದ ರಾಜ್ಯಮಟ್ಟದ ಕಾರ್ಯಕ್ರಮದ ಬದಲಿಗೆ, ಆಯಾ ಶಾಲಾ ಮಟ್ಟದಲ್ಲೇ ಶಾಲಾ ಆರಂಭೋತ್ಸವ ಕಾರ್ಯಕ್ರಮ ನಡೆಯಲಿದೆ. ರಾಜ್ಯದಲ್ಲಿ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಕಾರ್ಯಕ್ರಮ ರದ್ದುಗೊಂಡಿದ್ದು, ಎಲ್ಲ ಶಾಲೆಗಳಲ್ಲಿ ಪೋಷಕರ ಸಭೆ ನಡೆಸಲು ಸೂಚಿಸಲಾಗಿದೆ. ಸೋಮವಾರದಿಂದ ರಾಜ್ಯಾದ್ಯಂತ ಸರಕಾರಿ ಶಾಲೆಗಳು ಆರಂಭವಾಗಲಿವೆ. ಈ ಶೈಕ್ಷಣಿಕ ವರ್ಷದ ಮೊದಲ ದಿನದಂದು ಶಾಲೆಗಳಲ್ಲಿ ತಳಿರು- ತೋರಣದಿಂದ ಸಿಂಗಾರ ಮಾಡಿ ವಿದ್ಯಾರ್ಥಿಗಳನ್ನು ಹಬ್ಬದ ಸಡಗರದ ವಾತಾವರಣದಲ್ಲಿ ಮಕ್ಕಳನ್ನು ಸ್ವಾಗತಿಸಲು ತಯಾರಿ ನಡೆಸಿವೆ. ಮಧ್ಯಾಹ್ನದ ಬಿಸಿಯೂಟಕ್ಕೆ ಸಿಹಿ ಮಾಡಲು ಶಿಕ್ಷಣ ಇಲಾಖೆ ಶಾಲೆಗಳಿಗೆ ಸೂಚನೆ ನೀಡಿದೆ.

ವಿಶ್ವವಾಣಿ ಕ್ಲಬ್ ಹೌಸ್
01.06.2026
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಆಕಾಶವಾಣಿ ಶ್ರೋತೃ ಪ್ರಪಂಚ
ವಿಷಯ
ಶ್ರೀಮತಿ ಬಿ.ಕೆ.ಸುಮತಿ
vishwavani.news

ದಿನ ವಿಶೇಷ

1 ಜೂನ್ 2026 ಸೋಮವಾರ

» ಸೂರ್ಯೋದಯ	: 5-43
» ಸೂರ್ಯಾಸ್ತ	: 7-04
» ತಿಥಿ	: ಪ್ರಥಮ
» ನಕ್ಷತ್ರ	: ಜ್ಯೇಷ್ಠ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ

ಮೊದಲ ಬಾರಿ ಗೆದ್ದ ಐವರಿಗೆ ಮಂತ್ರಿಗಿರಿ ನೀಡಲು ಮನವಿ | ಸಚಿವ ಸ್ಥಾನ ಉಳಿಸಿಕೊಳ್ಳಲು ಹಲವರಿಂದ ಪ್ರಯತ್ನ

ಡಿಕೆ ನಿವಾಸಕ್ಕೆ ಸಚಿವಾಕಾಂಕ್ಷಿಗಳ ದಂಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಆಯ್ಕೆಯ ಪ್ರಕ್ರಿಯೆ ಮುಗಿದ ಬೆನ್ನಲ್ಲೇ ಸಚಿವ ಸಂಪುಟ ರಚನೆಯ ಪ್ರಕ್ರಿಯೆಗಳು ಶುರುವಾಗಿದ್ದು, ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮನೆಗೆ ಸಚಿವಾಕಾಂಕ್ಷಿಗಳ ದಂಡು ಭಾನುವಾರ ಆಗಮಿಸಿ ಶುಭಕೋರುವ ಜತೆಜತೆಗೆ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಆರಂಭದಲ್ಲಿ ಸಿದ್ದರಾಮಯ್ಯನವರ ಸಂಪುಟದಲ್ಲಿ ಸಚಿವರಾಗಿದ್ದವರ ಪೈಕಿ ಬಹುತೇಕರಿಗೆ ಕೊಕ್ ಸಿಗಲಿದೆ ಎಂದು ಹೇಳಲಾಗುತ್ತಿದೆ. ಆದರೆ ಈ 31 ಸಚಿವರ ಪೈಕಿ ಕನಿಷ್ಠ 10 ಮಂದಿ ಡಿಕೆ ಸಂಪುಟಕ್ಕೆ ಸೇರುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ. ಭಾನುವಾರ ಡಿಕೆ ನಿವಾಸಕ್ಕೆ ಸಿದ್ದು ಸಂಪುಟದಲ್ಲಿದ್ದ ರಾಮಲಿಂಗಾರೆಡ್ಡಿ, ಮಹದೇವಪ್ಪ, ಮಧು ಬಂಗಾರಪ್ಪ, ದಿನೇಶ್ ಗುಂಡೂರಾವ್, ಎಚ್.ಕೆ.ಪಾಟೀಲ್ ಸೇರಿದಂತೆ ಹಲವರು ಭೇಟಿ ನೀಡಿದ್ದಾರೆ. ಇನ್ನುಳಿದಂತೆ ಈವರೆಗೂ ಸಚಿವ ಸ್ಥಾನ ಸಿಗದಿರುವ ಎಸ್.ಎನ್.ನಾರಾಯಣಸ್ವಾಮಿ. ಪಿ.ಎಂ.ಅಶೋಕ್, ರಾಘವೇಂದ್ರ ಹಿಟ್ನಾಳ್, ವಿಜಯಾನಂದ ಕಾಶಪ್ಪನವರ್, ಪುಟ್ಟರಂಗ ಶೆಟ್ಟಿ, ಬಿ.ಆರ್.ಪಾಟೀಲ್, ತನ್ವೀರ್ ಸೇಠ್, ರೂಪಕಲಾ, ಕೆ.ಎಂ.ಶಿವಲಿಂಗೇಗೌಡ ಭೇಟಿ ನೀಡಿ ಸಂಪುಟಕ್ಕೆ ಸೇರಿಸಿಕೊಳ್ಳಲು ಮನವಿ ಮಾಡಿದ್ದಾರೆ. ಇನ್ನುಳಿದಂತೆ ಯುವ ಶಾಸಕ ದರ್ಶನ್ ಧ್ರುವನಾರಾಯಣ್ ಕೂಡ ಸಚಿವ ಸ್ಥಾನಕ್ಕೆ ಒತ್ತಾಯಿಸಿದ್ದಾರೆ.

ಮಾಜಿ ಸಚಿವ ಟಿ.ಬಿ.ಜಯಚಂದ್ರ, ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಬಳಿಕ ಮಾತನಾಡಿ, ತಮ್ಮ ಮತ್ತು ಡಿ.ಕೆ.ಶಿವಕುಮಾರ್ ಅವರ ಸ್ನೇಹ 40 ವರ್ಷಗಳಷ್ಟು ಹಳೆಯದ್ದು, ಎಲ್ಲ ರೀತಿಯಲ್ಲೂ ಅವರ ಜತೆ ಸಹಕಾರ ನೀಡಿದ್ದೇನೆ. ನಾನು ಯಾವ ರೀತಿಯ ರಾಜಕಾರಣಿ ಎಂದು ಅವರಿಗೆ ಗೊತ್ತಿದೆ. ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು ಬಂದಿದ್ದಾಗಿ ಹೇಳಿದ್ದಾರೆ. ಶಾಸಕ ಪಿ.ಎಂ. ಅಶೋಕ್ ಮಾತನಾಡಿ, ಯುವ ನಾಯಕ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಯಾಗಲಿದ್ದಾರೆ. ಒಳ್ಳೆಯ ಆಡಳಿತ ನೀಡುವ ಭರವಸೆ ಇದೆ. ನಾವೆಲ್ಲಾ ಉತ್ತಮ ಸ್ನೇಹಿತರು. ಸಂಪುಟದಲ್ಲಿ ಅವಕಾಶ ಸಿಗುವ ಆಸೆಯಿದೆ. ಒಂದು ವೇಳೆ ಸಚಿವ ಸ್ಥಾನ ಸಿಗದೇ ಇದ್ದರೂ ಕೆಲಸ ಮಾಡುತ್ತೇವೆ ಎಂದಿದ್ದಾರೆ.

ಶಾಸಕ ದರ್ಶನ್ ಧ್ರುವ ನಾರಾಯಣ್ ಮಾತನಾಡಿ, ತಮ್ಮ ತಂದೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದರು. ಸಚಿವ ಸ್ಥಾನಕ್ಕೆ ಅರ್ಹವಾದ ವ್ಯಕ್ತಿ. ಪಕ್ಷಕ್ಕಾಗಿ ಜೀವ ಅರ್ಪಣೆ ಮಾಡಿದ್ದಾರೆ. ಮೊದಲ ಬಾರಿ ಗೆದ್ದ ಐವರಿಗೆ ಸಂಪುಟದಲ್ಲಿ ಅವಕಾಶ ನೀಡಬೇಕೆಂಬ ಬೇಡಿಕೆ ಇದೆ. ಇದರಿಂದ ಯುವಕರಿಗೆ ಆದ್ಯತೆ ನೀಡಿದಂತಾಗುತ್ತದೆ ಎಂದು ಹೇಳಿದ್ದಾರೆ.

ಬಂಗಾರ ಪೇಟೆಯ ಎಸ್.ಎನ್.ನಾರಾಯಣಸ್ವಾಮಿ ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ ಒಕ್ಕಲಿಗ ಮತ್ತು ಬಲಗೈ ಸಮುದಾಯ ಪ್ರಬಲವಾಗಿದೆ. ಈ ಎರಡೂ ಸಮುದಾಯಗಳಿಗೆ ಸಚಿವ ಸ್ಥಾನ ಕೊಟ್ಟರೆ ಕೋಲಾರ ಜಿಲ್ಲೆಗೆ ಅನುಕೂಲವಾಗುತ್ತದೆ. ಇಲ್ಲವಾದರೆ ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಕಷ್ಟವಾಗಬಹುದು ಎಂದಿದ್ದಾರೆ. ಮಾಲೂರು ಶಾಸಕ ಕೆ.ವೈ.ನಂಜೇಗೌಡ ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಇ.ತುಕಾರಾಂ ಅವರು ಡಿಕೆಶಿ ಅವರನ್ನು ಭೇಟಿಯಾಗಿ ಶುಭ ಕೋರಿದರು.



ಎಚ್.ಕೆ.ಪಾಟೀಲ ಅವರು ಡಿಕೆಶಿ ಅವರನ್ನು ಭೇಟಿಯಾಗಿ ಶುಭ ಕೋರಿದರು.

ಬಿ.ಆರ್.ಪಾಟೀಲ್ ಅವರು ಡಿಕೆಶಿ ಅವರಿಗೆ ಶುಭ ಕೋರಿದರು.

ತನ್ವೀರ್ ಸೇಠ್ ಅವರು ಡಿಕೆಶಿ ಅವರಿಗೆ ಶುಭ ಕೋರಿದರು.

ಎರಡು ಅಥವಾ ಮೂರು ಡಿಸಿಎಂ ಹುದ್ದೆ ಸೃಷ್ಟಿ ಸಾಧ್ಯತೆ

ಸಿದ್ದರಾಮಯ್ಯ ಆಪ್ತರು ಮೂರು ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿಸಬೇಕು ಎನ್ನುವ ಬೇಡಿಕೆಯನ್ನು ಇಟ್ಟಿದ್ದರೂ ಉಪಮುಖ್ಯಮಂತ್ರಿ ಸೃಷ್ಟಿಗೆ ಡಿ.ಕೆ.ಶಿವಕುಮಾರ್ ಕೊಸರಾಟ ಮುಂದುವರಿಸಿದ್ದಾರೆ. ರಾಜೀನಾಮೆ ನೀಡಿದ ಬಳಿಕ ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ ಅವರು, ಮೂರು ಉಪಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಬೇಕು ಎನ್ನುವ ಒತ್ತಡವನ್ನು ಹೇರಿದ್ದರು. ಇದಕ್ಕೆ ಪೂರಕವಾಗಿ ಡಾ.ಜಿ.ಪರಮೇಶ್ವರ, ಎಂ.ಬಿ.ಪಾಟೀಲ್, ಜಮೀರ್ ಅಹ್ಮದ್, ಈಶ್ವರ್ ಖಂಡ್ರೆ, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ನಾಯಕರು ಜಾತಿ ಲೆಕ್ಕಾಚಾರದಲ್ಲಿ ತಮಗೆ ಡಿಸಿಎಂ ಸ್ಥಾನ ಸಿಗಬೇಕು ಎನ್ನುವ ಒತ್ತಡವನ್ನು ದೆಹಲಿ ನಾಯಕರ ಮುಂದೆ ಹೇರಿದ್ದಾರೆ. ಆದ್ದರಿಂದ ಸೋಮವಾರ ದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಈ ಅಂಶವನ್ನು ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ಜತೆ ಚರ್ಚಿಸಲಿದ್ದಾರೆ. ಒಂದು ವೇಳೆ ಡಿಸಿಎಂ ಹುದ್ದೆ ಸೃಷ್ಟಿಸಬೇಕು ಎಂದು ತೀರ್ಮಾನಿಸಿದರೆ ಜಾತಿ ಲೆಕ್ಕಾಚಾರದಲ್ಲಿ ಎರಡು ಅಥವಾ ಮೂರು ಡಿಸಿಎಂ ಸ್ಥಾನ ಸೃಷ್ಟಿಸುವ ಸಾಧ್ಯತೆಯಿದೆ.

ಸ್ಪೀಕರ್ ಸ್ಥಾನ ಒಲ್ಲೆ ಎನ್ನುತ್ತಿರುವ ನಾಯಕರು

ಡಿ.ಕೆ.ಶಿವಕುಮಾರ್ ಸಂಪುಟಕ್ಕೆ ಯು.ಟಿ.ಖಾದರ್ ಅವರ ಸೇರ್ಪಡೆ ಖಚಿತವಾಗುತ್ತಿದ್ದಂತೆ ಸ್ಪೀಕರ್ ಸ್ಥಾನಕ್ಕೆ ಯಾರೆಂಬ ಕುತೂಹಲ ಅನೇಕರಲ್ಲಿದೆ. ಈ ಹಿಂದೆ ಸಂಪುಟ ಪುನಾರಚನೆಯ ಸಮಯದಲ್ಲಿಯೇ ದಿನೇಶ್ ಗುಂಡೂರಾವ್ ಅವರ ಹೆಸರು ಈ ಸ್ಥಾನಕ್ಕೆ ಕೇಳಿಬಂದಿತ್ತು. ಆದರೆ ದಿನೇಶ್ ಗುಂಡೂರಾವ್ ಅವರು ಸಚಿವ ಸ್ಥಾನದಲ್ಲಿಯೇ ಮುಂದುವರಿಯುವ ಆಸಕ್ತಿ ತೋರಿದ್ದಾರೆ ಎನ್ನಲಾಗಿದೆ. ಇನ್ನುಳಿದಂತೆ ಹಿರಿಯ ಶಾಸಕರು ಅಥವಾ ಸಚಿವರಲ್ಲಿ ಒಬ್ಬರನ್ನು ಈ ಸ್ಥಾನದಲ್ಲಿ ಕೂರಿಸಬೇಕು ಎನ್ನುವ ಲೆಕ್ಕಾಚಾರದಲ್ಲಿ ಪಕ್ಷದ ಹೈಕಮಾಂಡ್ ಇದೆ. ನಾಲ್ಕೈದು ಹಿರಿಯರಿಗೆ ಸ್ಪೀಕರ್ ಸ್ಥಾನದ ಆಫರ್ ನೀಡಿದೆ. ಆದರೆ, ಯಾವ ನಾಯಕರೂ ವಿಧಾನಸಭಾಧ್ಯಕ್ಷರಾಗಲು ಆಸಕ್ತಿ ತೋರುತ್ತಿಲ್ಲ. ಇನ್ನು ಕೆಲವರು ಸಂಪುಟದಲ್ಲಿ ಸೇರಿಸಿಕೊಳ್ಳದಿದ್ದರೂ ಪರವಾಗಿಲ್ಲ, ಸ್ಪೀಕರ್ ಸ್ಥಾನ ಬೇಡ ಎನ್ನುವ ಮಾತನ್ನಾಡಿದ್ದಾರೆ ಎನ್ನಲಾಗಿದೆ. ಪ್ರಮುಖವಾಗಿ ಸ್ಪೀಕರ್ ಆಗುತ್ತಿದ್ದಂತೆ ಪಕ್ಷದ ಪ್ರಾಥಮಿಕ ಸ್ಥಾನಕ್ಕೆ ರಾಜೀನಾಮೆ ನೀಡುವ ಜತೆಗೆ, ಪಕ್ಷದ ವೇದಿಕೆಯಲ್ಲಿ ಕಾಣಿಸಿಕೊಳ್ಳುವಂತಿಲ್ಲ. ಚುನಾವಣೆಗೆ ಎರಡು ವರ್ಷ ಇರುವ ಸಮಯದಲ್ಲಿ ಸ್ಪೀಕರ್ ಸ್ಥಾನದಲ್ಲಿ ಕುಳಿತರೆ ಪಕ್ಷದ ಸಂಘಟನೆ ಮಾಡಿಕೊಳ್ಳುವುದು ಕಷ್ಟ. ಇದರಿಂದ ಮುಂದಿನ ಚುನಾವಣೆಗೆ ಸ್ಪರ್ಧಿಸಿದಾಗ ಸಮಸ್ಯೆಯಾಗಲಿದೆ. ಈ ಕಾರಣಕ್ಕೆ ಶಾಸಕರಾಗಿಯಾದರೂ ಮುಂದುವರಿಯೋಣ, ಆದರೆ ಸ್ಪೀಕರ್ ಆಗುವುದು ಬೇಡ ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಆದರೆ ಯು.ಟಿ.ಖಾದರ್ ಅವರು, ಈ ಹಿಂದೆ ಹೈಕಮಾಂಡ್ ಸೂಚನೆಯಂತೆ ಮೂರು ವರ್ಷ ಸ್ಪೀಕರ್ ಆಗಿ ಕಾರ್ಯನಿರ್ವಹಿಸಿದ್ದೇನೆ. ಆದ್ದರಿಂದ ಇದೀಗ ನನಗೆ ಸಂಪುಟದಲ್ಲಿ ಅವಕಾಶ ನೀಡಿ ಎನ್ನುವ ಒತ್ತಡ ಹೇರಿದ್ದಾರೆ ಎನ್ನಲಾಗಿದೆ.

ಡಿಕೆಶಿ ಅವರಿಗೆ ಅಜಯ್ ಸಿಂಗ್ ಅವರು ಶುಭ ಕೋರಿದರು.

ಡಿಕೆಶಿ ಅವರಿಗೆ ಎಂ.ಬಿ.ಪಾಟೀಲ ಅವರು ಶುಭ ಕೋರಿದರು.

ಡಿಕೆಶಿ ಅವರಿಗೆ ಎಚ್.ಸಿ.ಮಹದೇವಪ್ಪ ಅವರು ಶುಭ ಕೋರಿದರು.



ಡಿಕೆಶಿ ಅವರಿಗೆ ದಿನೇಶ್ ಗುಂಡೂರಾವ್ ಅವರು ಶುಭ ಕೋರಿದರು.

ಡಿಕೆಶಿ ಅವರಿಗೆ ಯತೀಂದ್ರ ಸಿದ್ದರಾಮಯ್ಯ ಶುಭ ಕೋರಿದರು.

ಡಿಕೆಶಿ ಅವರಿಗೆ ಮಧು ಬಂಗಾರಪ್ಪ ಅವರು ಶುಭ ಕೋರಿದರು.

ಸದ್ಯಕ್ಕೆ ಸಂಕ್ಷಿಪ್ತ ಸಂಪುಟ, 15 ದಿನಗಳ ಬಳಿಕ ವಿಸ್ತರಣೆ: ಮಲ್ಲಿಕಾರ್ಜುನ ಖರ್ಗೆ

ಜೂ.3ರ ನಂತರ ಡಿಸಿಎಂ ಹುದ್ದೆ ನಿರ್ಧಾರ



ಕಲಬುರಗಿ: ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರೊಂದಿಗೆ ಮೊದಲ ಹಂತದಲ್ಲಿ ಕೆಲವೇ ಶಾಸಕರು ಸಚಿವರಾಗಲಿದ್ದಾರೆ. 15 ದಿನಗಳ ಬಳಿಕ ಸಚಿವ ಸಂಪುಟ ವಿಸ್ತರಣೆ ನಡೆಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹೊಸ ಸಚಿವ ಸಂಪುಟದಲ್ಲಿ ಎಷ್ಟು ಜನ ಡಿಸಿಎಂಗಳನ್ನು ಮಾಡಬೇಕು ಎಂಬುದರ ಬಗೆಗೆ ಇನ್ನೂ ಯಾವುದೇ ಪ್ರಸ್ತಾವಗಳು ಬಂದಿಲ್ಲ, ಪ್ರಸ್ತಾವಗಳು ಬಂದ ಮೇಲೆ ಎಷ್ಟು ಡಿಸಿಎಂ ಮಾಡಬೇಕು? ಎಷ್ಟು ಸಚಿವರನ್ನು ಮಾಡಬೇಕು? ಎಂದು ತೀರ್ಮಾನಿಸಲಾಗುವುದು. ಮಹತ್ವದ ನಿಗಮದ ಅಧ್ಯಕ್ಷ ಸ್ಥಾನಗಳನ್ನೂ ಜತೆಯಲ್ಲೇ ಮಾಡಬೇಕಾ? ಎನ್ನುವ ಚರ್ಚೆ ಸಹ ನಡೆದಿದೆ. ಇವೆಲ್ಲಾ ಜೂನ್ 3ರ ನಂತರ ನಿರ್ಧಾರ ಮಾಡುತ್ತೇವೆ ಎಂದರು.

ಡಿ.ಕೆ.ಶಿವಕುಮಾರ್ ಅವರೊಂದಿಗೆ ಎಷ್ಟು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ ಎನ್ನುವ ಪ್ರಸ್ತಾವ ಇನ್ನೂ ಬಂದಿಲ್ಲ. ಎಂಟು ಸಚಿವರನ್ನು ಮಾಡುತ್ತಾರೋ ಹತ್ತು ಜನರನ್ನು ಸಚಿವರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಸದ್ಯಕ್ಕೆ ಒಂದು ಹಂತದಲ್ಲಿ ಸಚಿವರನ್ನು ಮಾಡುತ್ತೇವೆ. ಅದಾದ 15 ದಿನ ಅಥವಾ ಒಂದು ತಿಂಗಳು ಬಿಟ್ಟು ಎರಡನೇ ಹಂತದ ಮಂತ್ರಿ ಮಂಡಲ ರಚನೆ ಮಾಡುವ ವಿಚಾರ ಇದೆ. ಆದರೆ, ಸಿಎಂ ಏನು ವಿಚಾರ ಮಾಡುತ್ತಾರೋ ಅವರಿಗೇ ಬಿಟ್ಟಿದ್ದು ಎಂದು ಹೇಳಿದರು.

ಕೆಪಿಸಿಸಿಗೆ ಸೂಕ್ತರ ಆಯ್ಕೆ

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿಗೆ ಹುದ್ದೆಗೆ ಮತ್ತೊಬ್ಬರು ಬರಲೇ ಬೇಕು. ಅದು ಸಹಜ ಪ್ರಕ್ರಿಯೆ. ಒಳ್ಳೆಯವರನ್ನು ನೋಡಿ, ಕಾಂಬಿನೇಷನ್ ನೋಡಿ ಕೆಪಿಸಿಸಿಗೆ ನೇಮಕ ಮಾಡಬೇಕಾಗುತ್ತದೆ. ಮುಂಬರುವ ಚುನಾವಣೆ ಮತ್ತು ಪಕ್ಷದ ಸಿದ್ಧತೆ ಹಾಗೂ ಪಕ್ಷ ಕಟ್ಟುವ ದೃಷ್ಟಿಯಿಂದ ಎಲ್ಲವನ್ನೂ ವಿಚಾರ ಮಾಡಿ ಆಯ್ಕೆ ಮಾಡಬೇಕಾಗುತ್ತದೆ ಎಂದು ಖರ್ಗೆ ತಿಳಿಸಿದ್ದಾರೆ. ಹಾಗೆಯೇ, ಚುನಾವಣೆಗೆ ಕೇವಲ 24 ತಿಂಗಳು ಮಾತ್ರ ಬಾಕಿ ಇದೆ. ಬಹಳ ವೇಗವಾಗಿ ಕೆಲಸ ಮಾಡಬೇಕಿದೆ. ವೇಗವಾಗಿಯೂ, ಸಾಮೂಹಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನನ್ನು ನಾವು ಹುಡುಕಬೇಕಿದೆ. ಜತೆಗೆ ಅವರಿಗೆ ಸಹಕಾರ ನೀಡುವಂಥ ತಂಡವೂ ಇರಬೇಕಾಗುತ್ತದೆ. ಇವೆಲ್ಲವೂ ವಿಚಾರ ಮಾಡಿ ನಾವು ಅಧ್ಯಕ್ಷರ ಆಯ್ಕೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಎಸ್‌ಟಿ ಮೀಸಲು ಹೆಚ್ಚಿಸದಿದ್ದಲ್ಲಿ ಹೋರಾಟ

ರಾಯಚೂರು: ಪರಿಶಿಷ್ಟ ಪಂಗಡ ಸಮುದಾಯಕ್ಕೆ ಶೇ.7ರಷ್ಟು ಮೀಸಲಾತಿ ಒದಗಿಸುವಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ವಿಫಲವಾಗಿದ್ದು, ಸಮುದಾಯಕ್ಕೆ ಅನ್ಯಾಯವಾಗಿದೆ. ಕೂಡಲೇ ಹೈಕೋರ್ಟ್ ನಲ್ಲಿ ರುವ ತಡೆಯಾಜ್ಞೆ ತೆರವುಗೊಳಿಸಿ, ಎಸ್‌ಟಿ ಸಮುದಾಯಕ್ಕೆ ಶೇ. 7ರಷ್ಟು ಮೀಸಲು ಜಾರಿಗೊಳಿಸದೇ ಹೋದಲ್ಲಿ ರಾಜ್ಯಾದ್ಯಂತ ಸಮುದಾಯ ಹೋರಾಟ ನಡೆಸಲಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ಹೆಚ್ಚಿಸಲು ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಆಯೋಗ ರಚಿಸಿತ್ತು. ಆಯೋಗ ಎಸ್‌ಸಿ ಸಮುದಾಯಕ್ಕೆ ಶೇ.17 ರಷ್ಟು, ಎಸ್‌ಟಿ ಸಮುದಾಯಕ್ಕೆ ಶೇ.7ರಷ್ಟು ಮೀಸಲು ಹೆಚ್ಚಿಸಲು ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸನ್ನು ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾದ ನಂತರ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಆದರೆ ಕಾಂಗ್ರೆಸ್ ಸರಕಾರ ಬಿಜೆಪಿ ವಿರುದ್ಧ ಅಪಪ್ರಚಾರ ಮಾಡಿ ಮೀಸಲು ಹೆಚ್ಚಿಸುವುದನ್ನು ವಿರೋಧಿಸಿ, ಜನರಲ್ಲಿ ತಪ್ಪು ಅಭಿಪ್ರಾಯ ಹರಡಲು ಕಾರಣರಾದರು. ಆದರೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದರೂ ಮೀಸಲು ಹೆಚ್ಚಿಸಲು ಮುಂದಾಗಲೇ ಇಲ್ಲ. ಕಾಂಗ್ರೆಸ್ ಪಕ್ಷ ಬೆಂಬಲಿತರೇ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲು ಹೆಚ್ಚಿಸಿರುವುದನ್ನು ವಿರೋಧಿಸಿ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತಂದರು. ಆದರೆ ಸರಕಾರಿ ವಕೀಲರು ವಿಚಾರಣೆಗೆ ಹಾಜರಾಗದೇ ಇರುವದರಿಂದ ಮೀಸಲು ಹೆಚ್ಚಿಸಲು ಸಾಧ್ಯವಾಗಲೇ ಇಲ್ಲ ಎಂದು ಹೇಳಿದರು.

ಜನರನ್ನು ದಾರಿತಪ್ಪಿಸುವ ಕೆಲಸ ಮಾಡಬಾರದು

ಮಾಜಿ ಸಚಿವ ರಮೇಶ ಜಾರಕಿಹೊಳಿ ಮಾತನಾಡಿ, ರಾಜ್ಯದ ನೂತನ ಮುಖ್ಯಮಂತ್ರಿಯಾಗಲಿರುವ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯನವರು ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆ ತೆರವುಗೊಳಿಸಿ, ಮೀಸಲು ಹೆಚ್ಚಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಲಿ. ಕೇಂದ್ರದ ಬಳಿ ನಿಯೋಗ ತೆರಳಿ ಮನವಿ ಮಾಡುವ ಜವಾಬ್ದಾರಿ ನಮ್ಮದಾಗಿದೆ. ಆದರೆ ಸುಳ್ಳು ಹೇಳಿ ಜನರನ್ನು ದಾರಿತಪ್ಪಿಸುವ ಕೆಲಸ ಮಾಡಬಾರದು. ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಕೊನೆ ಅವಧಿಯಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಮೀಸಲು ಹೆಚ್ಚಿಸಲು ನಿರ್ಧರಿಸಲಾಯಿತು. ಕಾನೂನಾತ್ಮಕ ಅನೇಕ ಸಮಸ್ಯೆಗಳಿದ್ದರಿಂದ 9 ಶೆಡ್ಯೂಲ್‌ಗೆ ಸೇರಿಸಲು ಆಗಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡ ಪರವೆಂದು ಹೇಳಿಕೊಂಡು ಜನರನ್ನು ದಾರಿತಪ್ಪಿಸಿರುವ ಕಾಂಗ್ರೆಸ್ ನಾಯಕರು ಮೀಸಲು ಹೆಚ್ಚಿಸುವ ಎದೆಗಾರಿಕೆ ಪ್ರದರ್ಶಿಸಲಿ ಎಂದರು.

ರಾಗಾ, ಖರ್ಗೆ ಸಮಯ ನಿಗದಿ ಬಾಕಿ | ಸಚಿವರ ಪ್ರಮಾಣ ವಚನ ಬಗ್ಗೆ ಹೈಕಮಾಂಡ್ ತೀರ್ಮಾನ

ಬುಧವಾರವೇ ಕಾಂಗ್ರೆಸ್ ಕಚೇರಿಗೆ ಭೂಮಿ ಪೂಜೆ?

ಬೆಂಗಳೂರು: ಜೂನ್ 3ರಂದು ಸಿಎಂ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್‌ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದ್ದು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ಪಕ್ಷದ ಎಲ್ಲ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಅಲ್ಲಿ ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಗಾಂಧಿ ಅವರಿಗೆ ಇನ್ನಷ್ಟೇ ನೀಡಲಾಗುವುದು. ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ಎಲ್ಲ ನಾಯಕರು ಹಾಗೂ ಪದಾಧಿಕಾರಿಗಳಿಗೆ ಆಹ್ವಾನ ನೀಡಲು ಆಗದ ಕಾರಣ, ಇಲ್ಲೇ ಎಲ್‌ಇಡಿ ಪರದೆಗಳಲ್ಲಿ ಆ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಮಗಾಗಿ ಹೋರಾಟ ಮಾಡಿ, ಶ್ರಮಿಸಿದ ನಾಯಕರಿಗೆ ನಾವು ಇಷ್ಟಾದರೂ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.

ಬೆಂಗಳೂರಿನ ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಡಿ.ಕೆ.ಶಿವಕುಮಾರ್ ಅವರು ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

> ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಈ ಕಾರ್ಯಕ್ರಮ ಸರಳವಾಗಿ ನಡೆಯುತ್ತಿರುವುದರಿಂದ ಹೆಚ್ಚಿನ ಜನ ಸೇರಲು ಆಗುವುದಿಲ್ಲ. ಹೀಗಾಗಿ ನಮ್ಮ ಕಾರ್ಯಕರ್ತರು ಕ್ಷಮಿಸಬೇಕು.
>
> ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ಮಂಡ್ಯ ಜಿಲ್ಲೆಗೆ ಎರಡು ಸಚಿವ ಸ್ಥಾನ ನೀಡಲು ಬೇಡಿಕೆ

ಡಿಕೆಶಿಗೆ ಅಧಿಕಾರ ಸಿಕ್ಕರೆ ನನಗೆ ಸಿಕ್ಕಂತೆ: ಗಣಿಗ ರವಿಕುಮಾರ್

ಮಂಡ್ಯ: ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಸಿಕ್ಕರೆ ನನಗೆ ಸಿಕ್ಕಂತೆಯೇ. ಮಂಡ್ಯ ಜಿಲ್ಲೆಗೆ ಎರಡು ಸಚಿವ ಸ್ಥಾನ ಸಿಗಲಿ ಎಂಬುದು ನನ್ನ ಬೇಡಿಕೆ ಎಂದು ಶಾಸಕ ಗಣಿಗ ರವಿಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, 40 ವರ್ಷಗಳ ಪರಿಶ್ರಮಕ್ಕೆ ಫಲ ಸಿಕ್ಕಿದೆ. ನನ್ನ ಕಷ್ಟ ಕಾಲದಲ್ಲಿ ಡಿಕೆಶಿ ನನ್ನೊಂದಿಗಿದ್ದರು. ಅವರು ಸಿಎಂ ಆಗುತ್ತಿರುವುದು ಖುಷಿ ತಂದಿದೆ. ಸಿದ್ದರಾಮಯ್ಯ ಒಂದು ಕಪ್ಪುಚುಕ್ಕೆ ಇಲ್ಲದೆ ಆಡಳಿತ ನಡೆಸಿದ್ದಾರೆ. ಅದನ್ನೇ ಡಿಕೆಶಿ ಕೂಡ ಮುಂದುವರಿಸಿಕೊಂಡು ಹೋಗುತ್ತಾರೆ. ಇಷ್ಟು ದಿನ ವಿರೋಧ ಪಕ್ಷಗಳು ಸಿದ್ದರಾಮಯ್ಯ ಆಡಳಿತ ಸರಿಯಿಲ್ಲ ಎನ್ನುತ್ತಿದ್ದರು. ಈಗ ಸಿದ್ದರಾಮಯ್ಯಗೆ ಅನ್ಯಾಯ ಆಗಿದೆ ಎನ್ನುತ್ತಿದ್ದಾರೆ. ವಿರೋಧ ಪಕ್ಷಗಳದ್ದು ಡಬಲ್ ಸ್ಟ್ಯಾಂಡರ್ಡ್. ನಾಯಕತ್ವ ಬದಲಾವಣೆ ವಿಚಾರದಲ್ಲಿ ಅವರಂತೆ ನಮ್ಮಲ್ಲೂ ಜಗಳ ಆಗುತ್ತೆ ಎಂದು ನಿರೀಕ್ಷಿಸಿದ್ದರು. ಆದರೆ ನಮ್ಮಲ್ಲಿ ಸ್ಮೂತ್ ಆಗಿ ಅಧಿಕಾರ ಹಸ್ತಾಂತರ ಆಗಿದೆ ಎಂದರು.

ನಮಗೆ ಸಚಿವ ಸ್ಥಾನದ ಮೇಲೆ ಆಸೆ ಇಲ್ಲ. ನಾನು ಮೊದಲ ಬಾರಿ ಗೆದ್ದಿದ್ದೇನೆ. ಹಿರಿಯರಿಗೆ ಅವಕಾಶ ಸಿಗಲಿ, ಆದರೆ ಅರ್ಹ ಹೊಸಬರಿಗೂ ಅವಕಾಶ ಸಿಗಬೇಕು. ಅಶೋಕ್ ರೈ, ಶಿವಗಂಗಾ ಬಸವರಾಜು, ಭರತ್ ರೆಡ್ಡಿ, ಪ್ರದೀಪ್ ಈಶ್ವರ್ ಅಂತಹ ಹೊಸಬರಿಗೆ ಅವಕಾಶ ಸಿಗಲಿ. ಸಚಿವರಾಗಿ ಚಲುವರಾಯಸ್ವಾಮಿ ಉತ್ತಮ ಕೆಲಸ ಮಾಡಿದ್ದಾರೆ. ನರೇಂದ್ರ ಸ್ವಾಮಿಗೆ ಬೇರೆ ಕೋಟಾ ಇದೆ. ಆದರೆ ರಮೇಶ್ ಬಂಡಿಸಿದ್ದೇಗೌಡ 3 ಬಾರಿ ಗೆದ್ದಿದ್ದಾರೆ. ಜಿಲ್ಲೆಗೆ ಮತ್ತೊಂದು ಸಚಿವ ಸ್ಥಾನ ಸಿಕ್ಕರೆ ಇನ್ನಷ್ಟು ಅಭಿವೃದ್ಧಿ ಆಗಲಿದೆ ಎಂದರು.

ಸಂಪಾದಕೀಯ

ಟ್ರಬಲ್ ಶೂಟರ್ ಸಿಎಂ

ಡಿ.ಕೆ ಶಿವಕುಮಾರ್ ಅವರು ರಾಜ್ಯ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು, ಸಿದ್ದರಾಮಯ್ಯ ಅವರಿಂದ ತೆರವಾಗಿರುವ ರಾಜ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಏರಲಿದ್ದಾರೆ. ಮೂರು ವರ್ಷಗಳಿಂದ ಡಿಸಿಎಂ ಆಗಿ ಸಾಕಷ್ಟು ಮಾಗಿದ ಅನುಭವ ಗಳಿಸಿಕೊಂಡಿರುವ ಡಿಕೆಶಿ ಅವರು ಇದೀಗ ರಾಜ್ಯದ ಚುಕ್ಕಾಣಿ ಹಿಡಿಯಲಿದ್ದು, ಅವರ ನಾಯಕತ್ವದಲ್ಲಿ ರಾಜ್ಯದ ಮುನ್ನಡೆ ಹೇಗಿರಲಿದೆ ಎಂಬ ಕುತೂಹಲವಿದೆ. ನಾಯಕತ್ವದ ವಿಚಾರದಲ್ಲಿ ಡಿಕೆಶಿ ಅವರನ್ನು ಯಾರೂ ಕಡೆಗಣಿಸಲು ಸಾಧ್ಯವಿಲ್ಲ. ಕಳೆದ ಬಾರಿ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಪಕ್ಷದ ಅಧ್ಯಕ್ಷರಾಗಿ ಮಹತ್ವದ ಹೊಣೆ ವಹಿಸಿಕೊಂಡು, ಕಾಲಿಗೆ ಚಕ್ರ ಕಟ್ಟಿಕೊಂಡಂತೆ ತಿರುಗಾಡಿ, ಬಿಜೆಪಿಯ ಆಡಳಿತದ ಲೋಪದೋಷಗಳನ್ನು ಪರಿಣಾಮಕಾರಿಯಾಗಿ ಟೀಕಿಸುತ್ತ, ಕಾಂಗ್ರೆಸ್ ಆಡಳಿತಕ್ಕೆ ಬರುವಲ್ಲಿ ಗಣನೀಯ ಸಾಧನೆ ಮಾಡಿದವರು ಅವರು. ಸತತ ಎಂಟನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ಅವರು ತಮ್ಮ ಕ್ಷೇತ್ರದ ಒಳಹೊರಗು ಹಾಗೂ ಜನಾಭಿಪ್ರಾಯವನ್ನು ಚೆನ್ನಾಗಿಯೇ ಬಲ್ಲರು. ಈ ಹಿಂದೆಯೂ ನಾಲ್ವರು ಮುಖ್ಯಮಂತ್ರಿಗಳ ಸಂಪುಟಗಳಲ್ಲಿ ಹಲವು ಖಾತೆ ನಿರ್ವಹಿಸಿದ ಅನುಭವವೂ ಅವರಲ್ಲಿದೆ. ನೇರ ನಡೆ ನುಡಿಯ ಅವರು ಪಕ್ಷದ ಸಂಕಷ್ಟದ ಸ್ಥಿತಿಯಲ್ಲಿರುವಾಗ ಮುನ್ನಗ್ಗಿ ಕ್ಲಿಷ್ಟ ಪರಿಸ್ಥಿತಿಗಳನ್ನು ಲೀಲಾಜಾಲವಾಗಿ ಪರಿಹರಿಸುವುದರಿಂದ ಅವರಿಗೆ ಪಕ್ಷದ ಟ್ರಬಲ್ ಶೂಟರ್ ಎಂಬ ಬಿರುದೂ ಪ್ರಾಪ್ತವಾಗಿದೆ. ಹಿಂದೆ ಮಹಾರಾಷ್ಟ್ರದ ಕಾಂಗ್ರೆಸ್ ಸರಕಾರ ಬೀಳದಂತೆ ಹಾಗೂ ಗುಜರಾತ್‌ನ ರಾಜ್ಯಸಭೆ ಚುನಾವಣೆ ಸಂದರ್ಭ ಪಕ್ಷದ ಟ್ರಬಲ್ ಶೂಟರ್ ಆಗಿ ಕಾರ್ಯ ನಿರ್ವಹಿಸಿ ಹೈಕಮಾಂಡ್ ಮೆಚ್ಚುಗೆ ಗಳಿಸಿದ್ದರು. ಕಾಂಗ್ರೆಸ್‌ನಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ರಾಜಕೀಯ ಯಾತ್ರೆ ಆರಂಭಿಸಿದ ಅವರು ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಾಗಿ ಬೆಳೆದು, 2020ರಲ್ಲಿ ಕೆಪಿಸಿಸಿ ಅಧ್ಯಕ್ಷ ಆಗುವವರೆಗೆ ಪರಿಶ್ರಮದ ಹಾದಿಯಲ್ಲಿ ಸಾಗಿ ಬಂದಿದ್ದಾರೆ. ಬಿಜೆಪಿ ಕೋಪಕ್ಕೆ ತುತ್ತಾಗಿ ಜೈಲುವಾಸವನ್ನೂ ಕಂಡದ್ದುಂಟು. ಮೇಕೆದಾಟು ಪಾದಯಾತ್ರೆ ಸೇರಿದಂತೆ ಹಲವು ಹೋರಾಟಗಳಲ್ಲೂ ಅವರು ಮುಂಚೂಣಿಯಲ್ಲಿದ್ದವರು. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಅವರ ರಾಜಕೀಯ ಖದರ್ ಬೇರೆಯೇ ಆಗಿದೆ. ಪಕ್ಷವನ್ನು ಸಂಘಟಿಸಲು ಹಾಗೂ ಅಧಿಕಾರಕ್ಕೆ ತರಲು ತಾವು ಪಟ್ಟ ಶ್ರಮಕ್ಕೆ ತಕ್ಕ ಕೂಲಿ ಸಿಗಬೇಕು ಎಂದು ಅವರು ಹೇಳಿಕೊಂಡದ್ದುಂಟು. ಅದು ಅವರಿಗೆ ಈಗ ಸಿಕ್ಕಿರುವಂತಿದೆ. ತಮ್ಮ ಪಕ್ಷದ ಗ್ಯಾರಂಟಿಗಳನ್ನು ಕೈಬಿಡದೆ, ಇತರ ಯೋಜನೆಗಳನ್ನೂ ಕೈಗೊಂಡು ಸಮರ್ಥ ಆಡಳಿತಗಾರ ಎನಿಸಬೇಕಾದ ಸವಾಲು ಈಗ ಅವರ ಮುಂದಿದೆ.

ಸೊಂಪಾದಕೀಯ

ಆನೆಗಳ ಪ್ರೇಮ ಪ್ರಕರಣ

ಉತ್ತರಾಖಂಡ ರಾಜ್ಯಕ್ಕೆ ಕರ್ನಾಟಕದಿಂದ ತೆರಳಿದ 2 ಸಾಕಾನೆಗಳು ಕಾಡಾನೆ ಹಿಂಡಿನೊಂದಿಗೆ ಪರಾರಿಯಾಗಿವೆ. ಉತ್ತರಾಖಂಡದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನಕ್ಕೆ 2017ರಲ್ಲಿ ನಮ್ಮ ರಾಜ್ಯದ ದುಬಾರೆ ಮತ್ತು ಮತ್ತಿಗೋಡು ಆನೆ ಶಿಬಿರದಿಂದ ತುಂಗಾ ಮತ್ತು ಕಪಿಲಾ ಎನ್ನುವ 2 ಕುಮ್ಕಿ ಹೆಣ್ಣಾನೆಗಳನ್ನು ಕರೆದೊಯ್ಯಲಾಗಿತ್ತು. ಇವು ಕುಮ್ಕಿ ಆನೆಗಳು. ಕಾಡಾನೆಗಳನ್ನು ನಿಯಂತ್ರಿಸುವುದರ ಜತೆಗೆ ಅವುಗಳನ್ನು ಸೆರೆಹಿಡಿಯಲು ಕುಮ್ಕಿ ಆನೆಗಳನ್ನು ಬಳಸಲಾಗುತ್ತದೆ. ಕುಮ್ಕಿ ಪದದ ಮೂಲ ತಮಿಳು. ಇದರ ಅರ್ಥ ಹಿಡಿಯುವುದು ಅಥವಾ ಬಲೆಗೆ ಬೀಳಿಸುವುದು. ಕಾಡಾನೆಗಳನ್ನು ಬಲೆಗೆ ಬೀಳಿಸಬೇಕಿದ್ದ ಈ ಹೆಣ್ಣಾನೆಗಳನ್ನು ಉತ್ತರಾಖಂಡದ ಗಂಡಾನೆಗಳೇ ಬಲೆಗೆ ಬೀಳಿಸಿವೆ. ಈ ಹೆಣ್ಣಾನೆಗಳ ಪೋಷಕರಿಗೆ, ಮಾವುತರಿಗೆ ಎಷ್ಟು ಬೇಸರ ಆಗಿರಬಹುದು. ತಮ್ಮ ಮನೆ ಹೆಣ್ಣುಮಗಳು ಬೇರೆ ರಾಜ್ಯದ, ಗುರ್ತು ಪರಿಚಯ ಇಲ್ಲದ ಪುರುಷರ ಜೊತೆ ಓಡಿಹೋದರೆ ಯಾರಿಗೆ ತಾನೆ ಬೇಜಾರಾಗುವುದಿಲ್ಲ? ಆದರೆ, ಈ ಕುಮ್ಕಿ ಆನೆಗಳು ಶಿಬಿರದಲ್ಲಿ ಇರುವಾಗ ಗಂಡು ಆನೆಗಳು ಸಮಾಧಾನದಿಂದ ಇರುತ್ತವೆ ಎನ್ನುತ್ತಾರೆ ತಜ್ಞರು. ಅಂದರೆ ಆ ಕಾಡಾನೆಗಳು ಕೂಡ ಈಗ ಸಮಾಧಾನದಿಂದ ಇರಬಹುದು. ಬಹುಶಃ ಈ ಕುಮ್ಕಿ ಆನೆಗಳು ಮನುಷ್ಯ ಲವರ್‌ಗಳಂತೆಯೇ ಆ ಗಂಡಾನೆಗಳ ಜೊತೆ ಮದುವೆಯಾಗಿ, ಸಂಸಾರ ಹೂಡಿ, ಮುಂದೆ ಮಕ್ಕಳ ಜೊತೆ ತವರು ಮನೆಯವರೆದುರು ಹಾಜರಾದರೆ ಏನು ಮಾಡುವುದು? ಏನೂ ಇಲ್ಲ. ಚೆನ್ನಾಗಿರಿ ಎಂದು ಆಶೀರ್ವಾದ ಮಾಡುವುದಷ್ಟೇ ಗತಿ.

ಸಂಪಾದಕರ ಸದ್ಯಶೋಧನೆ

ಇವರ ಇಂಗ್ಲಿಷ್ ತುಟ್ಟಿಯೇ !

ಜಪಾನ್ ಜಗತ್ತಿನಲ್ಲಿ ಮುಂದುವರಿದ ಮತ್ತು ಅತ್ಯಂತ ಪ್ರಭಾವಿ ದೇಶ. ಆದರೆ ಇಂಗ್ಲಿಷ್ ಭಾಷೆಯ ವಿಷಯದಲ್ಲಿ ಜಪಾನಿಯರು ಹಿಂದುಳಿದವರು. ಜಪಾನಿಯರಿಗೆ ಇಂಗ್ಲಿಷ್ ಭಾಷೆಯೇನಾದರೂ ಕೈಹಿಡಿದಿದ್ದರೆ ಜಗತ್ತನ್ನೇ ಆಳಿಬಿಡುತ್ತಿದ್ದರು. ಆದರೆ ಅವರ ಇಂಗ್ಲಿಷ್ ಜ್ಞಾನ ಮಾತ್ರ ತುಸು ತುಟ್ಟಿ. ತಂತ್ರಜ್ಞಾನ, ಆರ್ಥಿಕತೆ ಮತ್ತು ಇನ್ನಿತರ ಎಲ್ಲ ರಂಗಗಳಲ್ಲಿಯೂ ಜಪಾನ್ ಪ್ರಗತಿಪಥದಲ್ಲಿದೆ. ಆದರೂ, ಜಪಾನಿಯರ ಇಂಗ್ಲಿಷ್ ಭಾಷಾ ಪ್ರಾವೀಣ್ಯದ ಮಟ್ಟ ಮಾತ್ರ ಸಮರ್ಪಕವಾಗಿ ಅಭಿವೃದ್ಧಿಯಾಗಿಲ್ಲ ಎನ್ನುವುದು ಸಾಕಷ್ಟು ಅಧ್ಯಯನಗಳಿಂದಲೂ ಸಾಬೀತಾಗಿದೆ. ಜಪಾನಿನ ಶಾಲಾ ಪಠ್ಯಕ್ರಮದಲ್ಲಿ ಇಂಗ್ಲಿಷ್ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಕಲಿಸಲಾಗುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಕನಿಷ್ಠ 6 ವರ್ಷದಿಂದ 10 ವರ್ಷಗಳವರೆಗೆ ಇಂಗ್ಲಿಷ್ ಅಧ್ಯಯನ ಮಾಡುತ್ತಾರೆ. ಆದರೆ, ಈ ಪಾಠಗಳು ಹೆಚ್ಚಾಗಿ ವ್ಯಾಕರಣ, ಪದಸಂಪತ್ತು ಮತ್ತು ಪರೀಕ್ಷಾ ದೃಷ್ಟಿಕೋನದ ಮೇಲೆ ಕೇಂದ್ರೀಕೃತವಾಗಿರುತ್ತವೆ. ವಿದ್ಯಾರ್ಥಿಗಳು ಇಂಗ್ಲಿಷನ್ನು ಆಡುವ ಭಾಷೆಯಾಗಿ ಬಳಸುವ ಅವಕಾಶ ಬಹಳ ಕಡಿಮೆ. ಇಂಗ್ಲಿಷ್ ಪಾಠಶಾಲೆಗಳಲ್ಲಿಯೂ ಬಹುಮಟ್ಟಿಗೆ ಜಪಾನಿ ಭಾಷೆಯಲ್ಲಿಯೇ ಕಲಿಕೆ ಇರುತ್ತದೆ. ಇಂಗ್ಲಿಷ್ ಕಲಿಕೆಯನ್ನು ನೈಜ ಸಂವಹನದ ಬಳಕೆಗಿಂತ ಹೆಚ್ಚಾಗಿ, ಪಾಸ್ ಆಗುವುದಕ್ಕಾಗಿ ಮಾತ್ರ ಉಪಯೋಗಿಸುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ನೈಜ ಭಾಷಾ ಪ್ರಾಯೋಗಿಕತೆಯ ಅಭಾವ ಎದ್ದು ಕಾಣುತ್ತದೆ. ಜಪಾನಿ ಭಾಷೆಗೂ, ಇಂಗ್ಲಿಷ್‌ಗೂ ಭಾರಿ ವ್ಯತ್ಯಾಸ. ಇಂಗ್ಲಿಷ್ ಪದಗಳನ್ನು ಉಚ್ಚರಿಸುವುದು ಜಪಾನಿಯರಿಗೆ ಕಷ್ಟ. ಉದಾಹರಣೆಗೆ, 'ಎಲ್' ಮತ್ತು 'ಆರ್' ಧ್ವನಿಗಳ ವ್ಯತ್ಯಾಸ, ಅಥವಾ ಥ, ಧ, ಫ ಇತ್ಯಾದಿ ಧ್ವನಿಗಳು ಜಪಾನಿಯಲ್ಲಿ ಇಲ್ಲದ್ದರಿಂದ ಇಂಗ್ಲಿಷ್ ಮಾತನಾಡುವಾಗ ಸರಿಯಾದ ಉಚ್ಚಾರ ಆಗುವುದಿಲ್ಲ. ಯಾರಾದರೂ ಯಾವುದೇ ಭಾಷೆಯನ್ನು ಓದಲು, ಬರೆಯಲು ಕಷ್ಟಪಟ್ಟರೆ ಅವರು ಆ ಭಾಷೆಯನ್ನು ಒಲಿಸಿಕೊಳ್ಳುವ ಯತ್ನವನ್ನು ಕಡಿಮೆ ಮಾಡುವುದು ಸಹಜ. ಏಕೆಂದರೆ ತಪ್ಪು ಉಚ್ಚಾರದಿಂದ ಇತರರು ಹಾಸ್ಯ ಮಾಡಬಹುದು ಎಂಬ ಭಯ. ಜಪಾನಿಯರ ಸಂಸ್ಕೃತಿಯಲ್ಲಿ ವಿನಯ, ಶಿಸ್ತು ಮತ್ತು ತಪ್ಪುಮಾಡದ ಚಿಂತನೆ ಪ್ರಮುಖ ಪಾತ್ರವಹಿಸುತ್ತವೆ. ಈ ದೃಷ್ಟಿಯಿಂದ, ಜಪಾನಿಯರು ಇಂಗ್ಲಿಷ್ ಮಾತನಾಡುವಾಗ ತಪ್ಪಾಗಬಹುದೆಂಬ ಭಯದಿಂದಲೇ ಮಾತನಾಡುವುದು ತಪ್ಪಿಸುತ್ತಾರೆ. ದೋಷವಿಲ್ಲದೆ ಮಾತನಾಡುವುದನ್ನು ಮೊದಲ ಆದ್ಯತೆಯಾಗಿ ಪರಿಗಣಿಸುತ್ತಾರೆ. ಇದರಿಂದಾಗಿ ಭಾಷೆ ಕಲಿಯುವಲ್ಲಿ ನೈಜ ಸಂವಹನದ ಪ್ರಯತ್ನ ಕಡಿಮೆಯಾಗುತ್ತದೆ. ಜಪಾನಿನಲ್ಲಿ ಬೇರೆ ಭಾಷೆಯ ಬಳಕೆಯ ಅಗತ್ಯ ಕಡಿಮೆ. ಬಹುತೇಕರು ಜಪಾನಿ ಭಾಷೆಯಲ್ಲಿಯೇ ತಮ್ಮ ಎಲ್ಲ ದೈನಂದಿನ ಚಟುವಟಿಕೆಗಳನ್ನು ನಡೆಸಬಲ್ಲರು. ಹೀಗಾಗಿ ಇಂಗ್ಲಿಷ್ ಬಳಸುವ ಸಂದರ್ಭಗಳು ವಿರಳ. ಇದು ಭಾಷಾ ನೈಪುಣ್ಯ ಹೆಚ್ಚಿಸಲು ದೊಡ್ಡ ಹಿನ್ನಡೆ. ಜಪಾನ್ ಸದಾ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ದೇಶ. ಗೂಗಲ್ ಅನುವಾದ, ಮಶೀನ್ ಲರ್ನಿಂಗ್, ಎಐ ಸಾಧನಗಳು ಹಾಗೂ ಇಂಗ್ಲಿಷ್ ರಹಿತ ಪ್ಲಾಟ್‌ಫಾರ್ಮ್‌ಗಳು ಹೆಚ್ಚು ಉಪಯೋಗವಾಗುತ್ತಿವೆ. ಈ ತಂತ್ರಜ್ಞಾನಗಳ ಮೇಲೆ ಹೆಚ್ಚಾದ ಅವಲಂಬನೆ ಭಾಷೆಯ ನೈಜ ಶಿಕ್ಷಣಕ್ಕೆ ಅಡ್ಡಿಯಾಗಬಹುದು. 'ನಾನು ಮಾತಾಡಬೇಕಾಗಿಲ್ಲ, ಅನುವಾದಿಸುವ ಸಾಧನ ಇದೆ' ಎಂಬ ಮನೋಭಾವನೆ ಕೆಲವೊಮ್ಮೆ ಭಾಷಾ ಕಲಿಕೆಗೆ ತೊಡಕಾಗಬಹುದು. ಇಂಗ್ಲಿಷ್ ಕೌಶಲ ಸೂಚ್ಯಂಕ ಪ್ರಕಾರ, ಜಪಾನ್ ಇಂಗ್ಲಿಷ್ ಪ್ರಾವೀಣ್ಯ ಕ್ರಮಾಂಕದಲ್ಲಿ ಮಧ್ಯಮ ಅಥವಾ ಕೆಳ ಮಟ್ಟದಲ್ಲಿದೆ. 2023ರ ವರದಿಯ ಪ್ರಕಾರ, ಜಪಾನ್ 87 ದೇಶಗಳ ಪೈಕಿ, 80ನೇ ಸ್ಥಾನದಲ್ಲಿತ್ತು. ಹೋಲಿಕೆಗೆ ದಕ್ಷಿಣ ಕೊರಿಯಾ, ಸಿಂಗಾಪುರ್ ಅಥವಾ ಹಾಂಗ್‌ಕಾಂಗ್ ಮುಂತಾದ ದೇಶಗಳು ಅತ್ಯುತ್ತಮ ಮಟ್ಟದಲ್ಲಿವೆ. ಇತ್ತೀಚಿನ ವರ್ಷಗಳಲ್ಲಿ ಜಪಾನ್ ಸರಕಾರ ಶಿಕ್ಷಣ ತಂತ್ರವನ್ನು ಪರಿಷ್ಕರಿಸಲು ಪ್ರಯತ್ನಿಸುತ್ತಿದೆ. English Education Reform ಹೆಸರಿನ ಯೋಜನೆಯ ಮೂಲಕ ಶೈಕ್ಷಣಿಕ ವ್ಯವಸ್ಥೆಯಲ್ಲಿ ಹೆಚ್ಚು ಸಂವಹನಾಧಾರಿತ ಇಂಗ್ಲಿಷ್ ಕಲಿಕೆಗೆ ಪ್ರೋತ್ಸಾಹ ನೀಡುತ್ತಿದೆ. JET Programme (Japan Exchange and Teaching) ಎಂಬ ಯೋಜನೆಯ ಮೂಲಕ ಇಂಗ್ಲಿಷ್ ಶಿಕ್ಷಕರನ್ನು ಬಾಹ್ಯ ರಾಷ್ಟ್ರಗಳಿಂದ ಕರೆಸಿ, ಸ್ಥಳೀಯ ಶಾಲೆಗಳಲ್ಲಿ ಇಂಗ್ಲಿಷ್ ಬೋಧನೆಗೆ ನೇಮಕ ಮಾಡುತ್ತಿದೆ. ಇದು ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಮಾತುಕತೆ, ಸಂಸ್ಕೃತಿ ಪರಿಚಯ ಮತ್ತು ಸಾಂಸ್ಕೃತಿಕ ವಿನಿಮಯದ ಅವಕಾಶಗಳನ್ನು ಒದಗಿಸುತ್ತಿದೆ. ಹಾಗೆಯೇ, ಯುವ ಪೀಳಿಗೆ ನೆಟ್‌ಫ್ಲಿಕ್ಸ್, ಯುಟ್ಯೂಬ್ ಇನ್ಸ್ಟಾಗ್ರಾಮ್ ಮುಂತಾದ ಸಾಮಾಜಿಕ ಜಾಲತಾಣಗಳ ವೇದಿಕೆಗಳಿಂದಾಗಿ ಇಂಗ್ಲಿಷ್ ಬಳಕೆಯಲ್ಲಿ ಹೆಚ್ಚು ತೊಡಗಿಕೊಳ್ಳುತ್ತಿರುವುದು ಕಂಡುಬರುತ್ತಿದೆ.

ಸಿದ್ದು ವಿದಾಯದ ಅಂತಿಮ ಕ್ಷಣಗಳು

ಮೂರ್ತಿಪೂಜೆ

ಆರ್.ಟಿ. ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ರಾಹುಲ್ ಗಾಂಧಿ ಅವರ ಆಹ್ವಾನದ ಮೇರೆಗೆ ದಿಲ್ಲಿಗೆ ಹೊರಟ ಸಿಎಂ ಸಿದ್ದರಾಮಯ್ಯನವರಿಗೆ ಎರಡು ವಿಷಯಗಳು ಪಕ್ಕಾ ಆಗಿದ್ದವು. ಮೊದಲ ವಿಷಯ, ರಾಹುಲ್ ಗಾಂಧಿ ಅವರು ತಮ್ಮ ರಾಜೀನಾಮೆ ಕೇಳಲಿದ್ದಾರೆ ಎಂಬುದು. ಎರಡನೆಯ ವಿಷಯ, ತಮ್ಮ ಸುತ್ತ ನಿಂತು ಆರ್ಭಟಿಸುತ್ತಿದ್ದ ಬಹುತೇಕ ಬೆಂಬಲಿಗರು ಅದಾಗಲೇ ಡಿ.ಕೆ.ಶಿವಕುಮಾರ್ ಅವರ ಕ್ಯಾಂಪಿಗೆ ಸೇರಿಕೊಂಡಿದ್ದಾರೆ ಎಂಬುದು.

ಹೀಗಾಗಿ ಮೇ ಇಪ್ಪತ್ತಾರರ ಮಂಗಳವಾರ ದಿಲ್ಲಿಗೆ ಹೋದ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಪಕ್ಷ ನಿಷ್ಠೆಯ ಬಗ್ಗೆ ಪ್ರಶಂಸಿಸಿದ ರಾಹುಲ್ ಗಾಂಧಿ ಅವರು ಕೊನೆಗೆ ವಿಷಯಕ್ಕೆ ಬಂದಿದ್ದಾರೆ.

'ಸಿದ್ದರಾಮಯ್ಯಾಜೀ. ಪಕ್ಷ ನಿಮ್ಮಿಂದ ಒಂದು ತ್ಯಾಗ ಬಯಸುತ್ತಿದೆ. ಇನ್ ಫ್ಯಾಕ್ಟ್ ಈ ವಿಷಯವನ್ನು ನಮ್ಮ ಕೆ.ಸಿ.ವೇಣುಗೋಪಾಲ್ ಅವರು ನಿಮ್ಮ ಗಮನಕ್ಕೆ ತಂದಿದ್ದಾರೆ ಅಂತ ಭಾವಿಸುತ್ತೇನೆ. ನಾವು ಕರ್ನಾಟಕದಲ್ಲಿ ಪಕ್ಷವನ್ನು ಬಲಿಷ್ಠಪಡಿಸಲು, 2028ರ ವಿಧಾನಸಭಾ ಚುನಾವಣೆಯಲ್ಲಿ ಮರಳಿ ಗೆಲುವು ಸಾಧಿಸಲು ಒಂದು ಪ್ಲಾನು ಮಾಡಿದ್ದೇವೆ. ಅದು ಯಶಸ್ವಿಯಾಗಬೇಕು ಎಂದರೆ ನಿಮ್ಮ ಸಹಕಾರ ಬೇಕು' ಎಂದಿದ್ದಾರೆ.

ಯಾವಾಗ ರಾಹುಲ್ ಗಾಂಧಿಯವರು ಈ ಮಾತು ಹೇಳಿದರೋ? ಆಗ ಗಟ್ಟಿ ಮನಸ್ಸು ಮಾಡಿಕೊಂಡ ಸಿದ್ದರಾಮಯ್ಯ ಅವರು: 'ಸಾರ್, ನೀವು ನನಗೆ ನಿರಂತರವಾಗಿ ಬೆಂಬಲ, ಸಹಕಾರ ನೀಡುತ್ತಾ ಬಂದವರು. ಪಕ್ಷವನ್ನು ಬಲಿಷ್ಟಗೊಳಿಸಲು ನೀವು ಏನು ಹೇಳುತ್ತೀರೋ? ಅದನ್ನು ಮಾಡಲು ನಾನು ರೆಡಿ' ಎಂದಿದ್ದಾರೆ.

ಹೀಗೆ ಸಿದ್ದರಾಮಯ್ಯ ಅವರು ಮುಕ್ತ ಮನಸ್ಸಿನಿಂದ ಮಾತನಾಡಿದ್ದರಿಂದ ಖುಷಿಯಾದ ರಾಹುಲ್ ಗಾಂಧಿ: 'ಇದನ್ನು ನಿಮಗೆ ಹೇಳಲು ನನಗೆ ಕಷ್ಟವಾಗುತ್ತಿದೆ. ಆದರೂ ಪಕ್ಷದ ಹಿತದೃಷ್ಟಿಯಿಂದ ನಾನಿದನ್ನು ನಿಮಗೆ ಹೇಳಲೇಬೇಕು. ಅದೇಂದರೆ ನೀವು ಸಿಎಂ ಹುದ್ದೆಗೆ ರಾಜೀನಾಮೆ ನೀಡಬೇಕು. ಹಾಗಂತ ನೀವು ಪೊಲಿಟಿಕಲಿ ಬ್ಯಾಕ್ ಡೋರ್‌ಗೆ ಸರಿಯಬೇಕು ಅಂತಲ್ಲ. ಬದಲಿಗೆ ಇದೊಂದು ತಕ್ಷಣದ ಹೊಂದಾಣಿಕೆ. ಇವತ್ತು ನೀವು ತೆರವು ಮಾಡಿದ ಜಾಗಕ್ಕೆ ಡಿ.ಕೆ.ಶಿವಕುಮಾರ್ ಬರುತ್ತಾರೆ. ಮುಂದೆ 2028ರಲ್ಲಿ ನೀವು, ಶಿವಕುಮಾರ್ ಜಂಟಿಯಾಗಿ ಹೋರಾಡಿ ಪಕ್ಷವನ್ನು ಮರಳಿ ಅಧಿಕಾರಕ್ಕೆ ತನ್ನಿ. ಆಗಲೂ ಮೊದಲ ಅವಧಿಯಲ್ಲಿ ನೀವು ಸಿಎಂ ಆಗಿ, ಎರಡನೇ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗಲಿ' ಎಂದು ವಿವರಿಸಿದ್ದಾರೆ.

ಅಷ್ಟೇ ಅಲ್ಲ, 'ನೀವು ಈಗ ರಾಜೀನಾಮೆ ನೀಡಿದ ನಂತರ ರಾಜ್ಯಸಭೆಗೆ ಬನ್ನಿ. ರಾಷ್ಟ್ರದಲ್ಲಿ ಪಕ್ಷವನ್ನು ಕಟ್ಟುವ ವಿಷಯದಲ್ಲಿ ನಿಮ್ಮ ಸಲಹೆ ನಮಗೆ ಬೇಕು' ಎಂದಿದ್ದಾರೆ.

ಯಾವಾಗ ರಾಹುಲ್ ಗಾಂಧಿ ಹೀಗೆ ಹೇಳಿದರೋ? ಆಗ ಸಿದ್ದರಾಮಯ್ಯ ಅವರು 'ಯಸ್ ಸಾರ್ ನಾನು ರಾಜೀನಾಮೆಗೆ ರೆಡಿ ಇದ್ದೇನೆ. ಆದರೆ ರಾಜ್ಯಸಭೆಗೆ ಬರುವ ಇಚ್ಛೆ ನನಗಿಲ್ಲ. ಏನೇ ಆದರೂ ಇಷ್ಟು ದಿನ ನನಗೆ ಸಹಕಾರ ನೀಡಿದ್ದೀರಿ. ಅದಕ್ಕಾಗಿ ಥ್ಯಾಂಕ್ಯೂ. ಇನ್ನು ಪಕ್ಷ ಕಟ್ಟುವ ವಿಷಯದಲ್ಲಿ ನಿಮ್ಮ ಯೋಚನೆ ಏನಿದೆ? ಅದಕ್ಕೆ ನನ್ನ ಸಂಪೂರ್ಣ ಸಹಕಾರವಿದೆ' ಎಂದು ಹೇಳಿದ್ದಾರೆ.

ಹೀಗೆ ರಾಹುಲ್ ಗಾಂಧಿಯವರ ಜತೆ ಮಾತನಾಡಿ ಹೊರಬಂದ ಸಿದ್ದರಾಮಯ್ಯ ಅವರಿಗೆ ಕೆಲ ವಿಷಯಗಳು ಸ್ಪಷ್ಟವಾಗಿವೆ. ಈ ಪೈಕಿ ಮುಖ್ಯವಾದುದು ಎಂದರೆ ತಮ್ಮ ಪದತ್ಯಾಗಕ್ಕೆ ರಾಹುಲ್ ಗಾಂಧಿ ಅವರ ಮೇಲೆ ಮಿತಿ ಮೀರಿದ ಒತ್ತಡ ಹಾಕಿದವರು ಪ್ರಿಯಾಂಕ ಗಾಂಧಿ ಎಂಬುದು.

ಮೂಲಗಳ ಪ್ರಕಾರ, 'ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಡಿ.ಕೆ.ಶಿವಕುಮಾರ್ ಅವರಿಗೆ ಪಟ್ಟ ಕಟ್ಟಲೇಬೇಕು ಎಂಬ ವಿಷಯದಲ್ಲಿ ಪರ್ಟಿಕ್ಯುಲರ್ ಆಗಿದ್ದ ಪ್ರಿಯಾಂಕಾ ಗಾಂಧಿ ಅವರು ಎರಡು ತಿಂಗಳ ಹಿಂದೆ ರಾಹುಲ್ ಗಾಂಧಿ ಅವರ ಮುಂದೆ ಒಂದು ಪತ್ರವನ್ನು ಇಟ್ಟಿದ್ದಾರೆ. ಕರ್ನಾಟಕ ಕಾಂಗ್ರೆಸ್‌ನ ತೊಂಬತ್ತೂರು ಶಾಸಕರ ಸಹಿ ಇದ್ದ ಆ ಪತ್ರವನ್ನು ರಾಹುಲ್ ಅವರ ಮುಂದಿಟ್ಟ ಪ್ರಿಯಾಂಕಾ ಗಾಂಧಿ: 'ಇದುವರೆಗೆ ಕರ್ನಾಟಕದ ಕಾಂಗ್ರೆಸ್ ಶಾಸಕಾಂಗದಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಬಹುಮತವಿಲ್ಲ ಅನ್ನುತ್ತಿದ್ದಿರಲ್ಲ? ಈಗ ಅದೇ ಶಾಸಕಾಂಗದ ತೊಂಬತ್ತೂರು ಮಂದಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಬಲಿಸಿ ಪತ್ರಕ್ಕೆ ಸಹಿ ಹಾಕಿದ್ದಾರೆ. ಉಳಿದ ಬಹುತೇಕರು ಹೈಕಮಾಂಡ್ ಸೂಚನೆಯನ್ನು ಪಾಲಿಸುವವರು. ಇಷ್ಟಾದ ಮೇಲೂ ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡದಿದ್ದರೆ ಕಷ್ಟವಾಗುತ್ತದೆ' ಎಂದರಂತೆ.

ಯಾವಾಗ ಪ್ರಿಯಾಂಕಾ ಗಾಂಧಿ ಈ ಪತ್ರವನ್ನು ರಾಹುಲ್ ಮುಂದಿಟ್ಟರೋ? ಇದಾದ ನಂತರ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಮಾರ್ಗೋಪಾಯಗಳ ಬಗ್ಗೆ ಚಿಂತನೆ ನಡೆದು, ಈ ಚಿಂತನೆಯ ವಿವರವನ್ನು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರ ಮೂಲಕ ಕೆಲ ದಿನಗಳ ಹಿಂದೆ ಸಿದ್ದರಾಮಯ್ಯ ಅವರಿಗೆ ತಲುಪಿಸಲಾಗಿತ್ತು.

ಹೀಗೆ ತಮ್ಮನ್ನು ಕೆಳಗಿಳಿಸುವ ತೀರ್ಮಾನವಾಗಿದೆ ಎಂಬುದರ ಸುಳಿವನ್ನು ಪಡೆದ ಸಿದ್ದರಾಮಯ್ಯ ಪದತ್ಯಾಗದ ಗಟ್ಟಿ ನಿರ್ಧಾರದೊಂದಿಗೆ ದಿಲ್ಲಿಗೆ ಹೋಗಿದ್ದಾರೆ. ಹೋಗಿ ಬಂದವರು ಸಿಎಂ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಅವರ ಮುಂದಿನ ಹೆಜ್ಜೆ ಹೇಗಿರುತ್ತದೆ ಅಂತ ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ಟೈಗರ್ ಜಿಂದಾ ಹೈ ಎಂಬುದನ್ನು ಕಾಂಗ್ರೆಸ್ ವರಿಷ್ಠರು ಮರೆತರೆ ಅಪಾಯ ಸನಿಹದಲ್ಲೇ ಇರಲಿದೆ.



ರಾಜ್ಯಸಭೆ ಸೀಟಿಗೆ ಪೈಪೋಟಿ

ಹೀಗೆ ಒಂದು ಕಡೆ ಸಿದ್ದರಾಮಯ್ಯ ಅವರ ರಾಜೀನಾಮೆ ಎಪಿಸೋಡು ಮುಗಿದು ಡಿ.ಕೆ.ಶಿವಕುಮಾರ್ ಅವರ ದರ್ಬಾರು ಆರಂಭವಾಗುವುದು ನಿಕ್ಕಿಯಾಗುತ್ತಿದ್ದಂತೆಯೇ, ಮತ್ತೊಂದೆಡೆ ಕರ್ನಾಟಕದಲ್ಲಿ ರಾಜ್ಯಸಭೆ ಟಿಕೆಟಿಗೆ ಪೈಪೋಟಿ ಶುರುವಾಗಿದೆ.

ಈಗ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೂರು ಸ್ಥಾನಗಳು ದಕ್ಕಲಿದ್ದು, ಈ ಪೈಕಿ ಎರಡು ಸೀಟುಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಶರ್ಮಿಳಾ ರೆಡ್ಡಿ ಅವರ ಆಯ್ಕೆ ಬಹುತೇಕ ಖಚಿತವಾಗಿದೆ. ಉಳಿದ ಒಂದು ಸೀಟನ್ನು ಪಡೆಯಲು ಹಲವರು ಕಸರತ್ತು ನಡೆಸುತ್ತಿದ್ದು ಮೊನ್ನೆ ದಿಲ್ಲಿಗೆ ಹೋಗಿದ್ದ ಕೆ.ಜೆ.ಜಾರ್ಜ್ ಅವರು, ನಾನು 'ರಾಜ್ಯಸಭೆಗೆ ಬರಲು ರೆಡಿ' ಅಂತ ರಾಹುಲ್ ಗಾಂಧಿ ಅವರಿಗೆ ಹೇಳಿದರಂತೆ.

ಆದರೆ ಈ ಸೀಟನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಬಿ.ಜೆ.ವಿಜಯಕುಮಾರ್ ಅವರಿಗೆ ಕೊಡಿಸುವುದು ಸಿದ್ದರಾಮಯ್ಯ ಅವರ ಪ್ರಪೋಸಲ್ಲು.

ಈ ಮಧ್ಯೆ ದಿಲ್ಲಿಯ ವರಿಷ್ಠರ ಮೇಲೆ ಒತ್ತಡ ಹೇರುತ್ತಿರುವ ಪವನ್ ಖೇರಾ, ಸುಪ್ರಿಯಾ ಶ್ರೀನಾಥೆ ಹೇಗಾದರೂ ಮಾಡಿ ಟಿಕೆಟ್ ಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಶರ್ಮಿಳಾ ರೆಡ್ಡಿ ಅವರಿಗೆ ಟಿಕೆಟ್ ಕೊಡಲು ಬಯಸಿರುವುದರಿಂದ ಇವರಿಬ್ಬರಿಗೆ ಚಾನ್ಸು ಕಡಿಮೆ.

ಇದೇ ರೀತಿ ಟಿಕೆಟ್ಟಿಗಾಗಿ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ ಕೂಡಾ ಫೈಟು ನಡೆಸಿದ್ದು ಪಕ್ಷದ ಹಲ ಹಿರಿಯ ನಾಯಕರು ಅವರ ಪರ ಬ್ಯಾಟ್ ಬೀಸುತ್ತಿದ್ದಾರೆ. ಉಳಿದಂತೆ ಬಿಜೆಪಿಗೆ ದಕ್ಕುವ ಒಂದು ಸ್ಥಾನದ ಮೇಲೆ ಹಲವರು ಕಣ್ಣಿಟ್ಟಿದ್ದು ಮಾಜಿ ಸಿಎಂ ಡಿ.ವಿ. ಸದಾನಂದ ಗೌಡ, ನಿರ್ಮಲ್ ಕುಮಾರ್ ಸುರಾನಾ, ಪ್ರಮೋದ್ ಮಧ್ವರಾಜ್ ಅವರು ರೇಸಿನಲ್ಲಿದ್ದಾರೆ.

ಒಂದು ವೇಳೆ ದಿಲ್ಲಿಯ ನಾಯಕರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ರಾಜ್ಯಸಭೆಗೆ ಕಳಿಸಲು ಒಲವು ತೋರಿಸಿದರೆ ಕೇಸು ಕ್ಲೋಸಾಗುತ್ತದೆ. ಇಲ್ಲದಿದ್ದರೆ ಬಿಜೆಪಿಯಲ್ಲಿ ಟಿಕೆಟ್ ಪೈಪೋಟಿ ಮುಂದುವರಿಯಲಿದೆ.

ಬಿಜೆಪಿಯಲ್ಲಿ ಎಮ್ಮೆಲ್ಸಿ ದಂಗಲ್

ಈ ತಿಂಗಳು ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಎರಡು ಸ್ಥಾನಗಳನ್ನು ಗೆಲ್ಲುತ್ತದಲ್ಲ? ಈ ಎರಡು ಸ್ಥಾನಗಳಿಗೆ ಪ್ರಾತಿನಿಧ್ಯವೇ ಇಲ್ಲದ ಸಮುದಾಯದವರನ್ನು ಕಳಿಸುವ ಚಿಂತನೆ ಆರೆಸ್ಸೆಸ್‌ನಲ್ಲಿ ಶುರುವಾಗಿದೆ.

ಈ ಹಿಂದೆ ರಾಜ್ಯಸಭೆ, ಪರಿಷತ್ತುಗಳಿಗೆ ಶಾಂತಾರಾಂ ಸಿದ್ದಿ, ಅಶೋಕ್ ಗಸ್ತಿ ಅವರಂತವರನ್ನು ಕಳಿಸಲು ಕಾರಣವಾಗಿದ್ದ ಆರೆಸ್ಸೆಸ್, ಈಗ ಪರಿಷತ್ತಿಗೂ ಅಂತವರನ್ನು ಕಳಿಸಲು ಬಯಸುತ್ತಿದೆ. ಮೂಲಗಳ ಪ್ರಕಾರ, ಪಕ್ಷಕ್ಕೆ ದಕ್ಕುವ ಎರಡು ಸೀಟುಗಳಿಗಾಗಿ ಬಲಗೈನ ಮಹೇಶ್, ಕುರುಬ ಸಮುದಾಯದ ಶರಣ್ ತಳ್ಳಿಕೇರಿ, ಮಡಿವಾಳ ಸಮುದಾಯದ ನಾಯಕ, ಮೈಸೂರಿನ ರಘುಕೌಟಿಲ್ಯ, ಮಹಿಳಾ ಆಯೋಗದ ಮಾಜಿ ಅಧ್ಯಕ್ಷರು, ಒಕ್ಕಲಿಗ ಸಮುದಾಯದ ಮಂಜುಳಾ ಅವರು ಸೇರಿದಂತೆ ಹಲವರು ಪೈಪೋಟಿ ನಡೆಸಿದ್ದಾರೆ.

ಆದರೆ ಬಲಗೈನ ಛಲವಾದಿ ನಾರಾಯಣಸ್ವಾಮಿ ಅವರು ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ನೆಲೆಯಾಗಿದ್ದು ಈ ಹಿನ್ನೆಲೆಯಲ್ಲಿ ಅದೇ ಸಮುದಾಯಕ್ಕೆ ಟಿಕೆಟ್ ಬೇಡ ಎಂಬ ಕೂಗು ಬಿಜೆಪಿಯಲ್ಲಿದೆ. ಇದೇ ರೀತಿ ಕಾಂಗ್ರೆಸ್ ಪಕ್ಷ ಈ ಬಾರಿ ಕುರುಬ ಸಮುದಾಯದ ಹೆಚ್.ಎಂ.ರೇವಣ್ಣ ಅವರಿಗೆ ಟಿಕೆಟ್ ನೀಡುವುದರಿಂದ ಇಲ್ಲಿ ಅದೇ ಸಮುದಾಯದವರಿಗೆ ಟಿಕೆಟ್ ಕೊಡುವುದು ಬೇಡ ಎಂಬ ಕೂಗೂ ಕೇಳಿ ಬರುತ್ತಿದೆ.

ಪರಿಣಾಮ? ಆರೆಸ್ಸೆಸ್‌ನಲ್ಲಿ ನಡೆಯುತ್ತಿರುವ ಚಿಂತನೆ ಮತ್ತು ಬಿಜೆಪಿಯಲ್ಲಿ ಕೇಳಿ ಬರುತ್ತಿರುವ ಕೂಗು ಒಂದೇ ಲಯಕ್ಕೆ ಬಂದು ಪ್ರಾತಿನಿಧ್ಯವಿಲ್ಲದ ಸಮುದಾಯಗಳ ಅಭ್ಯರ್ಥಿಗಳಿಗೆ ಅವಕಾಶ ಸಿಗುವ ಸಾಧ್ಯತೆ ಜಾಸ್ತಿ.

ಜಾರಕಿಹೊಳಿ ಪಟ್ಟು ಏನು?

ಅಂದ ಹಾಗೆ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಿರುವ ಈ ಹೊತ್ತಿನಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸತೀಶ್ ಜಾರಕಿಹೊಳಿ ಅವರು ಬರುವುದು ಬಹುತೇಕ ನಿಶ್ಚಿತವಾಗಿದೆ. ಆದರೆ ಒಂದೇ ಸಮಸ್ಯೆ ಎಂದರೆ, ತಮಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜತೆ ಮಂತ್ರಿ ಹುದ್ದೆಯೂ ಬೇಕು ಎಂಬುದು ಸತೀಶ್ ಜಾರಕಿಹೊಳಿ ಅವರ ಪಟ್ಟು.

ಹೀಗೆ ಸತೀಶ್ ಜಾರಕಿಹೊಳಿ ಅವರು ಪಕ್ಷಾಧ್ಯಕ್ಷ ಸ್ಥಾನದ ಜತೆ ಮಂತ್ರಿಗಿರಿಗೆ ಪಟ್ಟು ಹಿಡಿಯಲು ಕಾರಣವಿದೆ. ಅದೇಂದರೆ ಬೆಳಗಾವಿ ಜಿಲ್ಲೆಯ ರಾಜಕೀಯದ ಮೇಲೆ ಹಿಡಿತ ಬೇಕು ಎಂಬುದು. ಒಂದು ವೇಳೆ ಮಂತ್ರಿಗಿರಿ ಬಿಟ್ಟು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೇರಿದರೆ ಬೆಳಗಾವಿಯ ರಾಜಕಾರಣದಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಹಿರಿಯ ನಾಯಕ ಲಕ್ಷ್ಮಣ ಸವದಿ ಪವರ್‌ಫುಲ್ಲಾಗುತ್ತಾರೆ. ಇವರಿಬ್ಬರ ಪೈಕಿ ಯಾರು ಮಂತ್ರಿಯಾಗಿ, ಜಿಲ್ಲಾ ಉಸ್ತುವಾರಿ ಸಚಿವರಾದರೂ ಜಿಲ್ಲೆಯ ರಾಜಕೀಯದ ಮೇಲೆ ಹಿಡಿತ ಸಾಧಿಸುತ್ತಾರೆ. ಇದು ಎಷ್ಟು ಡೇಂಜರ್ ಎಂಬುದು ಸತೀಶ್ ಜಾರಕಿಹೊಳಿ ಅವರಿಗೆ ಗೊತ್ತು. ಹೀಗಾಗಿ ಅವರು ಮಂತ್ರಿಗಿರಿಯ ಜತೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಡಿ ಅಂತ ಪಟ್ಟು ಹಿಡಿದಿದ್ದಾರೆ. ಇಲ್ಲ, ಇಲ್ಲ, ಒನ್ ಮ್ಯಾನ್ ಒನ್ ಪೋಸ್ಟ್ ಎಂದರೆ ಮಂತ್ರಿಗಿರಿ ಪಡೆದು ಉಸ್ತುವಾರಿ ಸಚಿವರಾದರೆ ಸಾಕು ಎಂಬ ತೀರ್ಮಾನಕ್ಕೆ ಅವರು ಬರುತ್ತಾರೆ.

ಒಂದು ವೇಳೆ ಅವರು ಮಂತ್ರಿಗಿರಿ ಸಾಕು ಎಂಬ ತೀರ್ಮಾನಕ್ಕೆ ಬಂದರೆ ಹಿಂದುಳಿದ ವರ್ಗಗಳ ನಾಯಕ, ದೇಶದ ಸೆಕ್ಯುಲರಿಸಂ ಬ್ರಾಂಡ್ ಆಗಿ ಬೆಳೆದು ನಿಂತಿರುವ ಬಿ.ಕೆ.ಹರಿಪ್ರಸಾದ್ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನದ ರೇಸಿನಲ್ಲಿ ಮುಂದೆ ಬರುತ್ತಾರೆ. ಮೂಲಗಳ ಪ್ರಕಾರ, ಮಾಜಿ ಸಿಎಂ ಸಿದ್ದರಾಮಯ್ಯ ಅವರು ಕೂಡಾ ಇದನ್ನು ಬಯಸುತ್ತಾರೆ.

ಲಾಸ್ಟ್ ಸಿಪ್

ಅಂದ ಹಾಗೆ ಸಿಎಂ ಹುದ್ದೆಗೆ ರಾಜೀನಾಮೆ ಕೊಟ್ಟ ನಂತರ ಸಿದ್ದರಾಮಯ್ಯ ಅವರು ದಿಲ್ಲಿಗೆ ಹೋದರಲ್ಲ? ಈ ಸಂದರ್ಭದಲ್ಲಿ ಅವರ ಜತೆ ಮಾತನಾಡಿದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಒಂದು ಪ್ರಸ್ತಾಪ ಮುಂದಿಟ್ಟರಂತೆ.

'ಸಿದ್ದರಾಮಯ್ಯಾಜೀ. ನೀವೇನೋ ರಾಜ್ಯಸಭೆಯ ಟಿಕೆಟ್ ಅನ್ನು ನಿರಾಕರಿಸಿದಿರಿ. ಆದರೆ ಅದೇ ಟಿಕೆಟನ್ನು ನಿಮ್ಮ ಶ್ರೀಮತಿಯವರಿಗೆ ಕೊಡಲು ವರಿಷ್ಠರು ಉತ್ಸುಕರಾಗಿದ್ದಾರೆ. ದಯವಿಟ್ಟು ಇದನ್ನು ಒಪ್ಪಿಕೊಳ್ಳಿ' ಎಂದಿದ್ದಾರೆ. ಆದರೆ ರಣದೀಪ್ ಸಿಂಗ್ ಸುರ್ಜೇವಾಲ ಅವರ ಮಾತನ್ನು ಕಡ್ಡಿ ಮುರಿದಂತೆ ತಳ್ಳಿ ಹಾಕಿದ ಸಿದ್ದರಾಮಯ್ಯ ಅವರು: 'ನೋ, ನೋ, ಅದೆಲ್ಲ ಬೇಕಾಗಿಲ್ಲ' ಎಂದರಂತೆ.

ಪ್ರಸ್ತುತ

ಕೆ.ವಿ.ವಾಸು, ಮೈಸೂರು

ಸಂಪುಟ ರಚನೆಯ ಕಸರತ್ತು

ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಜೊತೆಗೆ ಕೆಲವರು ಶಾಸಕರು ಕೂಡ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಗಳಿವೆ. ಯಾವುದೇ ಮುಖ್ಯಮಂತ್ರಿಗೆ ಸಂಪುಟ ರಚನೆ ಹಾಗೂ ಪುನರ್ರಚನೆ ಕಠಿಣವಾದ ಕೆಲಸ ಎನ್ನಬಹುದು. ಡಿ.ದೇವರಾಜ ಅರಸು ಸೇರಿದಂತೆ, ಅಧಿಕಾರದಿಂದ ನಿರ್ಗಮಿಸಿರುವ ಸಿದ್ದರಾಮಯ್ಯ ಒಳಗೊಂಡಂತೆ, ಅನೇಕ ಮುಖ್ಯಮಂತ್ರಿಗಳು ಇದರ ಬಿಸಿಯನ್ನು ಸಾಕಷ್ಟು ಅನುಭವಿಸಿದ್ದಾರೆ. ಸಚಿವ ರಾಗಲು ಜಾತಿವಾರು, ಜಿಲ್ಲಾವಾರು ಪ್ರಾತಿನಿಧ್ಯದ ಜೊತೆಗೆ ಇನ್ನೂ ಹಲವಾರು ಮಾನದಂಡಗಳಿವೆ. ಇಷ್ಟೆಲ್ಲಾ ಇದ್ದರೂ ದೆಹಲಿಯಲ್ಲಿ ಕುಳಿತಿರುವ ವರಿಷ್ಠರ ಕೃಪೆ ಇಲ್ಲದೆ ಹೋದರೆ ಸಚಿವರಾಗುವುದು ಸಾಧ್ಯವಿಲ್ಲ. ಹಣ ಬಲ, ಜಾತಿ ಬಲ, ವರಿಷ್ಠರ ಬೆಂಬಲ, ಇಷ್ಟೆಲ್ಲಾ ಇದ್ದರೂ ಅನೇಕರಿಗೆ ಬೇರೆ ಬೇರೆ ಕಾರಣಗಳಿಂದ ಮಂತ್ರಿಯಾಗುವ ಯೋಗವೇ ಒದಗಿ ಬರುವುದಿಲ್ಲ. ಸಂಪುಟ ವಿಸ್ತರಣೆ ಅಥವಾ ಪುನರ್ರಚನೆ ಮಾಡಿ ದಾಗಲೂ ಭಿನ್ನಮತ ಸ್ಫೋಟಗೊಂಡು, ಮುಖ್ಯ ಮಂತ್ರಿಯ ಬುಡಕ್ಕೆ ಬಂದರೂ ಬರಬಹುದು. ಹೀಗಾಗಿಯೇ ಮುಖ್ಯಮಂತ್ರಿಯಾದವರು, ಒಂದಲ್ಲಾ ಒಂದು ನೆಪ ಒಡ್ಡಿ ಸಂಪುಟ ವಿಸ್ತರಣೆಯನ್ನು ಮುಂದಕ್ಕೆ ಹಾಕುತ್ತಾ ಸಮಯ ತಳ್ಳುತ್ತಿರುತ್ತಾರೆ.

ಆದರೂ ಸಂವಿಧಾನದ ರೀತಿ ನೀತಿಗಳಿಗೆ ಅನುಸಾರವಾಗಿ ಸಚಿವ ಸಂಪುಟ ವಿಸ್ತರಣೆ ಆಗಲೇಬೇಕು. 60ರ ದಶಕದಲ್ಲಿ ಕಾಮರಾಜ್ ಸೂತ್ರ ಜಾರಿಯಲ್ಲಿತ್ತು. ಸರಳತೆಗೆ ಮತ್ತೊಂದು ಹೆಸರಾಗಿದ್ದ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕೆ. ಕಾಮರಾಜ್ ಈ ಸೂತ್ರವನ್ನು ರೂಪಿಸಿ, ಅಂದಿನ ಪ್ರಧಾನಿ ನೆಹರೂ ಅವರಿಗೆ 1963ರಲ್ಲಿ ಸಲ್ಲಿಸಿದ್ದರು. ಈ ಸೂತ್ರವನ್ನು ಅಂಗೀಕರಿಸಿ, 1963ರ ಆಗಸ್ಟ್ ತಿಂಗಳಲ್ಲಿ ಜಾರಿಗೆ ತರಲಾಯಿತು. ಇದರ ಅನ್ವಯ ಲಾಲ್ ಬಹದ್ದೂರ್ ಶಾಸ್ತ್ರಿ ಸೇರಿದಂತೆ ಅಂದಿನ ಕೇಂದ್ರ ಸಚಿವ ಸಂಪುಟದ ಹಲವಾರು ಸದಸ್ಯರು ತಮ್ಮ ಪದವಿಗೆ ರಾಜೀನಾಮೆ ನೀಡಿದ್ದರು. ಸಂಪುಟದ ಪುನರ್ರಚನೆ ಸಂದರ್ಭ ಬಂದಾಗ ಇದನ್ನು ಪ್ರಯೋಗಿಸಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ, ಸಂಪುಟದ ಎಲ್ಲಾ ಸದಸ್ಯರು ಸಾಮೂಹಿಕವಾಗಿ ಪ್ರಧಾನ ಮಂತ್ರಿ (ಕೇಂದ್ರ ಸಂಪುಟ) ಅಥವಾ ಮುಖ್ಯಮಂತ್ರಿ (ರಾಜ್ಯ ಸಚಿವ ಸಂಪುಟ) ಗಳಿಗೆ ರಾಜೀನಾಮೆ ಸಲ್ಲಿಸಬೇಕು. ನಂತರ, ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿ ತಮಗೆ ಬೇಕಾದ ಸಚಿವರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಈ ಕಾಮರಾಜ್ ಯೋಜನೆಯಡಿಯಲ್ಲಿ ಯಾರನ್ನೂ ರಾಜೀನಾಮೆ ನೀಡಿ ಎಂದು ಬಲವಂತವಾಗಿ ಕೇಳಬೇಕಾದ ಅಗತ್ಯವಿರುವುದಿಲ್ಲ. ಇದು ಸ್ವಲ್ಪ ಕಾಲ ಮಾತ್ರ ಜಾರಿಯಲ್ಲಿತ್ತು.

ಎಲ್ಲಾ ಶಾಸಕರು ಮಂತ್ರಿಗಳಾಗಲು ಸಾಧ್ಯವಿಲ್ಲ. ವಿಧಾನ ಸಭೆಯ ಒಟ್ಟು ಶಾಸಕರ ಪೈಕಿ, ಮುಖ್ಯಮಂತ್ರಿ ಸೇರಿದಂತೆ ಶೇಕಡಾ 15ರಷ್ಟು ಮಾತ್ರ ಸಚಿವರಾಗಬಹುದು. ಈ ಕೋಟಾದಲ್ಲೇ ವಿಧಾನ ಪರಿಷತ್ ಸದಸ್ಯರೂ ಬರುತ್ತಾರೆ. ಉಳಿದ ಅರ್ಹ ಶಾಸಕರಿಗೆ ನಿಗಮ, ಮಂಡಳಿ ಮುಂತಾದ ಬಿಳಿ ಆನೆಗಳು ಇದ್ದೇ ಇರುತ್ತದೆ. ಸಂಪುಟ ರಚನೆಯಲ್ಲಿ ಅನೇಕ ವೇಳೆ ಪ್ರಾದೇಶಿಕ ಅಸಮತೋಲನ ಎದ್ದು ಕಾಣುತ್ತದೆ. ಪಕ್ಷಕ್ಕಾಗಿ ಹತ್ತಾರು ವರ್ಷ ದುಡಿದವರನ್ನು ಬಿಟ್ಟು ಪ್ರಥಮ ಬಾರಿಗೆ ಶಾಸಕರಾದವರಿಗೆ ಅಥವಾ ಬಕೆಟ್ ಹಿಡಿಯುವವರಿಗೆ ಮಣೆ ಹಾಕುವ ಸಂಪ್ರದಾಯ ಕೂಡ ಇದೆ. ಆದರೆ, ಸಚಿವ ಸಂಪುಟದಲ್ಲಿ ಸಮತೋಲನ ಇರಬೇಕು. ಸಂಪುಟ ಹೊಸಬರು, ಹಳಬರು, ಹಿರಿಯರು, ಅನುಭವಿಗಳು, ಮಹಿಳೆಯರು ಎಲ್ಲರನ್ನೂ ಒಳಗೊಂಡ ಸಮಗ್ರ ಹಾಗೂ ಸಮತೋಲನದಿಂದ ಕೂಡಿರಬೇಕು. ಆದರೆ, ಪ್ರಸಕ್ತ ಸನ್ನಿವೇಶದಲ್ಲಿ, ಇವೆಲ್ಲವೂ ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ನೂತನ ಸಿಎಂ ಡಿ.ಕೆ.ಶಿವಕುಮಾರ್ ಈ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಸಮರ್ಥ ಸಂಪುಟ ರಚಿಸುತ್ತಾರೆಂದು ಆಶಿಸೋಣ.

ಒಳ್ಳೆಯ ರಾಜಕೀಯಕ್ಕಾಗಿ ಜನರನ್ನು ಕಟ್ಟಲು ಸಾಧ್ಯವಿದೆಯೆ?

ಜನಜಾಗೃತಿ

ಪ್ರೊ. ಆರ್. ಜಿ ಹೆಗಡೆ
vveditoped@gmail.com

ಒಂದು ಮಾತಿದೆ. ಯುದ್ಧಗಳು ಮೊದಲು ಹುಟ್ಟಿಕೊಳ್ಳುವುದು ಮನಸ್ಸಿನಲ್ಲಿ. ಅದು ಸರಿ. ಜತೆಯೇ ಹೇಳಿಕೊಳ್ಳಬೇಕು. ಏನೆಂದರೆ, ಯುದ್ಧ ಅಷ್ಟೇ ಅಲ್ಲ, ಎಲ್ಲ ರಾಜಕೀಯ ವ್ಯವಸ್ಥೆಗಳು, ಸರಕಾರಗಳು ಹುಟ್ಟಿಕೊಳ್ಳುವುದು ಕೂಡ ಮನಸ್ಸಿನೊಳಗಿಂದಲೇ. ಒಳ್ಳೆಯ ಪ್ರಭುತ್ವಗಳು ಬಂದರೆ, ಅದಕ್ಕೆ ಕಾರಣ ರಾಜಕೀಯವಾಗಿ ಪ್ರೌಢ ಜನತೆ (ಅವರ ಮನಸ್ಸು). ಕೆಟ್ಟ ಸರಕಾರಗಳು ಬಂದರೆ ಕಾರಣ ಒಳ್ಳೆಯ ಸರಕಾರಗಳನ್ನು ತಂದುಕೊಳ್ಳಬಲ್ಲ ಪ್ರೌಢಿಮೆ ಜನರಿಗೆ ಬಂದಿಲ್ಲ ಎನ್ನುವುದು.

ಎಲ್ಲದಕ್ಕೂ ಕಾರಣ ಮನಸ್ಸು ಎಂದು ನಾವು ಒಪ್ಪಿಕೊಂಡ ಮೇಲೆ ಕೆಲವು ಪೂರಕ ವಿಷಯಗಳು, ಮಾತುಗಳು, ಪ್ರಶ್ನೆಗಳು ಬಂದು ನಿಲ್ಲುತ್ತವೆ. ಮುಖ್ಯವಾಗಿ ರಾಜಕೀಯಕ್ಕೆ ಸಂಬಂಧಿಸಿದಂತೆ, ಜನರ ಮನಸ್ಸನ್ನು ತಿದ್ದಿ, ತೀಡಿ ಅವರನ್ನು ವಿವೇಕವಂತರಾಗುವಂತೆ ಸಿದ್ಧಪಡಿಸಲು ಸಾಧ್ಯವಿದೆಯೇ? ರಾಜಕೀಯ ವ್ಯವಸ್ಥೆಗಳನ್ನು ಗುಣಾತ್ಮಕವಾಗಿ ಬದಲಾಯಿಸಲು ಸಾಧ್ಯವಿದೆಯೇ? ಮಾಸ್ ಜನತೆಗೆ 'ರಾಜಕೀಯ ಶಿಕ್ಷಣ' ನೀಡಿ ಅವರನ್ನು 'ಉತ್ತಮ'ರನ್ನಾಗಿಸಲು ಸಾಧ್ಯವಿದೆಯೇ? ಇದ್ದರೆ ಅಂತಹ ತಂತ್ರಗಳು, ಸೂತ್ರಗಳು ಯಾವುವು? ಫಾರ್ಮ್ಯುಲಾಗಳನ್ನು ಕಂಡುಕೊಂಡರೆ ಪ್ರಭುತ್ವಗಳ ಸ್ವರೂಪಗಳನ್ನು ನಿಜಕ್ಕೂ ಬದಲಾಯಿಸಬಹುದೇ?

ಐತಿಹಾಸಿಕತೆ ನೋಡಿಕೊಂಡು ಮುಂದೆ ಹೋಗಬೇಕು. ಇಂತಹ ಯೋಚನೆಗಳು ಸಾವಿರಾರು ವರ್ಷಗಳ ಹಿಂದೆಯೇ ಹುಟ್ಟಿಕೊಂಡಿದ್ದವು. ಕ್ರಿಸ್ತಪೂರ್ವದ ವರ್ಷಗಳಲ್ಲಿ ಗ್ರೀಸ್‌ನಲ್ಲಿ ಇದ್ದ ಎರಡು ಮಹಾನ್ ಮೇಧಾವಿ ತತ್ವಜ್ಞಾನಿಗಳು– ಪ್ಲೇಟೋ ಮತ್ತು ಅರಿಸ್ಟಾಟಲ್, ಈ ವಿಷಯದ ಕುರಿತು ಆಳವಾಗಿ ಚಿಂತನ ನಡೆಸಿದ್ದರು. ಆದರ್ಶ ರಿಪಬ್ಲಿಕ್ ಅನ್ನು ಕಟ್ಟಲು, ಮಲಿನ ರಾಜಕೀಯವನ್ನು ಸ್ವಚ್ಛಗೊಳಿಸಲು ಸಾಧ್ಯವಿದೆಯೇ ಎಂಬುದರ ಕುರಿತು ಬಹಳ ತಲೆಕೆಡಿಸಿಕೊಂಡಿದ್ದರು. ಅವರ ವಾದಗಳ ಹಾಗೂ ನಂತರದ ಗಾಂಧಿವಾದದ ಹಿನ್ನೆಲೆ ಇಟ್ಟುಕೊಂಡು ಒಳ್ಳೆಯ ರಾಜಕೀಯಕ್ಕಾಗಿ ಮನಸ್ಸುಗಳನ್ನು ಕಟ್ಟಲು ಸಾಧ್ಯವಿದೆಯೇ ಎಂಬುದನ್ನು ಗಮನಿಸಲು ಈ ಲೇಖನ.

ಪ್ಲೇಟೋ ಮತ್ತು ಅರಿಸ್ಟಾಟಲ್ ಅವರ ವಾದಗಳನ್ನು ಸುತ್ತು ಹಾಕಿ ಬರಬೇಕು. 'ಆದರ್ಶ ರಾಜಕೀಯ ವ್ಯವಸ್ಥೆ'ಯೊಂದನ್ನು ಮೊಟ್ಟಮೊದಲು ಪರಿಕಲ್ಪಿಸಿದವನು ಮತ್ತು ಆ ಕುರಿತಾದ ಚರ್ಚೆಯೊಂದನ್ನು ಹುಟ್ಟುಹಾಕಿದವನು ಪ್ಲೇಟೋ. ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದೆಯೇ ಆತ ಈ ಕುರಿತು ಯೋಚಿಸಿದ. ಚಿಂತನಗಳನ್ನು ತನ್ನ ಪ್ರಸಿದ್ಧ ಪುಸ್ತಕ 'ರಿಪಬ್ಲಿಕ್'ನಲ್ಲಿ ಹಂಚಿಕೊಂಡ. ವಾದದ ಪ್ರಮುಖ ಅಂಶವೆಂದರೆ ಆದರ್ಶ ರಾಜಕೀಯ ವ್ಯವಸ್ಥೆ ಒಂದನ್ನು ಕಟ್ಟಲು ಸಾಧ್ಯವಿದೆ. ಆದರೆ ಅದಕ್ಕೆ ಭ್ರಮೆ ಇಲ್ಲದ, ಪ್ರೌಢವಾಗಿ ಯೋಚಿಸಬಲ್ಲ ಜನತೆ ಬೇಕು. ಭ್ರಮೆಗಳಲ್ಲಿ ತೇಲಿ ಹೋಗಬಲ್ಲ, ಭಾವನಾತ್ಮಕ ಜನರಿಂದ ಆದರ್ಶ ರಾಜಕೀಯ ಕಟ್ಟಲು ಸಾಧ್ಯವಾಗುವುದಿಲ್ಲ. ಹೀಗೆ ಯೋಚಿಸಿದ ಆತ ಜನರನ್ನು ಭ್ರಮೆಗಳಲ್ಲಿ ಮುಳುಗೇಳಿಸಬಲ್ಲ ಸಾಮಾಜಿಕ ಮೂಲಗಳು ಯಾವುವು ಎನ್ನುವುದನ್ನೂ ಹುಡುಕುತ್ತ ಹೋದ.

ಇಲ್ಲಿ ಆತನಿಗೆ ಹೊಳೆದಿದ್ದೆಂದರೆ ಜನರನ್ನು ಅವಾಸ್ತವ ಜಗತ್ತಿನಲ್ಲಿ ಇಳಿಸಿ ಅವರ ಮಾನಸಿಕ ಸಮತೋಲನವನ್ನೇ ಅಲುಗಾಡಿಸುವ, ಕೆಡಿಸುವ ಕೆಲಸದಲ್ಲಿ ತೊಡಗಿದವು (ಸಮಾಜಬಾಹಿರ ಚಟುವಟಿಕೆಗಳ ಜತೆ) ಕಲೆಗಳು ಮತ್ತು ಸಾಹಿತ್ಯ ಪ್ರಕಾರಗಳು. ಎಲ್ಲ ಕಲಾವಿದರು ಮತ್ತು ಸಾಹಿತಿಗಳ ವ್ಯಕ್ತಿತ್ವಗಳಲ್ಲಿನ ಏನೋ ಒಂದು ಸಮಾನ ಮಾನಸಿಕ ಅಂಶವನ್ನು, ಅಂದರೆ ಪ್ರಾಯ್ಡ್ ಹೇಳುವ ರೀತಿಯ 'ಕನಸಿನ ರಾಜ್ಯ'ದಲ್ಲಿ ಅವರು ಇರುವುದನ್ನು ಗಮನಿಸಿದ ಆತ ಸಾಹಿತಿಗಳು, ವರ್ಣಚಿತ್ರಕಾರರು, ಶಿಲ್ಪಿಗಳು ಮತ್ತಿತರ ಕಲಾವಿದರನ್ನು 'ಭ್ರಮಾಧೀನರು' ಎಂದು ಕರೆದ. ಈ ಕುರಿತಾಗಿ ವಿವರಿಸಲು ತನ್ನ 'ಅನುಕರಣಾವಾದ'ವನ್ನೇ (ಮಿಮೆಸಿಸ್) ಆತ ಮಂಡಿಸಿದ.

ಅದರಲ್ಲಿ ಆತ ಹೇಳುತ್ತಾನೆ. ಏನೆಂದರೆ ಕಲಾವಿದ ಜಗತ್ತಿನ ಮೂಲ ವಾಸ್ತವವನ್ನು ಅನಾವರಣಗೊಳಿಸುವುದಿಲ್ಲ. ವಾಸ್ತವವನ್ನು ನೇರವಾಗಿ ಕೃತಿಗಳಲ್ಲಿ ಹಿಡಿದಿಡುವುದಿಲ್ಲ. ಆತ ಮಾಡುವುದೆಂದರೆ ತನ್ನ ಎದುರಿಗೆ ಸಿಕ್ಕ ವಿಷಯಗಳನ್ನು ಅನುಕರಿಸುವುದು. ಉದಾಹರಣೆಗೆ ಪ್ಲೇಟೋ ಹೇಳಿದ. ಏನೆಂದರೆ ಒಂದು ಕುರ್ಚಿಯ ಪೇಂಟಿಂಗ್ ಮಾಡುವ ಕಲಾವಿದ, ಬಡಗಿ ತಯಾರಿಸಿದ ಕುರ್ಚಿಯ ಕಲ್ಪನೆಯನ್ನು ಅನುಕರಿಸುತ್ತಾನೆ. ಕಲಾವಿದ ಸೃಷ್ಟಿಸುವುದು 'ಮೂಲ' ಕಲ್ಪನೆಯನ್ನಲ್ಲ. ಬಡಗಿಯ ಕಲ್ಪನೆಯಲ್ಲಿ ಬಂದುದನ್ನು. ಆತ ಅನುಕರಿಸಿದ್ದನ್ನು ಅನುಕರಿಸುವವನು ಕಲಾವಿದ. ಹೀಗೆ ಪ್ಲೇಟೋ ಹೇಳುವುದೆಂದರೆ ಕಲಾವಿದ ಸೃಷ್ಟಿಸುವ ಜಗತ್ತು ಒರಿಜಿನಲ್ ಆದುದಲ್ಲ. ಅದು ಒಂದು ಭ್ರಮೆ. ಆಕರ್ಷಕವಾದ, ಆದರೆ ಅಪಾಯಕಾರಿಯಾದ ಭ್ರಮೆ. 'ಆಕರ್ಷಕ' ಏಕೆಂದರೆ ಅದಕ್ಕೆ ಕಲಾವಿದ ಬಣ್ಣಗಳನ್ನು ತುಂಬಿರುತ್ತಾನೆ. ಕಲೆ ವಿಷಕನ್ಯೆಯ ಹಾಗೆ. ಜನರ ಮನಸ್ಸನ್ನು ಆಕರ್ಷಿಸಿ ನಾಶಗೊಳಿಸುತ್ತದೆ. ಅವರ ಮಾನಸಿಕ ಸಮತೋಲನದ ಅಂಶವನ್ನು ಒಳಗಿನಿಂದ ತಿಂದುಬಿಡುತ್ತದೆ. ಹಾಗಾಗಿ ಕಲಾವಿದರು ಸಮಾಜಕ್ಕೆ ಅಪಾಯಕಾರಿ.

ಹೀಗೆ ಯೋಚಿಸಿದ ಪ್ಲೇಟೋ ವಾದಿಸುವುದೆಂದರೆ ಸಮಾಜದ ಸ್ವಾಸ್ಥ್ಯಕ್ಕಾಗಿ, ಹಿತಕ್ಕಾಗಿ, ಆದರ್ಶ ಸಮಾಜವನ್ನು ಕಟ್ಟುವ ಸಲುವಾಗಿ ಕಲಾವಿದರು, ಕವಿಗಳು ಇಂತಹ ಭ್ರಮಾಲೋಕದಲ್ಲಿ ತೇಲುತ್ತಿರುವವರನ್ನು ಸಮಾಜದಿಂದ ಹೊರಗಿಡುವುದು ಅನಿವಾರ್ಯ. ಏಕೆಂದರೆ ಅವರು ಮಾಟಗಾರರು. ಅವರಿಗೆ, ಕಲೆಗೆ ಜನ ಮರುಳಾಗುತ್ತಾರೆ. ಇಂತಹ ಬೇರೆಯವರ ಮೇಲೆ ಮಂಕುಬೂದಿ ಎರಚಬಲ್ಲವರು ಆದರ್ಶ ದೇಶವೊಂದಕ್ಕೆ ಅಪಾಯಕಾರಿ. ಈ ಕುರಿತ ಒಂದು ಕಠೋರ ನಿರ್ಧಾರಕ್ಕೆ ಬಂದ ಆತ ಸಾಹಿತಿಗಳನ್ನು, ಕಲಾವಿದರನ್ನು ಆದರ್ಶ ಸಮಾಜದಿಂದ ದೂರವಿಡಬೇಕು ಎಂದು ಹೇಳಿಬಿಟ್ಟ. ಇಲ್ಲವಾದರೆ ಅವರು ಸಮಾಜವನ್ನೇ ಕೆಡಿಸಿಬಿಡುತ್ತಾರೆ ಎಂದು ಹೇಳಿದ.

ಇಂದಿನ ದಿನಗಳಲ್ಲಿ ಆತ ಇದ್ದರೆ ಬಹುಶಃ ಸಿನಿಮಾ ನಟರು, ಕ್ರಿಕೆಟ್ ಆಟಗಾರರು, ಟಿ.ವಿ ಸೀರಿಯಲ್‌ಗಳ ನಟರು ಇಂಥವರ ಕುರಿತೂ ಇದೇ ಮಾತನ್ನೇ ಹೇಳುತ್ತಿದ್ದನೋ ಏನೋ? ರಾಜಕೀಯಕ್ಕೆ ಅವರು ಬರಬಾರದು, ಅವರು ಅಪಾಯಕಾರಿ ಎಂದು ಹೇಳುತ್ತಿದ್ದನೋ ಏನೋ!

ಈ ವಾದದ ವಿರುದ್ಧ ವಾದವನ್ನು ಜಾಣ ವಕೀಲನಂತೆ ಮಂಡಿಸಿದವ ಪ್ಲೇಟೋನ ಶಿಷ್ಯ ಅರಿಸ್ಟಾಟಲ್ (ಅಲೆಕ್ಸಾಂಡರ್‌ನ ಗುರು). ತನ್ನ ಗುರುವಿನ ಮಾತನ್ನು ಆತ ಭಾಗಶಃ ಒಪ್ಪಿದ. ಅಂದರೆ ಆದರ್ಶ ಸಮಾಜ ಒಂದನ್ನು ಕಟ್ಟಬೇಕು ಮತ್ತು ಕಟ್ಟಲು ಸಾಧ್ಯವಿದೆ ಎನ್ನುವ ಮಾತನ್ನು ಆತ ಒಪ್ಪಿದ. ಪ್ಲೇಟೋನ ವಾದವನ್ನೇ ಕೇಂದ್ರದಲ್ಲಿಟ್ಟುಕೊಂಡು ತನ್ನ ಪುಸ್ತಕ 'ಪೋಯೆಟಿಕ್ಸ್' ರಚಿಸಿದ. ಆದರೆ ಕುತೂಹಲವೆಂದರೆ ತನ್ನ ಗುರುವಿಗೆ ತಿರುಮಂತ್ರ ಹಾಕಿದ ಆತ ಪ್ಲೇಟೋನಿಗಿಂತ ವಿರುದ್ಧ ದಿಕ್ಕಿನಲ್ಲಿ ತನ್ನ ವಾದಸರಣಿಯನ್ನು ಕೊಂಡೊಯ್ದ. ಆತ ಹೇಳುತ್ತಾನೆ. ಪ್ಲೇಟೋನ 'ಅನುಕರಣಾ ವಾದ' ಕಲಾವಿದರ ಮನಸ್ಸಿನ ಕುರಿತಾದ ತಪ್ಪುಗ್ರಹಿಕೆಯಿಂದ ಕೂಡಿದೆ. ಸಾಹಿತಿಗಳು ಕಲಾವಿದರು 'ವಾಸ್ತವ'ದ ಅನುಕರಣೆಯಲ್ಲಿ ತೊಡಗುವುದೇನೂ ಇಲ್ಲ. ಅವರ ಕೆಲಸ ಜೀವನವನ್ನು ಪ್ರತಿನಿಧಿಸುವುದು.(representation). ಅಂದರೆ ಜೀವನವನ್ನು ಅದು ಇರುವುದಕ್ಕಿಂತ ಸುಂದರವಾಗಿ ಪ್ರತಿನಿಧಿಸುವುದು. ಅದರಲ್ಲಿ ತಪ್ಪೇನಿಲ್ಲ. ಅಲ್ಲದೆ ಆತ ಇನ್ನೊಂದು ಮಾತು ಹೇಳಿದ. ಏನೆಂದರೆ ಶ್ರೇಷ್ಠ ಕಲಾಕೃತಿಗಳು ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ ಬೀರುತ್ತವೆ ಮತ್ತು ಮನಸ್ಸಿನೊಳಗಿನ ಕೊಳೆಯನ್ನು ತೊಳೆಯುತ್ತವೆ (catharsis).



ಹೇಗೆಂದರೆ, ಜನರು(ವಿಶೇಷವಾಗಿ) ಶ್ರೇಷ್ಠ ದುರಂತ ನಾಟಕಗಳನ್ನು ನೋಡಿದಾಗ ಅವರ ಮನಸ್ಸಿನೊಳಗಿನ ಭಾವನೆಗಳು ಉಮ್ಮಳಿಸಿ ಬರುತ್ತವೆ. ಭಾವನಾ ಪರವಶರಾಗುವ ಅವರು ನಗುತ್ತಾರೆ. ಅಳುತ್ತಾರೆ. ಚೀರಾಡುತ್ತಾರೆ. ಕೇಕೆ ಹಾಕುತ್ತಾರೆ. ಹೀಗೆ ಮಾಡಿದಾಗ ಅವರ ಮನಸ್ಸಿನೊಳಗಿನ 'ಕೀಳು ಭಾವನೆಗಳು', ಮುಖ್ಯವಾಗಿ 'ಭಯ' ನಾಶವಾಗುತ್ತದೆ. ಹೀಗೆ ಸಾಹಿತ್ಯ, ಕಲೆಗಳಿಗೆ ಭಯರಹಿತರಾದ ಜನರನ್ನು ಸೃಷ್ಟಿಸುವ, ತನ್ಮೂಲಕ ಒಂದು ಆದರ್ಶ ರಿಪಬ್ಲಿಕ್ ಅನ್ನು ಕಟ್ಟುವ ಸಾಮರ್ಥ್ಯವಿದೆ ಎಂದು ಅರಿಸ್ಟಾಟಲ್ ವಾದಿಸಿದ. ಆತನ ಅಭಿಪ್ರಾಯದಲ್ಲಿ ಪರಿಪೂರ್ಣವಾದ ಸಾಹಿತ್ಯ, ಪಾತ್ರಗಳು, ಚೌಕಟ್ಟು, ಸಂಗೀತ ಇತ್ಯಾದಿಗಳನ್ನು ಹೊಂದಿದ, ದುರಂತ ನಾಟಕಗಳಿಗೆ ಇಂತಹ ಶಕ್ತಿ ಇರುತ್ತದೆ. ಪಕ್ವವಾದ ಇಂತಹ ಕಲೆ ಜನರ ಮನಸ್ಸಿನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ಹಾಗಾಗಿ ಕಲಾಪ್ರಕಾರಗಳಿಗೆ ಮನುಷ್ಯನನ್ನು ಧೀಮಂತ, ಘನತೆವಂತ ವ್ಯಕ್ತಿಯನ್ನಾಗಿಸುವ ಮನಶ್ಯಾಸ್ತ್ರೀಯ ಶಕ್ತಿ ಇದೆ.

ಈ ಕುರಿತಾದಂತೆ ಇರುವ ಇನ್ನೊಂದು ವಾದ ಗಾಂಧಿವಾದ. ಗಮನಿಸಬೇಕು. ಪ್ಲೇಟೋ ಮತ್ತು ಅರಿಸ್ಟಾಟಲ್‌ನಂತೆ ಈ ಕುರಿತಾಗಿ ಒಂದು ವಾದವನ್ನೇ ಮಂಡಿಸದಿದ್ದರೂ ಗಾಂಧೀಜಿ ಕೂಡ ಆದರ್ಶ ಸಾಮ್ರಾಜ್ಯ ಕಟ್ಟುವ ಭಾಗವಾಗಿ ಜನರ ಮನಸ್ಸನ್ನು ಕಟ್ಟುವುದು ಹೇಗೆ ಎಂಬ ಕುರಿತು ಯೋಚಿಸಿದ್ದರು. ಘನತೆವಂತ ಜನತೆ ನೈತಿಕವಾದ ರಾಜಕೀಯವನ್ನು ಕಟ್ಟಬಲ್ಲರು ಎಂದು ಗಾಂಧಿ ಭಾವಿಸಿದ್ದರು. ಈ ಕುರಿತು ಬಹಳ ಯೋಚಿಸಿದ್ದ ಗಾಂಧಿಗೆ ಜನರ ಮನಸ್ಸಿನಲ್ಲಿ ಆತ್ಮ ಗೌರವ ಮತ್ತು ಆತ್ಮ ಘನತೆಯಂತಹ ಭಾವನೆಗಳನ್ನು ಸೃಷ್ಟಿಸಬಲ್ಲ ದಾರಿಗಳು ಹೊಳೆದಿದ್ದವು. ಅವೇಂದರೆ ಸಂಸ್ಕೃತಿ ಮತ್ತು ಧರ್ಮ. ತನ್ನ ಸಂಸ್ಕೃತಿಯನ್ನು ಉಸಿರಾಡಿಸುವ ಮತ್ತು ಅದರಲ್ಲಿ ಮಿಂದೆದ್ದ ವ್ಯಕ್ತಿಗಳು ಮಾನಸಿಕವಾಗಿ ಭ್ರಷ್ಟರಾಗುವುದಿಲ್ಲ. ಏಕೆಂದರೆ ಅಂತಹ ವ್ಯಕ್ತಿಗಳೊಳಗೆ ಇಡೀ ಸಂಸ್ಕೃತಿಯೊಂದರ ಶಕ್ತಿ ತುಂಬಿರುತ್ತದೆ ಎಂದು ಗಾಂಧಿ (ಸರಿಯಾಗಿಯೇ) ಭಾವಿಸಿದ್ದರು. ಹಾಗಾಗಿಯೇ ಗಾಂಧಿ ರಾಜಕೀಯವನ್ನು ತನ್ನ 'ನೈತಿಕ ಜೀವನ'ದ ಒಂದು ಆಯಾಮ ಮಾತ್ರ ಎಂದು ಭಾವಿಸಿದ್ದರು. ಈ ಹಿನ್ನೆಲೆಯಲ್ಲಿಯೇ ಗಾಂಧಿ ರಾಜಕೀಯದಲ್ಲಿ ಧರ್ಮವನ್ನು ಬಳಸಿದ್ದು ಅಥವಾ ರಾಜಕೀಯವನ್ನು ಧಾರ್ಮಿಕತೆಯ ಭಾಗವೆಂದೇ ಪರಿಗಣಿಸಿದ್ದು. ಆಳವಾಗಿ ಧಾರ್ಮಿಕನಾಗಿರುವ ವ್ಯಕ್ತಿ ಘನತೆವಂತನಾಗಿರುತ್ತಾನೆ ಎಂದು ಗಾಂಧಿ ಭಾವಿಸಿದ್ದರು. ಹೀಗಾಗಿ ಧರ್ಮವನ್ನು ನಾವು ನಾಶಗೊಳಿಸಕೂಡದು. ಅದನ್ನು ಸರಳೀಕರಿಸಿ, ಆದರ್ಶ ರಾಜಕೀಯಕ್ಕೆ ಜನರನ್ನು ಸಿದ್ಧಗೊಳಿಸಲು ಬಳಸಿಕೊಳ್ಳಬೇಕು ಎಂದು ಅವರು ನಂಬಿದ್ದರು.

ಒಳ್ಳೆಯ ರಾಜಕೀಯಕ್ಕಾಗಿ ಜನರನ್ನು ಕಟ್ಟಬೇಕಿರುವುದು ಇಂದಿನ ತುರ್ತು ಎಂದೇ ಅನಿಸುತ್ತದೆ. ಈ ಕುರಿತ ದಾರಿಗಳನ್ನು ಹುಡುಕಬೇಕಿದೆ. ಮೊನ್ನೆ ಮೊನ್ನೆ ನಡೆದ ಬಂಗಾಲದ ಚುನಾವಣೆಯನ್ನು ಗಮನಿಸಿದರೆ ಮಾತಿನ ಜರೂರು ಅರ್ಥವಾಗುತ್ತದೆ. ಪಾರಾ ಮಿಲಿಟರಿ ಪಡೆಗಳ ಕಣ್ಗಾವಲಿನಲ್ಲಿ, ಬಂದೋಬಸ್ತಿನಲ್ಲಿ ಚುನಾವಣೆ ನಡೆಸಬೇಕಾಯಿತು. ಎನ್‌ಕೌಂಟರ್ ತಜ್ಞರು ಬರಬೇಕಾಯಿತು. ಹೆಚ್ಚು ಕಡಿಮೆ ಯುದ್ಧದ ಪರಿಸ್ಥಿತಿಯೇ ಅಲ್ಲಿ ಇತ್ತು. ಇಂತಹ ವಿಪರೀತಗಳು ಇಂದು ಹುಟ್ಟಿಕೊಂಡಿವೆ. ಅಲ್ಲದೆ ಅಪಾಯಕಾರಿ ಕ್ರಿಮಿನಲ್ ವಾತಾವರಣ ರಾಜಕೀಯವನ್ನು ತುಂಬಿಕೊಂಡಂತಿದೆ. ಗೂಂಡಾಗಳು ರಾಜಕೀಯವನ್ನು ನಿರ್ದೇಶಿಸುತ್ತಿರುವಂತಿದೆ. ದಿನ ಹೋದಂತೆ 'ರಾಜಕೀಯವಾಗಿ' ಜನ ಕೆಟ್ಟವರಾಗುತ್ತ ಹೋಗುತ್ತಿದ್ದಾರೆಯೇ ಎನ್ನುವ ಗಂಭೀರ ಪ್ರಶ್ನೆ ನಮ್ಮ ಮುಂದೆ ಇದೆ. ಗಮನಿಸಿ. ಮೂವತ್ತು, ನಲವತ್ತು ವರ್ಷಗಳ ಹಿಂದೆ ಓಟಿಗೆ ದುಡ್ಡು ಕೊಡುವ ಧೈರ್ಯ ಯಾವ ರಾಜಕಾರಣಿಗೂ ಇರಲಿಲ್ಲ. ಜನ ಅದನ್ನು ಮುಟ್ಟುತ್ತಲೂ ಇರಲಿಲ್ಲ. ಈಗ ದುಡ್ಡಿಲ್ಲದೆ ಮಾತೇ ಇಲ್ಲ. ಅದಷ್ಟೇ ಅಲ್ಲ 'ಒಳ್ಳೆಯ ಸರಕಾರಗಳು' ಇತ್ತೀಚೆಗೆ ಅಲ್ಲಲ್ಲಿ ಒಂದೊಂದನ್ನು ಬಿಟ್ಟಂತೆ ಮರೀಚಿಕೆಗಳಾಗಿ ಹೋಗಿವೆ.

ಬಹುಶಃ ಈ ಹಿನ್ನೆಲೆಯಲ್ಲಿ ನಾವು ಬರೇ ರಾಜಕಾರಣಿಗಳನ್ನು ದೂಷಿಸಿದರೆ ಕೆಲಸವಾಗುವುದಿಲ್ಲ. ಒಳ್ಳೆಯ ರಾಜಕೀಯಕ್ಕಾಗಿ ಜನರನ್ನು ಕಟ್ಟಬೇಕು. ರಾಜಕೀಯವಾಗಿ ಪ್ರೌಢರಾದ ಜನತೆಯನ್ನು ಸೃಷ್ಟಿಸಬೇಕು. ಆ ಕುರಿತು ಯೋಚಿಸಿ ಕಾರ್ಯಾಚರಣೆಗೆ ತರಬೇಕು.

ಭಟ್ಟರ್ ಸ್ಕಾಚ್

- **ವೀರೇಂದ್ರ ಸಜ್ಜನ, ಹಾವೇರಿ**
ಭಟ್ರೇ, ಬೆಲೆ ಏರಿಕೆ ಬಿಸಿ ನಿಮಗೆ ತಟ್ಟಿಲ್ಲವಾ?
– **ಸ್ವಾಮಿ, ಸುಡ್ತಾ ಇದೆ ಅಂತ ಬೊಬ್ಬೆ ಹೊಡೀತಾ ಇದ್ದೇನೆ, ಕೇಳಿಸ್ತಾ ಇಲ್ಲವಾ?**

- **ರಾಘವೇಂದ್ರ ಶೇಟ್, ಹೊನ್ನಾವರ**
ಭಟ್ರೇ, ಅಯ್ಯಂಗಾರರು ಕೇವಲ ಎಂಟು ನೂರು ಮಂದಿ ಇದ್ದಾರಂತೆ?
– **ಅಯ್ಯಂಗಾರ್ ಬೇಕರಿಯೇ ಹೆಚ್ಚು ಇದೆ ಅಂತಾಯ್ತು!**

- **ಶ್ರೀಲತಾ ಎಂ.ಹಾದಿಮನಿ, ಕಡೂರು**
ಭಟ್ರೇ, ಈಗಿನ ಕಾಲದ ಹುಡುಗರನ್ನು ಅರ್ಥ ಮಾಡಿಕೊಳ್ಳೋದೇ ಕಷ್ಟ ಅಂತಾರಲ್ಲ?
– **ಹೂಂ... ದಡ್ಡರನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯ ಹಿಡಿಯುತ್ತಮ್ಮ!**

- **ರಾಜು, (ಇಮೇಲ್ ಮೂಲಕ)**
ಭಟ್ರೇ, ಪತ್ನಿ ತವರಿಗೆ ಹೋಗಿ ಒಂದು ತಿಂಗಳು ಆಯ್ತು, ಇನ್ನೂ ಬಂದಿಲ್ಲವಲ್ಲ?
– **ಪುಣ್ಯಾತಗಿತ್ತಿ, ಅಲ್ಲಿ ತಂಪಾಗಿರಲಿ ಅಂತ ಬೇಡಿಕೊಳ್ಳಬಾರದೇ?**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ, ಹೇಗೆ?
– **ಮದುವೆಯಾಗಿದ್ದರೂ ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ ಹೇಗೆ ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!**

- **ಗುರುನಾರಾಯಣ ಪಟಪಲ್ಲಿ,(ಇಮೇಲ್ ಮೂಲಕ)**
ಭಟ್ರೇ, ನಮ್ಮದು ಡಬಲ್ ಸ್ಟ್ಯಾಂಡರ್ಡ್, ಏನಂತೀರಿ?
– **ಹೂಂ.. ನಮಗೆ ಆಂಗ್ಲರ ಹೆಸರು ಬೇಡ, ಆದರೆ ಅವರ ಭಾಷೆ ಬೇಕು!**

- **ರಾಮಚಂದ್ರ ಗಾಣಿಗ, (ಇಮೇಲ್ ಮೂಲಕ)**
ಭಟ್ರೇ, ಒಳ್ಳೆಯ ಮನುಷ್ಯನಾಗು ಅಂತ ಉಪದೇಶ ಕೊಡ್ತಾರಲ್ಲ?
– **ಹೂಂ.. ಆದರೆ ನಾನೇ ಒಳ್ಳೆಯವನು ಎಂದು ಸಾಬೀತುಮಾಡಲು ಹೋಗಬಾರದು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹೆಣ್ಣನ್ನು ಚಂದ್ರನಿಗೆ ಹೋಲಿಸುವುದು ಸರಿಯಾ?
– **ಅಲ್ಲಿನ ಕಲೆ, ಗುಳಿಗಳನ್ನು ನೋಡಿ ಹೋಲಿಕೆ ಸರಿಯಾಗಿದೆ ಎನಿಸುತ್ತದೆ!**

- **ಸುಬ್ಬಣ್ಣ, ಕೆಂಗೇರಿ**
ಭಟ್ರೇ, ವಾಕಿಂಗ್ ಮಾಡೋದ್ರಿಂದ ಆಯಸ್ಸು ಹೆಚ್ಚುತ್ತೆ ಅನ್ನೋದು ನಿಜವೇ?
– **ಹಾಗಿದ್ರೆ, ದಿನವಿಡೀ ಅಲೆಯುವ ಪೋಸ್ಟ್‌ಮ್ಯಾನ್ ಅಮರನಾಗಬೇಕಿತ್ತಲ್ಲವೇ?**

- **ಸಿ.ಡಿ.ಪಾಟೀಲ, ಬೆಳಗಾವಿ**
ಭಟ್ರೇ, ಪ್ರಪಂಚದ ಎಂಟನೇ ಅದ್ಭುತ ಯಾವುದು?
– **ಪೆನ್ನಿಗಾಗಿ ಇಡೀ ಮನೆ ಹುಡುಕಿದರೂ ಸಿಗದೇ, ನಂತರ ಅದು ಕಿವಿಯ ಮೇಲೆಯೇ ಇರುವುದು!**

ಪಿಚ್ ಮೇಲೆ ಮಲಗುತ್ತಿದ್ದ ಐಪಿಎಲ್ ಸ್ಟಾರ್

ವಿದೇಶವಾಸಿ
ಕಿರಣ್ ಉಪಾಧ್ಯಾಯ
vveditoped@gmail.com

ಈ ಬಾರಿಯ ಐಪಿಎಲ್ ಪಂದ್ಯಾಟಗಳು ಉಳಿದ ಎಲ್ಲಾ ಸರಣಿಗಳಿಗಿಂತ ಹೆಚ್ಚು ಮನರಂಜನೆ ನೀಡಿವೆ. ಬಹುತೇಕ ಪಂದ್ಯಗಳಲ್ಲಿ ತಂಡಗಳು ಇನ್ನೂರಕ್ಕೂ ಹೆಚ್ಚು ರನ್ ಗಳಿಸಿ ಸವಾಲು ಒಡ್ಡಿದರೆ, ಅದನ್ನೂ ಬೆನ್ನಟ್ಟಿ ಪಂದ್ಯವನ್ನು ಗೆದ್ದ ದಾಖಲೆಗಳೂ ಸಾಕಷ್ಟಿವೆ. ಒಟ್ಟೂ ಎಪ್ಪತ್ತನಾಲ್ಕು ಪಂದ್ಯಗಳಲ್ಲಿ ಸಾವಿರದ ನಾಲ್ಕು ನೂರಕ್ಕೂ ಹೆಚ್ಚು ಸಿಕ್ಸರ್, ಎರಡು ಸಾವಿರದ ಮುನ್ನೂರಕ್ಕೂ ಹೆಚ್ಚು ಫೋರ್, ಸುಮಾರು ನಾಲ್ಕು ಸಾವಿರ ಬೌಂಡರಿ ರನ್‌ಗಳು ಈ ಒಂದು ಸರಣಿಯಲ್ಲಿ ಕಾಣಸಿಕ್ಕಿವೆ. ಹಾಗೆಯೇ ಹಲವಾರು ಪ್ರತಿಭೆಗಳು ಕೂಡ ತಮ್ಮ ಆಕರ್ಷಕ ಆಟದಿಂದ ಕ್ರಿಕೆಟ್ ಪ್ರೇಮಿಗಳ ಮನ ತಣಿಸಿದ್ದಾರೆ, ಪಂದ್ಯ ನೋಡುವಾಗ ಕುರ್ಚಿಯ ತುದಿಗೆ ಬಂದು ಕುಳಿತುಕೊಳ್ಳುವಂತೆ ಮಾಡಿದ್ದಾರೆ.

ಒಂದು ಕಾಲವಿತ್ತು, ಭಾರತದ ಕ್ರಿಕೆಟ್ ತಂಡ ಎಂದರೆ, ದೆಹಲಿ ಮತ್ತು ಮುಂಬೈನವರೇ ಹೆಚ್ಚು ತುಂಬಿಕೊಂಡಿರುತ್ತಿದ್ದರು. ನಾಲ್ಕರಿಂದ ಐದು ಆಟಗಾರರು ದೆಹಲಿಯವರಾದರೆ, ನಾಲ್ಕರಿಂದ ಐದು ಆಟಗಾರರು ಮುಂಬೈನವರು. ಉಳಿದ ಒಂದೆರಡು ಆಟಗಾರರು ಕರ್ನಾಟಕ, ತಮಿಳುನಾಡು, ಪಂಜಾಬ್, ಪಶ್ಚಿಮ ಬಂಗಾಳ ಹೀಗೆ ಉಳಿದ ರಾಜ್ಯಗಳಿಂದ ಇರುತ್ತಿದ್ದರು. ಬಿಹಾರ, ಒರಿಸ್ಸಾ, ಕೇರಳ, ರಾಜಸ್ಥಾನ, ಹರಿಯಾಣ, ಪೂರ್ವದ ಸಣ್ಣ ಪುಟ್ಟ ರಾಜ್ಯಗಳ ಆಟಗಾರರು ಔಷಧಕ್ಕೆ ಬೇಕೆಂದರೂ ಸಿಗುತ್ತಿರಲಿಲ್ಲ. ಎಲ್ಲೋ ದೃಷ್ಟಿಬೊಟ್ಟಿನಂತೆ ದಲ್ಲೊಂದು, ಇಲ್ಲೊಂದು ಆಟಗಾರರು, ಅದೂ ಮುಂಬೈ, ದೆಹಲಿಯಂಥ ಮಹಾನಗರದಲ್ಲಿ ಬಂದು ನೆಲೆಸಿದವರು ಕಾಣಸಿಗುತ್ತಿದ್ದರು. ಐದು ಆರು ದಶಕಗಳ ಹಿಂದೆ ಪ್ರತಿಷ್ಠಿತ ಕ್ಲಬ್‌ಗಳಿಗೆ, ಜಿಮ್ಖಾನಾಗಳಿಗೆ ಹೋಗಿ ಆಟವಾಡುತ್ತಿದ್ದ ಅಥವಾ ಅಲ್ಲಿ ತರಬೇತಿ ಪಡೆಯುತ್ತಿದ್ದ, ಅವರಿಂದಲೇ ಶಿಫಾರಸು ಪಡೆಯುತ್ತಿದ್ದ ಆಟಗಾರರು ರಾಷ್ಟ್ರೀಯ ತಂಡದಲ್ಲಿರುತ್ತಿದ್ದರು. ಹಾಗಂತ ಅವರೆಲ್ಲ ಕೆಟ್ಟ ಆಟಗಾರರಾಗಿರುತ್ತಿದ್ದರು ಎಂದಲ್ಲ. ಆದರೆ ಇಂದಿನ ಭಾರತ ತಂಡದಲ್ಲಿ ಇರುವಷ್ಟು ಪ್ರತಿಭಾವಂತರು ಆ ಕಾಲದಲ್ಲಿ ಇರುತ್ತಿರಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳು ಇದ್ದಿರಬಹುದಾದರೂ ಅದು ವಾಸ್ತವ.

ಎಂಬತ್ತು–ತೊಂಭತ್ತರ ದಶಕದಲ್ಲಿ, ಮಹಾನಗರಗಳ ಜತೆಗೆ ಉಳಿದ ನಗರಗಳಲ್ಲಿರುವ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಆರಂಭವಾಯಿತು. ಕೆಲವು ವರ್ಷಗಳ ನಂತರ ಈ ಕಾರ್ಯ ಇನ್ನಷ್ಟು ಚುರುಕುಗೊಂಡು, ಗ್ರಾಮೀಣ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವ ಹಂತ ತಲುಪಿತು. ಮಹಾನಗರಗಳ ಪದ್ಧತಿಯೇ ಇದ್ದಿದ್ದರೆ ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರ್ ಕೆಲಸ ಮಾಡುತ್ತಿದ್ದ ಮಹೇಂದ್ರ ಸಿಂಗ್ ಧೋನಿ, ಗುಜರಾತಿನ ಹಳ್ಳಿಯ ಮೂಲೆಯಲ್ಲಿದ್ದ ರೈತರ ಮಗ, ಸ್ವತಃ ಕಲ್ಲು ಕೆಲಸ ಮಾಡಿಕೊಂಡಿದ್ದ ಮುನಾಫ್ ಪಟೇಲ್, ವಾಚ್ಮನ್ ಕೆಲಸ ಮಾಡುತ್ತಿದ್ದವರ ಮಗ ರವೀಂದ್ರ ಜಡೇಜಾ, ಕಲ್ಲಿದ್ದಲಿನ ಗಣಿಯಲ್ಲಿ ಕೆಲಸ ಮಾಡುತ್ತಿದ್ದವರ ಮಗ ಉಮೇಶ ಯಾದವ್, ಗ್ಯಾಸ್ ಸಿಲಿಂಡರ್ ವಿತರಣೆ ಮಾಡುತ್ತಿದ್ದವರ ಮಗ ರಿಂಕು ಸಿಂಗ್, ಮಸೀದಿಯಲ್ಲಿ ಪ್ರಾರ್ಥನೆಗೆ ಅಜಾನ್ ಕೊಡುವ ಮೌಲ್ವಿಯ ಮಕ್ಕಳಾದ ಯೂಸುಫ್ ಮತ್ತು ಇರ್ಫಾನ್ ಪಠಾಣ್, ದಾವಣಗೆರೆಯಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದವರ ಮಗ ವಿನಯ್ ಕುಮಾರ್, ಹೈದರಾಬಾದ್‌ನಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದವರ ಮಗ ಮಹಮ್ಮದ್ ಸಿರಾಜ್, ಬೀದಿ ಬದಿಯಲ್ಲಿ ಪಾನಿಪುರಿ ಮಾರುತ್ತಿದ್ದ ಯಶಸ್ವಿ ಜೈಸ್ವಾಲ್ ಮೊದಲಾದವರು ಭಾರತದ ತಂಡ ತಲುಪುವುದಿರಲಿ, ರಾಜ್ಯಮಟ್ಟದ ರಣಜಿ ಪಂದ್ಯ ಆಡುವುದಾಗಲಿ, ಕೊನೆ ಪಕ್ಷ ಐಪಿಎಲ್ ಮುಖಾಂತರ ಕ್ರಿಕೆಟ್ ಪ್ರೇಮಿಗಳನ್ನು ರಂಜಿಸುವುದಾಗಲಿ ಸಾಧ್ಯವಾಗುತ್ತಿರಲಿಲ್ಲ. ಐಪಿಎಲ್‌ನಲ್ಲಿ ಕೆಲವು ಹೊಸ ಪ್ರತಿಭೆಗಳು ಬಂದು ತಮ್ಮನ್ನು ಸ್ಥಾಪಿಸಿಕೊಂಡದ್ದು ಹೌದಾದರೂ, ಅವರ ಯಶಸ್ಸಿನ ಕಥೆ ನಮ್ಮ ಕಣ್ಣು–ಕಿವಿಗಳಿಗೆ ಖುಷಿ ಕೊಡುವುದು ಹೌದಾದರೂ, ಅವರ ಸಾಧನೆ, ಪಟ್ಟ ಶ್ರಮ, ಅವರ ಬದ್ಧತೆ, ಇತ್ಯಾದಿಗಳು ಸ್ಫೂರ್ತಿದಾಯಕವೂ, ಯುವ ಪೀಳಿಗೆಗೆ ಪ್ರೇರಣಾದಾಯಕವೂ ಆಗಿವೆ. ಈ ನಿಟ್ಟಿನಲ್ಲಿ ಐಪಿಎಲ್ ಒಳ್ಳೆಯ ಪ್ರತಿಭೆಗಳನ್ನು ಆರಿಸುವುದಕ್ಕೆ ಒಂದು ಉತ್ತಮ ಮಾಧ್ಯಮವಾಯಿತು ಎಂದರೆ ಅತಿಶಯೋಕ್ತಿಯಲ್ಲ.

ಐಪಿಎಲ್ ಆರಂಭವಾದ ದಿನಗಳಲ್ಲಿ ನಾನು ಇಷ್ಟಪಡುತ್ತಿದ್ದ ಆಟಗಾರರಲ್ಲಿ ಒಬ್ಬರಾಗಿದ್ದವರು ಸುರೇಶ್ ರೈನಾ. ರೈನಾ ತಮ್ಮ ಆಟದ ಜತೆಗೆ ಸ್ಟೈಲ್ ನಿಂದಲೂ ಇಷ್ಟವಾಗುತ್ತಿದ್ದರು. ಒಮ್ಮೆ ಅವರ ಪೂರ್ವಾಪರ, ಬಾಲ್ಯದಲ್ಲಿ ಅವರು ಪಟ್ಟ ಪಾಡು, ಇವನ್ನೆಲ್ಲ ತಿಳಿದ ನಂತರವಂತೂ ನಾನು ಅವರ ಪಕ್ಕಾ ಅಭಿಮಾನಿಯಾದೆ. ರೈನಾ ಕುರಿತು ಎಲ್ಲಿಯೇ, ಏನೇ ಕಂಡರೂ ಒಂದು ಘಳಿಗೆ ನಿಂತು ಅದನ್ನು ನೋಡಿಯೇ ಮುಂದೆ ಹೋಗುತ್ತೇನೆ. ರೈನಾ ನನ್ನ ಮೇಲೆ ಅಷ್ಟು ಪ್ರಭಾವವನ್ನಂತೂ ಬೀರಿದ್ದಾರೆ. ಅವರು ಟೆಸ್ಟ್, ಏಕದಿನ, ಟಿ–ಟ್ವೆಂಟಿ, ಐಪಿಎಲ್ ಪಂದ್ಯಗಳಲ್ಲಿ ಗಳಿಸಿದ ರನ್, ಪಡೆದ ವಿಕೆಟ್, ಇತ್ಯಾದಿಗಳ ಕುರಿತು ಇಲ್ಲಿ ಹೇಳುವುದಿಲ್ಲ. ಭಾರತ ತಂಡಕ್ಕೆ ರೈನಾ ನೀಡಿದ ಕೊಡುಗೆಯನ್ನಾಗಲಿ, ಅವರ ದಾಖಲೆಗಳನ್ನಾಗಲಿ ನೆನಪಿಸುವುದಿಲ್ಲ. ಅದೆಲ್ಲ ಎಲ್ಲರಿಗೂ ತಿಳಿದಿರುವಂಥದ್ದೇ. ಅವರು ಈ ಹಂತ ತಲುಪಲು ಸವೆಸಿದ ದಾರಿಯನ್ನು ಮಾತ್ರ ಆಗಾಗ ನೆನಪಿಸಿಕೊಳ್ಳುತ್ತಿರಬೇಕು.

ಸುರೇಶ್ ರೈನಾ ಎಂದಾಕ್ಷಣ ಅವರ ಬ್ಯಾಟಿಂಗ್ ಜತೆಜತೆಗೇ ನೆನಪಾಗುವುದು ಅವರ ಫೀಲ್ಡಿಂಗ್. ಒಂದು ಕಾಲದಲ್ಲಿ ಭಾರತದ ಕ್ರಿಕೆಟ್ ಆಟಗಾರರು ಟೆಸ್ಟ್ ಪಂದ್ಯದ ಮೊದಲ ದಿನ ತೊಟ್ಟ ಬಿಳಿ ಬಣ್ಣದ ಒಂದೇ ಸಮವಸ್ತ್ರವನ್ನು ಕೊನೆಯ ದಿನದವರೆಗೂ ತೊಡುತ್ತಿದ್ದರು. ಬೀಳುವುದಿಲ್ಲ, ಜಾರುವುದಿಲ್ಲ, ಚೆಂಡನ್ನು ಹಿಡಿಯಲು ಓಡುವುದೂ ಇಲ್ಲ. ಹಾಗಿರುವಾಗ ಸಮವಸ್ತ್ರವಾದರೂ ಹೇಗೆ ಮಣ್ಣಾದೀತು? ಕ್ರಮೇಣ ಕ್ಷೇತ್ರರಕ್ಷಣೆಯೂ ಆಟದ ಪ್ರಮುಖ ಭಾಗವಾಯಿತು. A rupee saved is a rupee gained ಅನ್ನುತ್ತಾರಲ್ಲ, ಹಾಗೆಯೇ A run saved is a run gained ಎನ್ನುವಂತಾಯಿತು. ಯುವರಾಜ್ ಸಿಂಗ್, ಮೊಹಮ್ಮದ್ ಕೈಫ್, ಸುರೇಶ್ ರೈನಾ ತಂಡದಲ್ಲಿರುವಾಗ (ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾರನ್ನೂ ಪಟ್ಟಿಗೆ ಸೇರಿಸಿಕೊಳ್ಳಬಹುದು) ಭಾರತದ ಕ್ಷೇತ್ರರಕ್ಷಣೆ ಉತ್ತುಂಗದಲ್ಲಿತ್ತು ಎಂದರೆ ಸುಳ್ಳಲ್ಲ. ಒಂದು ಸಮಯ ಹೇಗಿತ್ತು ಎಂದರೆ ಯುವರಾಜ್, ರೈನಾ, ಕೈಫ್ ಮೂವರೂ ಆಫ್ ಸೈಡ್‌ನಲ್ಲಿ ಗೋಡೆಯಂತೆ ನಿಂತಿರುತ್ತಿದ್ದರು. ಅವರ ಬಳಿ ಚೆಂಡು ಹೋದರೆ ಬ್ಯಾಟ್ಸ್‌ಮನ್ ಒಂದು ರನ್ ತೆಗೆದುಕೊಳ್ಳಲು ನಾಲ್ಕು ಬಾರಿ ವಿಚಾರ ಮಾಡಬೇಕಿತ್ತು. ರೈನಾ ಕಥೆ ಕೇಳಿದಾಗ, ಅವರು ಬಾಲ್ಯದಲ್ಲಿ ಪಟ್ಟ ಕಷ್ಟವೇ ಅವರ ಕ್ಷೇತ್ರ ರಕ್ಷಣೆಗೆ ಉಡುಗೊರೆಯಾಗಿ ಒದಗಿಬಂತು ಅನ್ನಿಸುತ್ತದೆ.

ಸುರೇಶ್ ರೈನಾ ಮೂಲತಃ ಕಾಶ್ಮೀರದವರು. ಕಾಶ್ಮೀರದಲ್ಲಿ ತೀವ್ರಗಾಮಿಗಳ ಕೂಗು ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ಅವರ ತಂದೆ ಕಾಶ್ಮೀರ ಬಿಟ್ಟು, ಉತ್ತರಪ್ರದೇಶದ ಮುರಾದಾಬಾದ್‌ಗೆ ಬಂದು ನೆಲೆಸಿದರು. ಅವರ ತಂದೆ ಭಾರತೀಯ ಸೇನೆಯಲ್ಲಿ ಟ್ಯಾಂಕರ್‌ಗಳಿಗೆ ಕೋಡಿಂಗ್ ಕೆಲಸ ಮಾಡಿ ತಿಂಗಳಿಗೆ ಹತ್ತು ಸಾವಿರ ರೂ. ಸಂಬಳ ಪಡೆಯುತ್ತಿದ್ದ ಖಡಕ್ ಮನುಷ್ಯರಾಗಿದ್ದರು. ಆ ಹಣದಲ್ಲಿಯೇ ಹೆಂಡತಿ ಮತ್ತು ಆರು ಜನ ಮಕ್ಕಳನ್ನು ಅವರು ಸಾಕಬೇಕಾಗಿತ್ತು. ತಾಯಿ ಮುಂಗೋಪಿ ಮತ್ತು ಸಿಟ್ಟಿನ ಸಾಕಾರ ಮೂರ್ತಿ. ಅವರ ಕೈಯಲ್ಲಿ ಸೌಟಿಗಿಂತ ಲಟ್ಟಣಿಗೆ ಇದ್ದದ್ದೇ ಹೆಚ್ಚು. ಅದು ಮಕ್ಕಳು ದಾರಿ ತಪ್ಪಬಾರದು ಎಂಬ ಕಾರಣಕ್ಕಾಗಿ. ಆದ್ದರಿಂದ ಸಣ್ಣವರಿರುವಾಗ ರೈನಾಗೆ 'ಲಟ್ಟಣಿಗೆ ಯಾವ ಕೆಲಸಕ್ಕೆ ಬರುತ್ತದೆ' ಎಂದು ಕೇಳಿದರೆ 'ರೊಟ್ಟಿ ಲಟ್ಟಿಸುವುದಕ್ಕೆ' ಎನ್ನುವುದಕ್ಕಿಂತ 'ಬೆನ್ನಿಗೆ ಬಾರಿಸಲು ಹೆಚ್ಚು ಪ್ರಯೋಜನಕ್ಕೆ ಬರುತ್ತದೆ' ಎನ್ನುವಂತಿತ್ತು. ರೈನಾ ಅಣ್ಣಂದಿರಿಂದಲೂ ಸಾಕಷ್ಟು ಪೆಟ್ಟು ತಿನ್ನುತ್ತಿದ್ದರು. ಅಣ್ಣಂದಿರು ಅವರನ್ನು ಬಗ್ಗಿ ನಿಲ್ಲಿಸುತ್ತಿದ್ದರು, ಉಟಾಬಸ್ ಹೊಡೆಸುತ್ತಿದ್ದರು. ಇವೆಲ್ಲ ಹೆಚ್ಚಾಗಿ ಆಟದ ವಿಷಯದಲ್ಲಿಯೇ ಆಗುತ್ತಿತ್ತು.

ರೈನಾ ಹನ್ನೆರಡು ವರ್ಷದವರಾಗಿದ್ದಾಗ ಊರಿನ ಗಲ್ಲಿಗಳಲ್ಲಿ, ಸಹೋದರ ಮತ್ತು ಸ್ನೇಹಿತರೊಂದಿಗೆ ಕ್ರಿಕೆಟ್ ಆಡುತ್ತಿದ್ದರು. ಹಾಗೆಯೇ ಊರು ಊರಿನ ನಡುವೆ ನಡೆಯುವ ಸಣ್ಣ ಪುಟ್ಟ ಮಕ್ಕಳ ಪಂದ್ಯಗಳಲ್ಲಿ ಆಡುತ್ತಿದ್ದರು. ಎಷ್ಟು ಚೆನ್ನಾಗಿ ಆಡುತ್ತಿದ್ದರು ಎಂದರೆ ನೋಡಲು ಬಂದ ಕೆಲವು ಊರಿನ ಜನ ರೈನಾ ಆಟ ನೋಡಿ, ಖುಷಿಯಾಗಿ, ಐವತ್ತು ನೂರು ರೂಪಾಯಿಯ ಬಹುಮಾನ ಕೊಟ್ಟು ಹೋಗುತ್ತಿದ್ದರು. ಅದರಿಂದ ಪ್ರೇರಣೆಗೊಂಡ ರೈನಾ ಲಖನೌ ನಗರದಲ್ಲಿರುವ ಸ್ಪೋರ್ಟ್ಸ್ ಕಾಲೇಜ್ ಸೇರಿಕೊಂಡರು. ಅಲ್ಲಿ ಸೇರಲು ಪ್ರತಿ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಹಾಕುತ್ತಿದ್ದರು. ಬಂದ ವಿದ್ಯಾರ್ಥಿಗಳಿಗೆ ಹತ್ತರಿಂದ ಹದಿನೈದು ಚೆಂಡು ಎಸೆಯಲಾಗುತ್ತಿತ್ತು. ಅದರಲ್ಲಿಯೇ ಅವರು ತಮ್ಮ ಪ್ರತಿಭೆ ತೋರಿಸಬೇಕಾಗುತ್ತಿತ್ತು. ಇವೆಲ್ಲದರ ನಡುವೆ ರೈನಾ ಆಯ್ಕೆಯಾಗಿದ್ದರು. ರೈನಾ ಅಲ್ಲಿ ಸೇರಿಕೊಂಡಾಗ ವರ್ಷಕ್ಕೆ ಹತ್ತು ಸಾವಿರ ರೂ. ಫೀಸ್ ಕಟ್ಟಬೇಕಾಗಿತ್ತು.

ತಂದೆಗೆ ಬರುತ್ತಿದ್ದ ಸಂಬಳದಲ್ಲಿ ರೈನಾ ಅವರಿಗೆ ಕೊಡಲು ಇಷ್ಟು ಮಾತ್ರ ಸಾಧ್ಯವಾಗುತ್ತಿತ್ತು. ಉಳಿದದ್ದನ್ನು ರೈನಾ ಹೇಗೋ ಹೊಂದಿಸಿಕೊಳ್ಳಬೇಕಾಗಿತ್ತು. ರೈನಾ ಲಖನೌನಲ್ಲಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಾಗ ಒಂದೆರಡು ಜೊತೆ ಬಟ್ಟೆ, ಒಂದು ಹಾಸು, ಒಂದು ಹೊದಿಕೆ ಬಿಟ್ಟರೆ ಇನ್ನೇನೂ ಇರಲಿಲ್ಲ. ಹಾಸ್ಟೆಲ್‌ನಲ್ಲಿ ಒಂದು ಕೋಣೆಯಲ್ಲಿ ಮೂರು ಜನ ಉಳಿದುಕೊಳ್ಳಬೇಕಾಗಿತ್ತು. ಆದರೆ ಎರಡೇ ಮಂಚ ಇರುತ್ತಿತ್ತು. ರೈನಾಗಿಂತ ದೊಡ್ಡ ಮಕ್ಕಳು ಮಂಚದ ಮೇಲೆ ಮಲಗುತ್ತಿದ್ದುದರಿಂದ ರೈನಾ ನೆಲದ ಮೇಲೆ ಮಲಗುತ್ತಿದ್ದರು. ಹಾಸ್ಟೆಲ್‌ನ ಕೋಣೆಯ ಕಿಟಕಿಗಳಿಗೆ ಗಾಜುಗಳು ಇರುತ್ತಿರಲಿಲ್ಲವಾದ್ದರಿಂದ ಮಳೆ ಮತ್ತು ಚಳಿಗಾಳಿಯಿಂದ ರಕ್ಷಿಸಿಕೊಳ್ಳಲು ಪೇಪರ್ ಅಂಟಿಸುತ್ತಿದ್ದರು. ಚಳಿಗಾಲದಲ್ಲಂತೂ ಚಳಿ ತಡೆಯಲಾಗದೆ ರೈನಾ ಎಷ್ಟೋ ಬಾರಿ ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು, ಹ್ಯಾಂಡ್ ಗ್ಲೌಸ್ ಹಾಕಿಕೊಂಡು ಮಲಗುತ್ತಿದ್ದರು. ದೊಡ್ಡ ಮಕ್ಕಳು ಕೆಲವೊಮ್ಮೆ ರೈನಾ ಮೈಮೇಲೆ ತಣ್ಣಗಿನ ನೀರು ತಂದು ಸುರಿಯುತ್ತಿದ್ದರು. ಎಲೆ ಅಡಿಕೆ ಅಗೆದು ಉಗಿಯುತ್ತಿದ್ದರು. ಬಿಡುವಿದ್ದಾಗ ತಮ್ಮ ಬಟ್ಟೆ ತೊಳೆದುಕೊಳ್ಳುವುದರ ಜತೆಗೆ ದೊಡ್ಡವರ ಬಟ್ಟೆಯನ್ನೂ ತೊಳೆದು ಕೊಡಬೇಕಾಗಿತ್ತು. ಕೆಲವು ಮಕ್ಕಳು ಬಟ್ಟೆ ತೊಳೆದಿದ್ದು ಸರಿಯಾಗಲಿಲ್ಲ, ಕೊಳೆ ಹೋಗಲಿಲ್ಲ ಎಂದು ರೈನಾ ಅವರನ್ನು ಹೊಡೆಯುತ್ತಿದ್ದರು.

ಇದೆಲ್ಲಾ ಹಾಸ್ಟೆಲ್ ಕೋಣೆಯ ಒಳಗಾದರೆ, ರೈನಾ ಅವರ ವಯಸ್ಸಿನ ಇತರ ಮಕ್ಕಳೊಂದಿಗೆ ಸೇರಿ ಮೈದಾನದಲ್ಲಿಯೂ ಕೆಲಸ ಮಾಡಬೇಕಾಗುತ್ತಿತ್ತು. ಕ್ರಿಕೆಟ್ ಪಿಚ್ ಮೇಲೆ ರೋಲರ್ ಓಡಾಡಿಸಬೇಕಾಗುತ್ತಿತ್ತು, ಅದೂ ಕೈಯಲ್ಲಿ ಎಳೆದುಕೊಂಡು ಹೋಗುವಂತಹ ರೋಲರ್. ಕೆಲವೊಮ್ಮೆ ಮಳೆ ಬಂದಾಗ ರೈನಾ ಇತರ ಮಕ್ಕಳ ಜೊತೆ ಪಿಚ್‌ಗೆ ನೀರು ತಾಗದಂತೆ ಬಚಾವ್ ಮಾಡಲು, ಪಿಚ್ ಮೇಲೆ ಮಲಗಿಕೊಳ್ಳುತ್ತಿದ್ದರು. ಏಕೆಂದರೆ ಅಲ್ಲಿ ಪಿಚ್ ಮುಚ್ಚಲು ತಾಡಪತ್ರಿಯಾಗಲಿ, ಪ್ಲಾಸ್ಟಿಕ್ ಆಗಲಿ ಇರುತ್ತಿರಲಿಲ್ಲ. ಇಷ್ಟು ಮಾಡಿಯೂ ಅವರಿಗೆ ಬ್ಯಾಟಿಂಗ್ ಸಿಗುತ್ತಿರಲಿಲ್ಲ, ಅವರು ದೊಡ್ಡ ವಿದ್ಯಾರ್ಥಿಗಳಿಗೆ ದಿನವಿಡೀ ಬೌಲಿಂಗ್ ಮಾಡಬೇಕಾಗಿತ್ತು. ಎಲ್ಲಾದರೂ ಅಪರೂಪಕ್ಕೊಮ್ಮೆ ಇವರಿಗೆ ಬ್ಯಾಟಿಂಗ್ ಸಿಕ್ಕಾಗ ಈ ಎಲ್ಲಾ ಸಿಟ್ಟನ್ನು ಅವರು ಚೆಂಡನ್ನು ಬೌಂಡರಿಗೆ ಅಟ್ಟುವ ಮೂಲಕ ತೀರಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಅದಕ್ಕೂ ಪೆಟ್ಟು ತಿನ್ನಬೇಕಾಗಿತ್ತು.

ರೈನಾ ಉತ್ತರ ಪ್ರದೇಶದ ಹದಿನಾಲ್ಕು ವರ್ಷಕ್ಕೂ ಸಣ್ಣವರ ತಂಡಕ್ಕೆ ಆಯ್ಕೆಯಾಗಿದ್ದರು. ಒಮ್ಮೆ ಪಂದ್ಯಾಟದಲ್ಲಿ ಭಾಗವಹಿಸಲು ತಂಡದವರೊಂದಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ದೊಡ್ಡ ಮಕ್ಕಳು ಬರ್ತ್‌ನಲ್ಲಿ ಮಲಗಿದ್ದರೆ, ರೈನಾ ಬೋಗಿಯ ನೆಲದ ಮೇಲೆ ಪೇಪರ್ ಹಾಸಿಕೊಂಡು ಮಲಗಿದ್ದರು. ಇದ್ದಕ್ಕಿದ್ದಂತೆ ಅವರಿಗೆ ಎದೆಯ ಮೇಲೆ ಭಾರವಾದ ವಸ್ತು ಇಟ್ಟಂತೆ ಭಾಸವಾಯಿತು. ಕಣ್ಣು ತೆರೆದು ನೋಡಿದಾಗ ಎದೆಯ ಮೇಲೆ ಒಬ್ಬ ಹುಡುಗ ಕುಳಿತು ರೈನಾ ಮೇಲೆ ಮೂತ್ರ ವಿಸರ್ಜಿಸುತ್ತಿದ್ದ. ತಪ್ಪಿಸಿಕೊಳ್ಳಬೇಕೆಂದರೆ ಇನ್ನಿಬ್ಬರು ರೈನಾ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು. ಹೇಗೋ ಕಷ್ಟಪಟ್ಟು ರೈನಾ ಕೈ ಬಿಡಿಸಿಕೊಂಡು ಅವರನ್ನು ನೂಕಿದಾಗ ಒಬ್ಬ ಹುಡುಗ ರೈಲಿನಿಂದ ಹೊರಗೆ ಹೋಗಿ ಬಿದ್ದ. ರೈಲು ತೀರಾ ನಿಧಾನವಾಗಿ ಚಲಿಸುತ್ತಿದ್ದುದರಿಂದ ಆತನಿಗೆ ಹೆಚ್ಚು ಪೆಟ್ಟಾಗಲಿಲ್ಲ, ಇಲ್ಲವಾದರೆ ರೈನಾ ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದರು.

ಒಮ್ಮೆ ಹಾಸ್ಟೆಲ್‌ನಿಂದ ಮನೆಗೆ ಬರಬೇಕು ಅಂದುಕೊಂಡಾಗ, ಬಸ್, ಟ್ರೈನ್ ಸಿಗದೇ ಹೆದ್ದಾರಿಯಲ್ಲಿ ನಿಂತು ಲಾರಿಗೆ ಕೈ ತೋರಿಸಿದರು. ಲಾರಿ ನಿಂತಿತು, ರೈನಾ ಅದರೊಳಗೆ ಹತ್ತಿಕೊಂಡರು. ಆದರೆ ಅದರಲ್ಲಿ ಇನ್ನೂ ನಾಲ್ಕೈದು ಜನ ಇದ್ದರು. ಎಲ್ಲರೂ ಪಾನಮತ್ತರಾಗಿದ್ದು, ಅಸಭ್ಯವಾಗಿ ವರ್ತಿಸಲು ಆರಂಭಿಸಿದರು. ರೈನಾ ತಮ್ಮ ಮೊಣಕೈನಿಂದ ಕಿಟಕಿಯ ಗಾಜನ್ನು ಗುದ್ದಿ ಒಡೆದು, ಚಲಿಸುತ್ತಿರುವ ಲಾರಿಯಿಂದಲೇ ಹೊರಗೆ ಜಿಗಿದು ಓಡಿ ಬಂದಿದ್ದರು. ಅದೃಷ್ಟವಶಾತ್ ಅವರಿಗೆ ಯಾವುದೇ ದೊಡ್ಡ ಪೆಟ್ಟಾಗಿರಲಿಲ್ಲ.

ರೈನಾ ಕಾಲೇಜಿನಲ್ಲಿರುವಾಗ ಪ್ರತಿನಿತ್ಯ ರ‍್ಯಾಗಿಂಗ್ ನಡೆಯುತ್ತಿತ್ತು. ಕೆಲವೊಮ್ಮೆ ರ‍್ಯಾಗಿಂಗ್ ಅತಿಯಾದಾಗ, ಯಾರ ಬಳಿಯೂ ಹೇಳಿಕೊಳ್ಳಲಾಗದ ರೈನಾ ಒಬ್ಬರೇ ಕುಳಿತು ಅಳುತ್ತಿದ್ದರು. ಒಮ್ಮೆ ರಾತ್ರೋರಾತ್ರಿ ಯಾರಿಗೂ ಹೇಳದೇ ಹಾಸ್ಟೆಲ್‌ನಿಂದ ಮನೆಗೆ ಓಡಿ ಬಂದಿದ್ದರು. ಆಗ ರೈನಾ ಅಣ್ಣ ಅವರಿಗೆ ಸಮಾಧಾನ ಮಾಡಿ, ಯಾವ ಕಾಲಕ್ಕೂ, ಯಾರಿಗೂ ಹೆದರಬೇಡ ಎಂದು ಧೈರ್ಯ ತುಂಬಿದರು. ರೈನಾ ಜತೆ ಬಂದು, ಶಿಕ್ಷಕರಲ್ಲಿ ಮಾತನಾಡಿ, ದೊಡ್ಡವರು ಸಣ್ಣವರಿಗೆ ಮಾಡುತ್ತಿರುವ ರ‍್ಯಾಗಿಂಗ್ ಬಗ್ಗೆ ತಿಳಿಸಿದರು. ಭರವಸೆ ಸಿಕ್ಕ ನಂತರ ರೈನಾ ಅವರನ್ನು ಪುನಃ ಬಿಟ್ಟು ಬಂದರು. ಅಲ್ಲಿಗೆ ರೈನಾ ಮನಸ್ಸು ಮತ್ತು ದೇಹ ಎರಡೂ ಕಲ್ಲಾಗಿತ್ತು. ಕ್ರಿಕೆಟ್ ಆಡಬೇಕು, ಭಾರತ ತಂಡವನ್ನು ಸೇರಿಕೊಳ್ಳಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಕಲ್ಲಿನಷ್ಟೇ ಗಟ್ಟಿಯಾಗಿ ಕುಳಿತುಕೊಂಡು ಬಿಟ್ಟಿತು. ಅಲ್ಲಿಂದ ಮುಂದೆ ರೈನಾ ಬದುಕು ಅವರದ್ದಾಗಿರಲಿಲ್ಲ, ಭಾರತೀಯ ಕ್ರಿಕೆಟ್ ಪ್ರೇಮಿಗಳದ್ದಾಗಿತ್ತು.

ರೈನಾ ಈಗ ಉದ್ಯಮಿಯಾಗಿದ್ದಾರೆ, ಸಂಸಾರದೊಂದಿಗೆ ಸುಖವಾಗಿದ್ದಾರೆ, ಚಾರಿಟಿ, ತರಬೇತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಅದೂ ಹೇಳಲು ಯೋಗ್ಯವಾದ ವಿಷಯವೇ. ಆದರೆ ಏಕದಿನ, ಟಿ–ಟ್ವೆಂಟಿ, ಅದರಲ್ಲೂ, ಐಪಿಎಲ್ ದಿಗ್ಗಜರ ಪಟ್ಟಿಯಲ್ಲಿ ಗೇಲ್, ಡಿವಿಲಿಯರ್ಸ್, ವಾರ್ನರ್, ಹೇಯ್ಡನ್, ಯುವರಾಜ್, ವಿರಾಟ್, ರೋಹಿತ್, ಧೋನಿ, ಯಾರ ಹೆಸರನ್ನು ಬೇಕಾದರೂ ಸೇರಿಸಿ, ಆದರೆ ರೈನಾ ಹೆಸರು ಇಲ್ಲದಿದ್ದರೆ ಆ ಪಟ್ಟಿ ಅಪೂರ್ಣ. ರೈನಾ ಈಗ ಐಪಿಎಲ್ ಆಡುತ್ತಿಲ್ಲವಾದರೂ, ಐಪಿಎಲ್ ವಿಷಯದ ಕುರಿತು ಚರ್ಚೆ, ಸಂಭಾಷಣೆ ನಡೆದರೆ ರೈನಾ ನೆನಪಾಗದೇ ಇರುವುದಿಲ್ಲ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬೆಂಗಳೂರಿನ ಅಂದಗೆಡಿಸುವವರು

ಮೊನ್ನೆ ಸಂಜೆ ರಸ್ತೆ ಬದಿ ನಡೆದುಕೊಂಡು ಬರುತ್ತಿದ್ದೆ. ಅಲ್ಲಿಯೇ ಲೈಟ್ ಕಂಬಕ್ಕೆ ಕಟ್ಟಿದ್ದ ಬ್ಯಾನರ್ ತಲೆಗೆ ತಾಗಿ ತಲೆಯಲ್ಲಿ ಪೂರಿ ಬಂತು. ಬ್ಯಾನರ್ ಕಟ್ಟುವ ಈ ಕೆಟ್ಟ ಅಭ್ಯಾಸ ನಮ್ಮ ಜನಕ್ಕೆ ಹೇಗೆ ಬಂತೋ. ಯಾರು ಸತ್ತರೂ ಬ್ಯಾನರ್, ಹುಟ್ಟಿದ ಹಬ್ಬಕ್ಕೆ ಬ್ಯಾನರ್, ಕಾರ್ಯಕ್ರಮಗಳಿಗೆ ಬ್ಯಾನರ್. ರಸ್ತೆ ಬದಿ ತೂಗು ಹಾಕಲು ಜಾಗ ಸಿಕ್ಕಲ್ಲೆಲ್ಲಾ ಬ್ಯಾನರ್‌ಗಳೇ. ಅದನ್ನು ಆಮೇಲೆ ತೆಗೆಯುವ ಬಾಬ್ತು ಇಲ್ಲವೇ ಇಲ್ಲ. ಎಲ್ಲವನ್ನೂ ಬಿಬಿಎಂಪಿ ಅವರೇ ಮಾಡಬೇಕು ಎಂದು ಸುಮ್ಮನಿರುತ್ತಾರೆ. ಪಾಪ ಬಿಬಿಎಂಪಿ ನೌಕರರು ಎಷ್ಟಂತ ಸ್ವಚ್ಛ ಮಾಡಬೇಕು? ಅವರೂ ನಮ್ಮಂತೆ ಮನುಷ್ಯರಲ್ಲವೇ? ಪ್ರತಿಯೊಬ್ಬ ನಾಗರಿಕನೂ ಅವನ ಜವಾಬ್ದಾರಿ ಅರಿತು ನಡೆದರೆ ಕಸದ ರಾಶಿ, ಬ್ಯಾನರ್‌ಗಳಿಗೆ ಮುಕ್ತಿ ಸಿಗುತ್ತೆ. ಬೆಂಗಳೂರು ಉದ್ಯಾನ ನಗರಿಯಂತೆ. ಇಲ್ಲಿ ರಸ್ತೆ ಬದಿ ಕಸ ಸುರಿಯುವವರು, ಖಾಲಿ ಸೈಟ್‌ನಲ್ಲಿ ಮನೆ ಕಟ್ಟಡದ ಕಸ ಹಾಕುವವರಿಗೆ ನಮ್ಮ ಊರು, ನಮ್ಮ ಬಡಾವಣೆ ಸ್ವಚ್ಛವಾಗಿ ಇರಬೇಕು ಎಂಬ ಪರಿಜ್ಞಾನವೇ ಇಲ್ಲ. ಯುವಜನ ರಾತ್ರಿ ಕುಡಿದು ಬಾಟಲ್‌ಗಳನ್ನು ರಸ್ತೆ ಬದಿ ಸುರಿಯುತ್ತಾರೆ. ಮಕ್ಕಳ ಡೈಪರ್ ರಸ್ತೆ ಬದಿ ಹಾಕ್ತಾರೆ. ನಾಯಿಗಳ ಸಂಖ್ಯೆ ಇದರಿಂದಲೇ ಜಾಸ್ತಿ. ಅವು ಗಲೀಜು ತಂದು ಮನೆ ಮುಂದೆ ಹಾಕುತ್ತವೆ. ಮಳೆ ಬಂದರಂತೂ ಚರಂಡಿಗಳೆಲ್ಲಾ ಕಸದಿಂದ ತುಂಬಿ ನೀರು ಹೋಗಲು ಜಾಗವೇ ಇಲ್ಲ. ಎಲ್ಲ ನೀರೂ ರಸ್ತೆಗೆ. ಓಡಾಡಲು ಕಷ್ಟ. ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಹಿಂಭಾಗದಲ್ಲಿ ಕೆಂಗೇರಿಗೆ ತಲುಪಲು ಹೊಸ ರಸ್ತೆ ಇದೆ. ಅದರ ಬದಿಯಲ್ಲಿ ಪಾದಚಾರಿ ಮಾರ್ಗಕ್ಕೆ ಹಾಗೂ ವಾಹನ ನಿಲುಗಡೆಗೂ ಜಾಗವಿದೆ. ಆದರೆ ಆ ಜಾಗವೆಲ್ಲಾ ಕಟ್ಟಡದ ಕಸದ ರಾಶಿಯಿಂದ ತುಂಬಿ ಹೋಗಿದೆ. ವಿದೇಶಗಳಲ್ಲಿರುವಂತೆ ಕಸ ಹಾಕುವವರಿಗೆ ಕಠಿಣ ಶಿಕ್ಷೆ ವಿಧಿಸುವುದರಿಂದ ಈ ಸಮಸ್ಯೆ ಕಡಿಮೆ ಆಗಬಹುದು.

– ಸುಜಯ ಆರ್ ಕೊಣ್ಣೂರು

ಬಿಯರ್ ಮತ್ತು ಗಲ್ಫ್ ಯುದ್ಧ

ಮೇ 31ರ 'ಅಂತರಂಗ ಸುದ್ದಿ', ಈ ಹಿಂದೆ ಹರಿದಾಡಿದ 'ಕಳ್ಳರೂ ದೇಶದ ಆರ್ಥಿಕತೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಾರೆ' ಸಂದೇಶವನ್ನು ನೆನಪಿಸಿತು. ಎಲ್ಲಿಯ ಅಮೆರಿಕಾ – ಇರಾನ್ ಯುದ್ಧ, ಇನ್ನೆಲ್ಲಿಯ ಬಿಯರ್ ಪ್ಯಾಕೇಜಿಂಗ್ ಅಂತ ಅನಿಸಿದರೂ ಇದೇ ಅನಿವಾರ್ಯತೆ ಸಂಶೋಧನೆಗೆ ಮೂಲ ಎಂಬ ತತ್ವವನ್ನೂ ಸಾರಿದಂತಿದೆ. ಬಾಟಲ್ ತಯಾರಿಸಲು ಬೇಕಾಗುವ ತೈಲ, ಮುಂದೆ ಅವುಗಳ ಸಾಗಾಣಿಕೆಯಲ್ಲಿ ಬೇಕಾಗುವ ಇಂಧನಗಳ ಅವಶ್ಯಕತೆಯೇ, ಗಾಜಿನ ಬಾಟಲ್ ಬದಲು ಅತಿ ಹಗುರವಾದ ಟಿನ್ ಬಳಕೆಯ ವಿಷಯ ನಿಜಕ್ಕೂ ಆಸಕ್ತಿಕರ. ನಮ್ಮ ಆರ್ಥಕತೆಗೆ ಏನೇನೆಲ್ಲ ಪೂರಕವಾಗಿರುತ್ತದೆ ಎಂಬುದೂ ಬಹು ಮುಖ್ಯ. ಇನ್ನು ಮುಂದೆ ಈ ಟಿನ್‌ನಲ್ಲೇ ಹೊಸತನ ಬಂದು ಅದೇ ಹೆಚ್ಚು ಬೇಡಿಕೆಯಲ್ಲಿ ಬಂದರೂ ಆಶ್ಚರ್ಯವಿಲ್ಲ. ಸದ್ಯ ಟಿನ್ ಅಷ್ಟು ಆಕರ್ಷಕವೂ ಅಲ್ಲ, ಅಷ್ಟೇ ಅಲ್ಲ ಬಾಟಲ್‌ಗಳಿಗಿರುವ ಚಾರ್ಮ್ ಇದಕ್ಕಿಲ್ಲ. ಹೀಗಾಗಿ ಬೇಡಿಕೆಯೂ ಕಡಿಮೆ. ಇಲ್ಲೇ ಇನ್ನೂ ಹೆಚ್ಚು ಸಂಶೋಧನೆ ನಡೆದು ಹೊಸ ಆವಿಷ್ಕಾರ ಬಂದರೂ ಬಂದೀತೆ? ಒಂದಂತೂ ಸ್ಪಷ್ಟ, ಎಷ್ಟೇ ಕೆಡುಕು ಎನ್ನುವುದರಲ್ಲೂ ಏನಾದರೂ ಒಂದಿಷ್ಟು ಒಳಿತೂ ಇರುತ್ತದೆ. ಒಂದು ವೇಳೆ ಅಮೆರಿಕಾ– ಇರಾನ್ ಯುದ್ಧ ಸಂಭವಿಸದೇ ಹೋಗಿದ್ದರೆ, ಹೆಚ್ಚು ಭಾರದ ಬಾಟಲ್‌ಗಳ ಉಪಯೋಗವೇ ಹೆಚ್ಚಾಗಿ, ಅನವಶ್ಯಕ ಇಂಧನ ಖರ್ಚಾಗುತ್ತಿತ್ತು ಮತ್ತು ಪರಿಸರದ ಮೇಲೂ ಹೆಚ್ಚು ಪರಿಣಾಮ ಬೀರುತ್ತಿತ್ತು.

– ಶಂಕರನಾರಾಯಣ ಭಟ್, ಹೊನ್ನಾವರ

ವಿಜಯ್ ನಡೆ ಮಾದರಿ

ನಮ್ಮ ಪಕ್ಕದ ರಾಜ್ಯದ, ತಮಿಳು ನಾಡಿನ ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು, ರಾಜ್ಯದ ಎಲ್ಲ ಖಾಸಗಿ ಶಾಲೆಗಳ ಪ್ರವೇಶಕ್ಕಾಗಿ ಸರಕಾರ ನಿಗದಿಪಡಿಸಿರುವ ಶುಲ್ಕವನ್ನು ಶಾಲೆಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು ಮತ್ತು ಹೆಚ್ಚಿನ ಶುಲ್ಕವನ್ನು ಪಡೆಯಬಾರದು ಎಂದು ಕಟ್ಟುನಿಟ್ಟಿನ ಆದೇಶ ಹೊರಡಿಸಿ, ಒಂದು ವೇಳೆ ಹೆಚ್ಚಿನ ಶುಲ್ಕವನ್ನು ಪಡೆದರೆ ಆ ಶಾಲೆಯ ಮಾನ್ಯತೆಯನ್ನು ರದ್ದುಪಡಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪೋಷಕರಿಂದ ಗುಪ್ತ ಪ್ರವೇಶ ಶುಲ್ಕವನ್ನು ರಸೀದಿ ನೀಡದೇ ಬಲವಂತವಾಗಿ ವಸೂಲು ಮಾಡದಂತೆ ಸರಕಾರ ಆದೇಶ ಹೊರಡಿಸಿದೆ. ನಮ್ಮ ರಾಜ್ಯದ ಮುಂದಿನ ಮುಖ್ಯಮಂತ್ರಿ ನಮ್ಮಲ್ಲೂ ಇಂತಹ ಕಟ್ಟುನಿಟ್ಟಿನ ಆದೇಶ ಜಾರಿಗೊಳಿಸಲಿ. ನಮ್ಮ ರಾಜ್ಯದಲ್ಲಿ ಬಹುತೇಕ ಖಾಸಗಿ ಶಾಲೆಗಳು ತಮ್ಮ ಮನಸೋ ಇಚ್ಛೆ ಪ್ರವೇಶ ಶುಲ್ಕವನ್ನು ವಸೂಲಿ ಮಾಡುತ್ತಿವೆ.

– ಬೂಕನಕೆರೆ ವಿಜೇಂದ್ರ, ಮೈಸೂರು

ಯುದ್ಧ ಮತ್ತು ಎಲ್ ನಿನೋ, ಕೃಷಿ ಹೇಗೋ ಏನೋ?!

ನೆಲನೋಟ
ರವೀ ಸಜಂಗದ್ದೆ
vveditoped@gmail.com

ತುಳುನಾಡಿನ ಸಾಂಪ್ರದಾಯಿಕ 'ಪತ್ತನಾಜೆ' ಪರ್ವವು ಮುಗಿಯುವುದರೊಂದಿಗೆ ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದೆಲ್ಲೆಡೆ ಬೇಸಗೆಯ ಧಗೆಯಿಂದ ಪಾರಾಗುವ ಹಾಗೂ ಮುಂಗಾರು ಮಳೆಯ ಆಗಮನವನ್ನು ಸ್ವಾಗತಿಸುವ, ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ನಿರತವಾಗುವ ಸಿದ್ಧತೆಗಳು ಶುರುವಾಗಿವೆ. ಜೂನ್ ತಿಂಗಳ ಆರಂಭವು ಕೃಷಿಕರಿಗೆ ಬಿತ್ತನೆಯ ಭರವಸೆಯನ್ನು, ತಮ್ಮ ಕೃಷಿ ಭೂಮಿಯಲ್ಲಿ ಈ ವರ್ಷದ ಬೆಳೆಗೆ ಬೇಕಾದ ಕೆಲಸ ಕಾರ್ಯಗಳನ್ನು ಆರಂಭಿಸುವ ಸಮಯ. ಈ ಋತುವಿನ ಮಳೆಗಾಲದ ಕೃಷಿ ಚಟುವಟಿಕೆಗಳು ಜಾಗತಿಕ ಹವಾಮಾನ ವೈಪರೀತ್ಯಗಳು ಹಾಗೂ ಭೌಗೋಳಿಕ–ರಾಜಕೀಯ ಬಿಕ್ಕಟ್ಟುಗಳ ನೆರಳಿನಲ್ಲಿ ನಲುಗುತ್ತಿವೆ. ಅನ್ಯಾನ್ಯ ಸಮಸ್ಯೆಗಳಿಂದ ಹೈರಾಣಾಗಿರುವ ರೈತಾಪಿ ವರ್ಗಕ್ಕೆ ಈ ಋತುಮಾನ ಸತ್ವ ಪರೀಕ್ಷೆಯ ಕಾಲ!

ಹವಾಮಾನ ಇಲಾಖೆಯ ಇತ್ತೀಚಿನ ಕಳವಳಕಾರಿ ಮುನ್ಸೂಚನೆಗಳು, ಪೆಸಿಫಿಕ್ ಸಾಗರದಲ್ಲಿ ಮರುಕಳಿಸುತ್ತಿರುವ 'ಎಲ್ ನಿನೋ' ವಿದ್ಯಮಾನದ ನಕಾರಾತ್ಮಕ ಪರಿಣಾಮ, ಮಧ್ಯಪ್ರಾಚ್ಯದ ಪ್ರಕ್ಷುಬ್ಧ ವಾತಾವರಣ ಮತ್ತು ಯುದ್ಧದ ಪರಿಣಾಮವಾಗಿ ಸೃಷ್ಟಿಯಾಗಿರುವ ರಸಗೊಬ್ಬರ ಅಭಾವ – ಈ ಪ್ರಮುಖ ಅಂಶಗಳು ದೇಶದ ಕೃಷಿ ವಲಯದ ಮೇಲೆ ಗಂಭೀರ ಪರಿಣಾಮ ಬೀರಲಿವೆ. ಕೃಷಿಯು ದೇಶದ ಬಹುಪಾಲು ಜನರ ಆದಾಯದ ಮೂಲ ಮತ್ತು ಈ ತೊಂದರೆಗಳು ಕೃಷಿಕರ ಬಳಗಕ್ಕೆ ಬಲವಾದ ಪೆಟ್ಟು ನೀಡಲಿವೆ.

ಈ ಬಾರಿಯ ಮುಂಗಾರಿನ ಕುರಿತು ತನ್ನ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಇತ್ತೀಚೆಗೆ ಪರಿಷ್ಕರಿಸಿದ್ದು, ರೈತರಿಗೆ ಎಚ್ಚರಿಕೆಯ ಸಂದೇಶವನ್ನು ರವಾನಿಸಿದೆ! 2026ರ ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನೈರುತ್ಯ ಮುಂಗಾರು ಅವಧಿಯಲ್ಲಿ ದೇಶಾದ್ಯಂತ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಗಳು ದಟ್ಟವಾಗಿವೆ. ದೇಶದ ದೀರ್ಘಾವಧಿಯ ಸರಾಸರಿ ಮಳೆಯು ವಾಡಿಕೆಗಿಂತ ಕಡಿಮೆಯಾಗಿ, 90% ಮಾತ್ರ ಸುರಿಯಲಿದೆ ಎಂದು ಅಂದಾಜು. ಹಿಂದಿನ ವಿಶ್ಲೇಷಣೆ ಪ್ರಕಾರ ಇದು 92% ಇರಲಿದೆ ಎಂದು ನಿರೀಕ್ಷಿಸಲಾಗಿತ್ತು. ಈ ವರ್ಷ ದೇಶದ ಕೆಲವು ಭಾಗಗಳಲ್ಲಿ 60%ದಷ್ಟು 'ಮಳೆ ಕೊರತೆ' ಆಗುವ ಸಾಧ್ಯತೆಗಳಿದ್ದು, ಬರಗಾಲದ ಭೀತಿಯನ್ನು ಹೆಚ್ಚಿಸಿದೆ. ಈಶಾನ್ಯ ಭಾರತದ ಕೆಲವು ಭಾಗಗಳನ್ನು ಹೊರತುಪಡಿಸಿದರೆ, ದೇಶದ ಬಹುಪಾಲು ಕೃಷಿ ಆಧಾರಿತ ವಲಯಗಳಲ್ಲಿ ಮಳೆಯ ಪ್ರಮಾಣವು 94%ಕ್ಕಿಂತ ಕಡಿಮೆ ಇರಲಿದೆ. ಕರ್ನಾಟಕದ ಒಳನಾಡು, ಮಲೆನಾಡು ಮತ್ತು ಕರಾವಳಿಯಲ್ಲೂ ವಾಡಿಕೆಗಿಂತ ಕಡಿಮೆ ಮಳೆಯಾಗುವ ಮುನ್ಸೂಚನೆ. ಇದರಿಂದಾಗಿ ಬಿತ್ತನೆ ಕಾರ್ಯಗಳಿಗೆ ಆರಂಭಿಕ ಹಂತದಲ್ಲಿಯೇ ಹಿನ್ನಡೆಯಾಗುವ ಅಪಾಯವಿದೆ.

ಈ ಋತುವಿನಲ್ಲಿ ಮಳೆಯ ಪ್ರಮಾಣ ಗಣನೀಯ ಕುಸಿತವಾಗಲು ಪ್ರಮುಖ ಕಾರಣ 'ಎಲ್ ನಿನೋ' ಹವಾಮಾನ ವಿದ್ಯಮಾನ. ಪೆಸಿಫಿಕ್ ಸಾಗರದ ಮಧ್ಯ ಮತ್ತು ಪೂರ್ವ ಭಾಗದಲ್ಲಿ (ವಿಶೇಷವಾಗಿ ಸಮಭಾಜಕ ವೃತ್ತದ ಬಳಿ) ಸಮುದ್ರದ ಮೇಲ್ಮೈ ಉಷ್ಣಾಂಶವು ವಾಡಿಕೆಗಿಂತ ಹೆಚ್ಚಾಗುವ ಪ್ರಕ್ರಿಯೆಗೆ 'ಎಲ್ ನಿನೋ' ಎನ್ನುತ್ತಾರೆ. ಉಷ್ಣಾಂಶದ ಏರಿಕೆಯು ಜಾಗತಿಕ ವಾಯುಭಾರ ಮತ್ತು ಮಾರುತಗಳ ದಿಕ್ಕನ್ನು ಬದಲಾಯಿಸುತ್ತದೆ. ವಿವಿಧ ಹವಾಮಾನ ವರದಿಗಳ ಪ್ರಕಾರ, 2026ರ ಮೇ ತಿಂಗಳಿನಿಂದ ಜುಲೈವರೆಗಿನ ಅವಧಿಯಲ್ಲಿ ಎಲ್ ನಿನೋ ಮರುಕಳಿಸುವ ಸಾಧ್ಯತೆ 82%ದಷ್ಟಿದೆ. ಇದು ಚಳಿಗಾಲದವರೆಗೂ ಅಂದರೆ 2026ರ ಅಂತ್ಯದವರೆಗೂ ಮುಂದುವರಿಯುವ ಅಂದಾಜಿದೆ.

ಎಲ್ ನಿನೋ ಸಕ್ರಿಯವಾದಾಗ, ಹಿಂದೂ ಮಹಾಸಾಗರದಿಂದ ಭಾರತದ ಉಪಖಂಡದತ್ತ ಬೀಸಬೇಕಾದ ತೇವಾಂಶಭರಿತ ಮಳೆ ಹೊತ್ತು ತರುವ ಮುಂಗಾರ ಮಾರುತಗಳು ದುರ್ಬಲಗೊಳ್ಳುತ್ತವೆ ಅಥವಾ ಸಾಗುವ ದಿಕ್ಕು ಬದಲಾಗಿ, ಈ ತೇವಾಂಶವು ಪೆಸಿಫಿಕ್ ಸಾಗರದತ್ತ ಆಕರ್ಷಿತವಾಗುತ್ತದೆ. ಹೀಗಾದಾಗ ಭಾರತದ ಆಗಸದಲ್ಲಿ ಮೋಡ ಉಂಟಾಗುವಿಕೆ, ಒಗ್ಗೂಡುವಿಕೆ, ಚಲನೆ ಮತ್ತು ಸಾಂದ್ರತೆ ಕಡಿಮೆಯಾಗಿ ಮಳೆ ಕಡಿಮೆಯಾಗಿ ನೀರಿನ ಅಭಾವ ಉಂಟಾಗುತ್ತದೆ. ಹೀಗಾದಾಗ ಮಳೆಗಾಲದ ನಡುವೆಯೂ ದೀರ್ಘಾವಧಿಯ ಬಿಸಿಲು ಮತ್ತು ಒಣ ಹವೆ ಉಂಟಾಗಿ, ಜೂನ್ ಮೊದಲೆರಡು ವಾರಗಳಲ್ಲಿ ಬಿತ್ತಿದ/ನೆಟ್ಟ ಬೆಳೆಗಳು ನೀರಿಲ್ಲದೆ ಒಣಗುವ ಜೊತೆಗೆ ಒಣಹವೆಯ ಪರಿಣಾಮದಿಂದಾಗಿ ಕೃಷಿ ಉತ್ಪನ್ನಗಳ ಉತ್ಪಾದನಾ ಪ್ರಮಾಣದ ಮೇಲೆ ಪ್ರಭಾವ ಬೀರುತ್ತದೆ. ದೇಶದಾದ್ಯಂತ ಬೆಳೆಸಲ್ಪಟ್ಟ ಆಹಾರ ಪದಾರ್ಥಗಳ ಪ್ರಮಾಣ ಕಡಿಮೆಯಾಗಿ ಕೊರತೆ ಪರಿಸ್ಥಿತಿ ಸೃಷ್ಟಿಯಾಗುತ್ತದೆ.

ಮಳೆ ಕೊರತೆಯ ಆತಂಕದ ಮಧ್ಯೆ, ರಸಗೊಬ್ಬರ ಪೂರೈಕೆಯ ಬಿಕ್ಕಟ್ಟು ಅಕ್ಷರಶಃ ಕೃಷಿಕರ ನಿದ್ದೆಗೆಡಿಸಿದೆ! 2026ರ ಫೆಬ್ರವರಿಯಿಂದ ಶುರುವಾದ ಅಮೆರಿಕಾ–ಇರಾನ್–ಇರಾಕ್ ಯುದ್ಧವು ಸಮಗ್ರ ಜಾಗತಿಕ ಪೂರೈಕೆ ಸರಪಳಿಯನ್ನು, ಮುಖ್ಯವಾಗಿ ರಸಗೊಬ್ಬರ ಪೂರೈಕೆ–ವಿತರಣೆಯನ್ನು ಅಸ್ತವ್ಯಸ್ತಗೊಳಿಸಿದೆ. ವಿಶ್ವದ ಮೂರನೇ ಒಂದರಷ್ಟು ರಸಗೊಬ್ಬರ ಮತ್ತು ನೈಸರ್ಗಿಕ ಅನಿಲ ಸಾಗಣೆಯಾಗುವ ಹಾರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚಾರಕ್ಕೆ ತೀವ್ರ ಅಡ್ಡಿಯಾಗಿದೆ. ಇದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಮತ್ತು ಕ್ಲುಪ್ತ ಸಮಯಕ್ಕೆ ರಸಗೊಬ್ಬರ ಭಾರತಕ್ಕೆ ಬರುತ್ತಿಲ್ಲ. ಭಾರತವು ತನ್ನ ದೇಶೀಯ ಯೂರಿಯಾ ಘಟಕಗಳನ್ನು ನಡೆಸಲು ಮಧ್ಯಪ್ರಾಚ್ಯ, ಅದರಲ್ಲೂ ಮುಖ್ಯವಾಗಿ ಕತಾರ್‌ನಿಂದ ದ್ರವೀಕೃತ ನೈಸರ್ಗಿಕ ಅನಿಲವನ್ನು ಬಹುವಾಗಿ ಅವಲಂಬಿಸಿದೆ. ಯುದ್ಧದ ಕಾರಣ ಅನಿಲ ಪೂರೈಕೆ ಅಸ್ತವ್ಯಸ್ತಗೊಂಡಿದ್ದರಿಂದ, 2026ರ ಮಾರ್ಚ್ ತಿಂಗಳಲ್ಲಿ ಭಾರತದ ರಸಗೊಬ್ಬರ ಉತ್ಪಾದನೆಯು 24.6%ದಷ್ಟು ಕುಸಿತ ಕಂಡಿದೆ.

ಇದೆಲ್ಲದರ ಜೊತೆಗೆ, 'ಗಾಯದ ಮೇಲೆ ಬರೆ ಎಳೆದಂತೆ' ಜಾಗತಿಕ ಮಾರುಕಟ್ಟೆಯಲ್ಲಿ ಯೂರಿಯಾ ಮತ್ತು ಡಿಎಪಿ ಬೆಲೆಗಳು 30%–40%ದಷ್ಟು ದಿಢೀರ್ ಏರಿಕೆಯಾಗಿವೆ. ಭಾರತ ಸರಕಾರ ವಿವಿಧ

ಸಬ್ಸಿಡಿಯನ್ನು 11%ದಷ್ಟು ಹೆಚ್ಚಿಸಿ, ಜಾಗತಿಕ ಟೆಂಡರ್ ಮೂಲಕ 13.5 ಲಕ್ಷ ಟನ್ ಯೂರಿಯಾ ಆಮದಿಗೆ ಮುಂದಾಗಿದೆಯಾದರೂ, ಮುಂಗಾರು ಬಿತ್ತನೆಯ ನಿರ್ಣಾಯಕ ಸಮಯದಲ್ಲಿ (ಜೂನ್–ಜುಲೈ) ಸ್ಥಳೀಯ ಮಟ್ಟದಲ್ಲಿ ರಸಗೊಬ್ಬರದ ಕೊರತೆ ರೈತರನ್ನು ಕಾಡುವ ಆತಂಕವಿದೆ. ಕೃತಕ ಅಭಾವ ಸೃಷ್ಟಿಯಾಗಿ ಕಳ್ಳ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುವ ಅಪಾಯವೂ ಇದೆ. ಇದು ರೈತನ ಜೇಬಿನ ಮೇಲೆ ನೇರ ಪರಿಣಾಮ ಬೀರಲಿದೆ ಮತ್ತು ಕೃಷಿ ಉತ್ಪಾದನಾ ವೆಚ್ಚ ಹೆಚ್ಚಲಿದೆ. ಒಟ್ಟಾರೆ ಕೃಷಿ ಉತ್ಪಾದನೆ, ಆಹಾರ ದರಗಳು ಮತ್ತು ಗ್ರಾಮೀಣ ಆರ್ಥಿಕತೆಯ ಮೇಲೆ ದೊಡ್ಡ ಪರಿಣಾಮ ಬೀರಲಿದೆ.

ಹವಾಮಾನದ ಪ್ರತಿಕೂಲತೆ ಹಾಗೂ ರಸಗೊಬ್ಬರ ಮುಂತಾದ ಕೃಷಿ ಪರಿಕರಗಳ ಕೊರತೆಯು ಭಾರತದ ಮತ್ತು ವಿಶೇಷವಾಗಿ ಕರ್ನಾಟಕದ ಕೃಷಿ ವಲಯವನ್ನು ತೀವ್ರ ಸಂಕಷ್ಟಕ್ಕೆ ನೂಕುವ ಲಕ್ಷಣಗಳಿವೆ! ಭತ್ತ, ಮೆಕ್ಕೆಜೋಳ, ಹತ್ತಿ, ಸೋಯಾಬೀನ್, ಕಬ್ಬು, ರಾಗಿ ಮತ್ತು ತೊಗರಿಯಂತಹ ಪ್ರಮುಖ ವಾಣಿಜ್ಯ ಹಾಗೂ ಆಹಾರ ಬೆಳೆಗಳಿಗೆ ಆರಂಭಿಕ ಹಂತದಲ್ಲಿಯೇ ನೀರಿನ ಕೊರತೆ ಮತ್ತು ಪೋಷಕಾಂಶಗಳ ಅಭಾವ ಎಲ್ ನಿನೋದಿಂದಾಗಿ ಎದುರಾಗಲಿದೆ. ಸಕಾಲದಲ್ಲಿ ಮಳೆಯಾಗದೆ ಬಿತ್ತನೆ ವಿಳಂಬವಾದರೆ, ಕಟಾವಿನ ಸಮಯದಲ್ಲಿ ಹವಾಮಾನ ವೈಪರೀತ್ಯ ಇನ್ನಷ್ಟು ಆದಾಗ ಇಳುವರಿ ಗಣನೀಯವಾಗಿ ಕುಸಿಯುತ್ತದೆ. ಸಕಾಲದಲ್ಲಿ ರಸಗೊಬ್ಬರದ ಅಲಭ್ಯತೆಯು ಬೆಳೆಯ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಇದರಿಂದ ಒಟ್ಟಾರೆ ಉತ್ಪಾದನಾ ವೆಚ್ಚ ಹೆಚ್ಚಾಗಿ, ರೈತರ ಕೈಗೆ ಬರುವ ನಿವ್ವಳ ಮೊತ್ತ ತೀವ್ರ ಕಡಿಮೆಯಾಗುತ್ತದೆ. ವಾಡಿಕೆಗಿಂತ ಕಡಿಮೆ ಮಳೆಯಾದರೆ ಕೆರೆ–ಕಟ್ಟೆಗಳು ತುಂಬುವುದಿಲ್ಲ ಹಾಗೂ ಅಂತರ್ಜಲ ಮರುಪೂರಣವಾಗುವುದಿಲ್ಲ. ಇದು ಕೊಳವೆಬಾವಿ ಆಶ್ರಯಿಸಿ ಅಡಿಕೆ, ತೆಂಗು, ಬಾಳೆ ಮುಂತಾದ ಕೃಷಿ ಮಾಡುವ ರೈತರಿಗೂ ಮುಂದಿನ ಬೇಸಿಗೆಯ ಸಂದರ್ಭದಲ್ಲಿ ನೀರಿನ ಕೊರತೆಯನ್ನು ತಂದೊಡ್ಡುತ್ತದೆ. ಮಳೆ ಕಡಿಮೆಯಾಗಿ ಕೃಷಿ ಉತ್ಪನ್ನಗಳ ಬೆಳೆ ಕುಂಠಿತವಾದಾಗ ಜಾನುವಾರುಗಳಿಗೆ ಮೇವಿನ ಕೊರತೆಯೂ ಉಂಟಾಗಲಿದೆ.

ಈ ಉಭಯ ಸಂಕಟವನ್ನು ಎದುರಿಸಲು ಸಾಂಪ್ರದಾಯಿಕ ಹಾಗೂ ಈಗಿನ ಪ್ರಕಾರದ ವ್ಯವಸಾಯ ಪದ್ಧತಿಯನ್ನು ಬದಿಗಿಟ್ಟು, ವೈಜ್ಞಾನಿಕ, ಹವಾಮಾನ ಆಧಾರಿತ ಮತ್ತು ಸಂಪನ್ಮೂಲ–ಮಿತವ್ಯಯದ ಕೃಷಿಯನ್ನು ಅಳವಡಿಸಿಕೊಳ್ಳುವುದು ಕೃಷಿಕರಿಗೆ ಅನಿವಾರ್ಯವಾಗಿದೆ. ಕೃಷಿಕರು ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವ್ಯವಸಾಯ ಮಾಡಬೇಕಾದುದು ಇಂದಿನ ತುರ್ತು.

1. ಜೂನ್ ಬಂತೆಂದು ಮೊದಲ ಮಳೆ ಅಥವಾ ಮುಂಗಾರು ಪೂರ್ವ ಮಳೆಗೆ ಅವಸರದಲ್ಲಿ ಬಿತ್ತನೆ ಮಾಡುವ ತರಾತುರಿ ಖಂಡಿತಾ ಬೇಡ. ಮಣ್ಣಿನಲ್ಲಿ ಸಾಕಷ್ಟು ತೇವಾಂಶ ಹಿಡಿದಿಟ್ಟುಕೊಳ್ಳುವ ವಾತಾವರಣ ನಿರ್ಮಾಣವಾದ ನಂತರ, ಅಂದರೆ ಮುಂಗಾರು ಮಳೆ ಸ್ಥಿರವಾದ ಮೇಲೆ ಬಿತ್ತನೆ ಕಾರ್ಯ ಆರಂಭಿಸುವುದು ಸೂಕ್ತ.

2. ಭತ್ತ, ಕಬ್ಬು ಮುಂತಾದ ದೀರ್ಘಾವಧಿಯ, ಹೆಚ್ಚು ನೀರು ಬೇಡುವ ಬೆಳೆಗಳ ಬದಲು, ಕಡಿಮೆ ಅವಧಿಗೆ ಕಟಾವಿಗೆ ಬರುವ, ನೀರು ಮತ್ತು ಗೊಬ್ಬರ ಮಿತವಾಗಿ ಬೇಡುವ ಬೆಳೆ/ತಳಿ ಆಯ್ಕೆ ಮಾಡುವುದು ಸಮಂಜಸ. ನೀರಿನ ಅಭಾವವನ್ನು ಸಮರ್ಥವಾಗಿ ಎದುರಿಸುವ ಸಿರಿಧಾನ್ಯಗಳು (ರಾಗಿ, ಸಜ್ಜೆ, ನವಣೆ), ಜೋಳ, ಅಲಸಂದೆ, ಹೆಸರು ಕಾಳು ಮುಂತಾದ ದ್ವಿದಳ ಧಾನ್ಯಗಳಿಗೆ ಆದ್ಯತೆ ನೀಡಬಹುದು. ಇವುಗಳಿಗೆ ರಸಗೊಬ್ಬರವೂ ಕಡಿಮೆ ಸಾಕು.

3. ರಸಗೊಬ್ಬರದ ಕೊರತೆಯಿದೆ ಎಂದು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಬೇಡ. ಇದು ನಷ್ಟದ ಲಾಗಾಯ್ತು.

4. ರಾಸಾಯನಿಕ ಯೂರಿಯಾಕ್ಕೆ ಪರ್ಯಾಯವಾಗಿ, ದ್ರವರೂಪದ 'ನ್ಯಾನೋ ಯೂರಿಯಾ', 'ನ್ಯಾನೋ ಡಿಎಪಿ' ಮುಂತಾದವುಗಳ ಬಳಕೆ ಸೂಕ್ತ. ಇವುಗಳ ಸಾಗಾಣಿಕೆ ಸುಲಭ ಹಾಗೂ ಬೆಳೆಗಳು ಇವುಗಳನ್ನು ಶೀಘ್ರವಾಗಿ ಹೀರಿಕೊಳ್ಳುತ್ತವೆ.

5. ಮಣ್ಣು ಪರೀಕ್ಷೆ ಮಾಡಿಸಿ, ಜಮೀನಿಗೆ ಎಷ್ಟು ಅಗತ್ಯವಿದೆಯೋ ಅಷ್ಟು ಮಾತ್ರ ರಾಸಾಯನಿಕ ಗೊಬ್ಬರಗಳನ್ನು ಕೊಡಬೇಕು. ರಸಗೊಬ್ಬರವನ್ನು ಮೇಲ್ಮೈಗೆ ಎರಚುವ ಬದಲು, ಗಿಡದ ಬೇರುಗಳಿಗೆ ಸೇರಿಸುವ ಪದ್ಧತಿ ಸೂಕ್ತ.

6. ಸಾವಯವ ಕೃಷಿಗೆ ಒತ್ತು ಕೊಡಬೇಕು. ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ ಮತ್ತು ಹಸಿರೆಲೆ ಗೊಬ್ಬರವನ್ನು ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆ ಮತ್ತು ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ.

7. ಬೆಳೆಗಳ ಸಾಲುಗಳ ನಡುವೆ ಕೃಷಿ ತ್ಯಾಜ್ಯಗಳಿಂದ ಹೊದಿಕೆ (ಮಲ್ಚಿಂಗ್) ನಿರ್ಮಿಸಿದರೆ ಬಿಸಿಲ ಬೇಗೆಯಿಂದ ಮಣ್ಣಿನ ತೇವಾಂಶ ಆವಿಯಾಗುವುದನ್ನು ಗಣನೀಯವಾಗಿ ತಡೆಯುತ್ತದೆ.

8. ತೆರೆದ ಕಾಲುವೆಗಳ ಮೂಲಕ ನೀರು ಹಾಯಿಸುವುದನ್ನು ನಿಲ್ಲಿಸಿ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಬಳಕೆ ಕಡ್ಡಾಯ ಮಾಡಬೇಕು. ಬೀಳುವ ಪ್ರತಿಯೊಂದು ಹನಿ ಮಳೆನೀರನ್ನೂ ಇಂಗಿಸಲು ಕೃಷಿ ಹೊಂಡ, ಬದು ನಿರ್ಮಾಣ ಮತ್ತು ಕಂದಕಗಳ ನಿರ್ಮಾಣ ನೀರು ಹಿಡಿದಿಟ್ಟುಕೊಳ್ಳಲು ಸಹಕಾರಿ.

9. ಮಳೆ ಮತ್ತು ಹವಾಮಾನದ ಅನಿಶ್ಚಿತತೆ ಇರುವುದರಿಂದ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ರಾಜ್ಯ ಸರಕಾರದ ಬೆಳೆ ವಿಮೆ ಯೋಜನೆಗಳಡಿ ನೋಂದಣಿ ಭವಿಷ್ಯದಲ್ಲಿ ಸಹಕಾರಿ. ಬೆಳೆ ವಿಫಲವಾದರೆ ಇದು ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ.

10. ಕೃಷಿ ಪರಿಕರಗಳಿಗಾಗಿ ಹೆಚ್ಚಿನ ಬಡ್ಡಿ ದರದಲ್ಲಿ ಖಾಸಗಿ ಸಾಲ ಮಾಡುವುದನ್ನು ಆದಷ್ಟು ತಪ್ಪಿಸುವುದರ ಜೊತೆಗೆ ಸರ್ಕಾರಿ ಅಥವಾ ಸಹಕಾರ ಸಂಘಗಳ ನೆರವು ಪಡೆಯಬೇಕು.

2026ರ ಮುಂಗಾರು ದೇಶದ ಕೃಷಿಕರ ಪಾಲಿಗೆ ನಿಜವಾದ ಅಗ್ನಿಪರೀಕ್ಷೆ! ಎಲ್ ನಿನೋ ಸೃಷ್ಟಿಸುತ್ತಿರುವ ಜಲಕ್ಷಾಮ ಹಾಗೂ ಅಂತಾರಾಷ್ಟ್ರೀಯ ಬಿಕ್ಕಟ್ಟುಗಳು ತಂದೊಡ್ಡಿರುವ ರಸಗೊಬ್ಬರ ಅಭಾವ – ಈ ಎರಡೂ ಸವಾಲುಗಳು ರೈತರ ಸಂಯಮ ಮತ್ತು ಕೃಷಿ ಅನುಭವವನ್ನು ಒರೆಗೆ ಹಚ್ಚಲಿವೆ. ಪ್ರಕೃತಿಯನ್ನು ನಿಯಂತ್ರಿಸಲು ಸಾಧ್ಯವಿಲ್ಲ! ನಮ್ಮ ಕೃಷಿ ಪದ್ಧತಿಯಲ್ಲಿ ಈ ಮೇಲಿನ ಬದಲಾವಣೆಗಳನ್ನು ಮಾಡಿಕೊಂಡರೆ ಆಗಲಿರುವ ನಷ್ಟ–ವೆಚ್ಚವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬಹುದು. ತಂತ್ರಜ್ಞಾನ ಆಧಾರಿತ ಕೃಷಿ, ನೀರು–ಗೊಬ್ಬರದ ಮಿತಬಳಕೆ, ಸರ್ಕಾರದ ಬೆಂಬಲ ವ್ಯವಸ್ಥೆಗಳ ಸಮರ್ಪಕ ಬಳಕೆ ಮಾತ್ರ ಈ ಬಿಕ್ಕಟ್ಟಿನಿಂದ ಕೃಷಿ ವಲಯವನ್ನು ಪಾರುಮಾಡಬಲ್ಲ ಅಸ್ತ್ರಗಳಾಗಿವೆ. ಎಲ್ಲಾ ಏರಿಳಿತಗಳ ನಡುವೆಯೂ 'ಕೃಷಿಯಲ್ಲಿ ಖುಷಿ' ಕಾಣುವ ಕೋಟ್ಯಂತರ ಕೃಷಿಕರ ಬಾಳು ಇನ್ನಷ್ಟು–ಮತ್ತಷ್ಟು ಹಸನಾಗಲಿ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂದರೆ 'ಕೃಷಿಯನ್ನು ನಂಬಿದವರಿಗೆ ಎಂದಿಗೂ ಬರಗಾಲವಿಲ್ಲ' ಎನ್ನುವ ಮಾತು ನಿಜವಾಗಲಿ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 318

ಸಮಾಚಾರ ಸಣ್ಣದಲ್ಲ

ಖಾಸಗಿ ಶಾಲೆ ಶುಲ್ಕ ಫಲಕದಲ್ಲಿ ಪ್ರಕಟಣೆ

ಚೆನ್ನೈ: ತಮಿಳುನಾಡಿನಲ್ಲಿ 13 ಸಾವಿರಕ್ಕೂ ಹೆಚ್ಚು ಮಾನ್ಯತೆ ಪಡೆದ ಖಾಸಗಿ ಶಾಲೆಗಳಿದ್ದು, ರಾಜ್ಯ ಸರಕಾರ ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚು ಶುಲ್ಕವನ್ನು ವಸೂಲಿ ಮಾಡುತ್ತಿರುವ ಬಗ್ಗೆ ಹೆಚ್ಚು ದೂರುಗಳು ಬಂದ ಹಿನ್ನೆಲೆ ತಮಿಳುನಾಡು ಸರಕಾರ ಮಹತ್ವದ ಆದೇಶ ಹೊರಡಿಸಿದೆ. ರಾಜ್ಯದ ಎಲ್ಲಾ ಖಾಸಗಿ ಶಾಲೆಗಳು ಸರಕಾರ ನಿಗದಿಪಡಿಸಿದ ಬೋಧನಾ ಮತ್ತಿತರ ಶುಲ್ಕದ ವಿವರವನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು ಕಡ್ಡಾಯ. ಹೆಚ್ಚಿನ ಶುಲ್ಕ ವಸೂಲಿ ಮಾಡಿದ ಶಾಲೆಗಳ ಮಾನ್ಯತೆ ರದ್ದುಗೊಳಿಸಲಾಗುವುದು ಎಂದು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ತಮಿಳುನಾಡು ಶಾಲೆಗಳ ಶುಲ್ಕ ನಿಯಂತ್ರಣ ತಿದ್ದುಪಡಿ ಕಾಯಿದೆಯಡಿ ಜಾರಿಯಲ್ಲಿರುವ ನಿಯಮಗಳ ರೀತ್ಯ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು-ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ಖಾಸಗಿ ಶಾಲೆಗಳ ಶುಲ್ಕ ನಿಗದಿಪಡಿಸುತ್ತದೆ ಎಂದು ಸರಕಾರ ತಿಳಿಸಿದೆ.

ತೃಣಮೂಲ ಸಂಸದ ಕಲ್ಯಾಣ್ ಮೇಲೆ ಹಲ್ಲೆ

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದ ಹೂಗ್ಲಿ ಜಿಲ್ಲೆಯ ಚಂಡಿತಾಲ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸುತ್ತಿದ್ದಾಗ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರ ಮೇಲೆ ಹಲ್ಲೆಯಾಗಿದೆ ಎಂದು ಟಿಎಂಸಿ ಭಾನುವಾರ ಆರೋಪಿಸಿದೆ. ಬಿಜೆಪಿ ಬೆಂಬಲಿಗರು ನನ್ನ ಮೇಲೆ ಪೊಲೀಸರ ಎದುರಲ್ಲೇ ಹಲ್ಲೆ ನಡೆಸಿದ್ದು, ತಲೆಗೆ ಗಾಯವಾಗಿದೆ ಎಂದು ಕಲ್ಯಾಣ್ ಬ್ಯಾನರ್ಜಿ ಆರೋಪಿಸಿದ್ದಾರೆ. ಚುನಾವಣೆ ಬಳಿಕ ಟಿಎಂಸಿ ಕಾರ್ಯಕರ್ತರನ್ನು ಬಂಧಿಸಲಾಗುತ್ತಿದೆ ಎಂದು ಆರೋಪಿಸಿ ದೂರು ಸಲ್ಲಿಸಲು ಸಂಸದ ಕಲ್ಯಾಣ್ ಬ್ಯಾನರ್ಜಿ ನೇತೃತ್ವದ ತಂಡ ಚಂಡಿತಾಲ ಪೊಲೀಸ್ ಠಾಣೆಗೆ ತೆರಳಿತ್ತು. ಆಗ ಸ್ಥಳೀಯರು ಕಲ್ಯಾಣ್ ಬ್ಯಾನರ್ಜಿ ಅವರಿಗೆ ಕಪ್ಪು ಬಾವುಟ ತೋರಿಸಿ 'ಟಿಎಂಸಿ ಕಳ್ಳರು' ಎಂದು ಘೋಷಣೆ ಕೂಗಿದ್ದಾರೆ. ರಾಜ್ಯದ ಜನರು ಟಿಎಂಸಿ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಬಿಜೆಪಿ ಹೇಳಿದೆ.

ಬಾಹ್ಯಾಕಾಶ, ಸೈಬರ್ ಒಳಗೊಂಡ ಯುದ್ಧ

ಪುಣೆ: ಮುಂದಿನ ದಿನಗಳಲ್ಲಿ ಯುದ್ಧಗಳು ನಡೆದರೆ ಅವು ಭೂಮಿಯ ಮೇಲಿನ ಸೇನಾಪಡೆ, ನೌಕಾಪಡೆ, ವಾಯುಪಡೆಗಳಿಗಷ್ಟೇ ಸೀಮಿತವಾಗಿ ಇರುವುದಿಲ್ಲ. ಅವುಗಳನ್ನೂ ಮೀರಿದ ಅತ್ಯಾಧುನಿಕ-ತಂತ್ರಜ್ಞಾನ ಆಧರಿತ ಸಮರವಾಗಿರುತ್ತದೆ. ಬಾಹ್ಯಾಕಾಶ, ಸೈಬರ್ ಲೋಕವನ್ನೂ ಆವರಿಸಿಕೊಂಡಿರುತ್ತದೆ ಎಂದು ಭಾರತೀಯ ಸೇನಾಪಡೆಯ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ. ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ)ಯಲ್ಲಿ ವ್ಯಾಸಂಗ ಮುಗಿಸಿದ 150ನೇ ಬ್ಯಾಚ್‌ನ ನಿರ್ಗಮನ ಪಥಸಂಚಲನದಲ್ಲಿ ಭಾಗಿಯಾಗಿದ್ದ ಜನರಲ್ ದ್ವಿವೇದಿ, ಬಳಿಕ ಸುದ್ದಿಗೋಷ್ಠಿ ನಡೆಸಿದರು. ಭಾರತದ ಮೂರೂ ಸಶಸ್ತ್ರ ಪಡೆಗಳು ಸದಾ ಕಾಲವೂ ಸನ್ನದ್ಧ ಸ್ಥಿತಿಯಲ್ಲೇ ಇರುತ್ತವೆ ಎಂದು ಹೇಳಿದರು.

ಪೆಟ್ರೋಲ್-ಡೀಸೆಲ್ ರಫ್ತು ಸುಂಕ ಇಳಿಕೆ

ದೆಹಲಿ: ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಫ್ತು ಸುಂಕವನ್ನು ಕೇಂದ್ರದ ಹಣಕಾಸು ಸಚಿವಾಲಯ ಭಾನುವಾರ ಕಡಿಮೆ ಮಾಡಿದ್ದು, ಆದೇಶ ಜೂ.1ರಿಂದ ಜಾರಿಗೊಳ್ಳಲಿದೆ. ಪೆಟ್ರೋಲ್ ರಫ್ತು ಸುಂಕ 3 ರು.ನಿಂದ 1.50 ರು.ಗೆ ಮತ್ತು ಡೀಸೆಲ್ ರಫ್ತು ಸುಂಕವನ್ನು 16.50 ರು.ನಿಂದ 13.50 ರು.ಗೆ ಇಳಿಸಲಾಗಿದೆ. 16 ರು. ಗಳಷ್ಟಿದ್ದ ಏರ್ ಟರ್ಬೈನ್ ಫ್ಯೂಯೆಲ್(ಎಟಿಎಫ್-ವಿಮಾನದ ಇಂಧನ) ರಫ್ತು ಸುಂಕವನ್ನು 9.50 ರು.ಗೆ ತಗ್ಗಿಸಲಾಗಿದೆ.

ವಿದ್ಯಾರ್ಥಿನಿಯರಿಗೆ 3 ದಿನ ಮಾಸಿಕ ರಜೆ

ತಿರುವನಂಪುರಂ: ಶಾಲಾ ವಿದ್ಯಾರ್ಥಿನಿಯರ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಕೇರಳಂ ರಾಜ್ಯ ಸರಕಾರ ಪ್ರತಿ ತಿಂಗಳು 3 ದಿನ(ಮುಟ್ಟಿನ) ರಜೆ ಜಾರಿಗೊಳಿಸಲು ಮುಂದಾಗಿದೆ. ಶಾಲಾ ವಿದ್ಯಾರ್ಥಿನಿಯರು ಋತುಸ್ರಾವದ 3 ದಿನ ತರಗತಿಯಲ್ಲಿ ಪಠ್ಯ ಚಟುವಟಿಕೆಗಳತ್ತ ಗಮನ ಹರಿಸುವುದು ಕಷ್ಟ. ಅವರಿಗೆ ಆ ಮೂರು ದಿನಗಳೂ ತೀವ್ರ ಹೊಟ್ಟೆನೋವು, ಆಯಾಸ, ಬೆನ್ನುನೋವು ಮತ್ತು ಮಾನಸಿಕ ಒತ್ತಡವಿರುತ್ತದೆ. ಹಾಗಾಗಿ ವಿದ್ಯಾರ್ಥಿನಿಯರಿಗೆ 3 ದಿನಗಳ ಮಾಸಿಕ ರಜೆ ನೀಡಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

{ **ರಾಹುಲ್ ಗಾಂಧಿ** } ಕಾಂಗ್ರೆಸ್ ಸಂಸದ

ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಯ 'ಆನ್ ಸ್ಕ್ರೀನ್ ಮಾರ್ಕಿಂಗ್'(ಒಎಸ್‌ಎಂ) ಡಿಜಿಟಲ್ ಮೌಲ್ಯಮಾಪನ ಪರಿಶೀಲನಾ ವ್ಯವಸ್ಥೆಯಲ್ಲಿ ಭಾರೀ ಲೋಪಗಳಿವೆ. ಕಡಿಮೆ ಅಂಕ ಬಂದ ಬಗ್ಗೆ ಪರಿಶೀಲನೆಗೆ ಮುಂದಾದ ವಿದ್ಯಾರ್ಥಿಗಳಿಗೆ ಬೇರೆಯವರ ಉತ್ತರ ಪತ್ರಿಕೆ ಕೊಡಲಾಗಿದೆ. ಸ್ಕ್ಯಾನ್ ಪ್ರತಿ ಓದಲಾಗದಷ್ಟು ಬ್ಲರ್ ಆಗಿದೆ. ಹಗರಣದಲ್ಲಿ ನ್ಯಾಯಾಂಗ ತನಿಖೆ ಅಗತ್ಯವಿದೆ.

ಸೇನಾಪಡೆಯಲ್ಲಿ 40 ವರ್ಷ ಅನುಭವ | 'ಮಿಲಿಟರಿ ಥಿಯೇಟರೈಸೇಷನ್' ಯೋಜನೆ ಜಾರಿ ಹೊಣೆ

ಭಾರತದ 3ನೇ ಸಿಡಿಎಸ್ ಜ.ರಾಜಾ ಸುಬ್ರಮಣಿ

ದೆಹಲಿ: ಜನರಲ್ ಎನ್.ಎಸ್.ರಾಜಾ ಸುಬ್ರಮಣಿ ಅವರು ಭಾರತದ ಸರ್ವ ಸಶಸ್ತ್ರ ಪಡೆಗಳ 3ನೆಯ 'ಚೀಫ್ ಆಫ್ ಡಿಫೆನ್ಸ್ ಸ್ಟಾಫ್' ಆಗಿ ಭಾನುವಾರ ಅಧಿಕಾರ ಸ್ವೀಕರಿಸಿದರು. ಈವರೆಗೆ 2ನೇ 'ಸಿಡಿಎಸ್' ಆಗಿದ್ದ ಜನರಲ್ ಅನಿಲ್ ಚೌಹಾಣ್ ಅವರು ಮೇ 30ರ ಸಂಜೆ ನಿವೃತ್ತರಾದರು.

ಪಾಕಿಸ್ತಾನ ಮತ್ತು ಚೀನಾದ ಗಡಿ ಮತ್ತು ಸಶಸ್ತ್ರ ಪಡೆಗಳ ವಿಚಾರಗಳಲ್ಲಿ ತಜ್ಞರಾಗಿರುವ ಜನರಲ್ ರಾಜಾ ಸುಬ್ರಮಣಿ ಅವರು ಇದಕ್ಕೆ ಮುನ್ನ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಸೆಕ್ರೆಟರಿಯೇಟ್ (ಎನ್‌ಎಸ್‌ಸಿಎಸ್)ನಲ್ಲಿ ಮಿಲಿಟರಿ ಅಡ್ವೈಸರ್ (ಸೇನಾ ಸಲಹೆಗಾರ) ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅದಕ್ಕೆ ಮುನ್ನ ಅವರು ಸೆಂಟ್ರಲ್ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿ 2023ರಿಂದ 2024ರ ಜೂನ್ 39ರವರೆಗೆ ಸೇವೆ ಸಲ್ಲಿಸಿದ್ದಾರೆ. ಬಳಿಕ 2024ರ ಜುಲೈ 1ರಿಂದ 2025ರ ಜುಲೈ31ರವರೆಗೆ ಭಾರತೀಯ ಸೇನಾಪಡೆಯ ಸಿಬ್ಬಂದಿ ವಿಭಾಗದ ಉಪ ಮುಖ್ಯಸ್ಥರಾಗಿದ್ದರು.

ಈಗ ಹೊಸ ಹುದ್ದೆಯಲ್ಲಿ ಜನರಲ್ ರಾಜಾ ಸುಬ್ರಮಣಿ ಅವರು ಸಮಗ್ರ ಮಿಲಿಟರಿ ಕಮಾಂಡ್‌ಗಳನ್ನು ಜಾರಿಗೆ ತರುವ ಮೂಲಕ ಕೇಂದ್ರ ಸರಕಾರದ ಮಹತ್ವದ ಯೋಜನೆಯಾದ 'ಮಿಲಿಟರಿ ಥಿಯೇಟರೈಸೇಷನ್' ಮಾದರಿಯನ್ನು ಸಮಗ್ರ ಸಶಸ್ತ್ರ ಪಡೆಗಳಲ್ಲಿ ಅನುಷ್ಠಾನಗೊಳಿಸಬೇಕಿದೆ. ಈ ಮಹತ್ವದ ಹೊಣೆ ನೂತನ ಸಿಡಿಎಸ್ ಜನರಲ್ ರಾಜಾ ಸುಬ್ರಮಣಿ ಅವರದ್ದಾಗಿದೆ.

ಸೇನಾಪಡೆಯ ವಿವಿಧ ವಿಭಾಗಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಳೆದ 4 ದಶಕಗಳಿಂದ ಸೇವೆ ಸಲ್ಲಿಸಿರುವ ಜನರಲ್ ರಾಜಾ ಸುಬ್ರಮಣಿ ಅವರು ಭಾರತೀಯ ಸಶಸ್ತ್ರ ಪಡೆಗಳ ಬಗ್ಗೆ ಅಪಾರವಾದ ಅರಿವು ಹೊಂದಿದ್ದಾರೆ. ಅವರ ಅನುಭವ ಬಲು ವಿಸ್ತಾರವಾದುದಾಗಿದೆ.

ಜನನ-ಶಿಕ್ಷಣ-ನೌಕರಿ

1965ರ ಜುಲೈ 21ರಂದು ಜನಿಸಿರುವ ಜನರಲ್ ರಾಜಾ ಸುಬ್ರಮಣಿ ಅವರು ಪ್ರಾಥಮಿಕ-ಪ್ರೌಢ ಶಿಕ್ಷಣದ ಬಳಿಕ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಸೇರಿ ಶಿಕ್ಷಣ ಮುಂದುವರಿಸಿದರು. ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ 77ನೇ ಬ್ಯಾಚ್‌ನಲ್ಲಿ ವ್ಯಾಸಂಗ ಮಾಡಿದರು. ಯುನೈಟೆಡ್ ಕಿಂಗ್ಡಂನ ಬ್ರ್ಯಾಕ್‌ನೆಲ್‌ನಲ್ಲಿರುವ ಜಾಯಿಂಟ್ ಸರ್ವಿಸಸ್ ಕಮಾಂಡ್ ಸ್ಟಾಫ್ ಕಾಲೇಜ್‌ನಲ್ಲಿಯೂ ಶಿಕ್ಷಣ ಪಡೆದಿದ್ದಾರೆ. ಬಳಿಕ ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಪದವಿ, ಬಳಿಕ ಲಂಡನ್ ವಿವಿಯಲ್ಲಿ ಎಂಎ ಪದವಿ ಗಳಿಸಿದ್ದಾರೆ. ಬಳಿಕ 1985 ಡಿಸೆಂಬರ್ 14ರಂದು ಭಾರತೀಯ ಸೇನೆಗೆ ಸೇರಿ ಗಢವಾಲ್ ರೈಫಲ್ಸ್ ವಿಭಾಗದ 8ನೇ ಬೆಟಾಲಿಯನ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಶ್ರೇಣಿಯಲ್ಲಿ ಸೈನಿಕ ಸೇವೆ ಆರಂಭಿಸಿ, ಇಲ್ಲಿಯವರೆಗೆ ಸೇನಾ ಸಮವಸ್ತ್ರದಲ್ಲಿ ಒಟ್ಟು 40 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕಜಕಸ್ತಾನದಲ್ಲಿಯೂ ಕೆಲ ಕಾಲ ಭಾರತೀಯ ಸೇನೆಯ(ಡಿಫೆನ್ಸ್ ಅಟ್ಯಾಚ್) ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದಾರೆ. ಮಿಲಿಟರಿ ಇಂಟೆಲಿಜೆನ್ಸ್ ವಿಭಾಗದ ಉಪ ಮಹಾ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ ಅನುಭವವಿದೆ.

ಪದಕಗಳ ಪುರಸ್ಕಾರ: ಭವಿಷ್ಯದ ಜವಾಬ್ದಾರಿ

ಜನರಲ್ ರಾಜಾ ಸುಬ್ರಮಣಿ ಅವರು ಜನರಲ್ ಆಫೀಸರ್ ಸೇವಾ ಅವಧಿಯಲ್ಲಿ 2024ರಲ್ಲಿ ಪರಮ ವಿಶಿಷ್ಟ ಸೇವಾ ಪದಕ ಮತ್ತು 2020ರಲ್ಲಿ ಅತಿ ವಿಶಿಷ್ಟ ಸೇವಾ ಪದಕ ಹಾಗೂ 2015ರಲ್ಲಿ ವಿಶಿಷ್ಟ ಸೇವಾ ಪದಕ ಮತ್ತು 2005ರಲ್ಲಿ ಸೇನಾ ಮೆಡಲ್ ಪಡೆದಿದ್ದಾರೆ. ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಜನರಲ್ ರಾಜಾ ಸುಬ್ರಮಣಿ, ದೇಶದ ಮೂರೂ ಸೇನಾಪಡೆಗಳಲ್ಲಿ ಸಮನ್ವಯ, ಏಕೀಕೃತ ಸೇನಾ ಕಮಾಂಡ್ ವ್ಯವಸ್ಥೆ ಹಾಗೂ ರಕ್ಷಣಾ ಪಡೆಗಳ ಆಧುನೀಕರಣಕ್ಕೆ ವೇಗ ನೀಡುವುದು ತಮ್ಮ ಪ್ರಮುಖ ಗುರಿಯಾಗಿದೆ. ಸೇನಾ ಸಂಘಟನೆಗಳಲ್ಲಿ ಸುಧಾರಣೆ, ಸಶಸ್ತ್ರ ಪಡೆಗಳ ಪರಿವರ್ತನೆ ಹಾಗೂ ಮೂರು ಸೇನೆಗಳ ನಡುವೆ ಹೆಚ್ಚಿನ ಸಮನ್ವಯತೆ ಸಾಧಿಸುವುದು ಮೊದಲ ಆದ್ಯತೆಯಾಗಿದೆ. ದೇಶೀ ಶಸ್ತ್ರಾಸ್ತ್ರಗಳ ಅಭಿವೃದ್ಧಿ, ಸೇನಾಪಡೆಗಳಲ್ಲಿ ಅವುಗಳ ಸಮಗ್ರ ಬಳಕೆಗೆ ವೇಗ ನೀಡಲಾಗುವುದು. ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಅನುಗುಣವಾಗಿ ರಕ್ಷಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲಾಗುವುದು ಎಂದು ಹೇಳಿದ್ದಾರೆ.

ಬೆಂಗಳೂರಲ್ಲಿ ಓದಿ-ಬೆಳೆದ ಕೃಷ್ಣ ಸ್ವಾಮಿನಾಥನ್ ನೌಕಾಪಡೆ ಮುಖ್ಯಸ್ಥ

ದೆಹಲಿ: ಭಾರತೀಯ ನೌಕಾಪಡೆಯ 27ನೇ ಮುಖ್ಯಸ್ಥರಾಗಿ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದ್ದಾರೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಬೆಂಗಳೂರಿನ ಬಸವನಗುಡಿಯಲ್ಲಿ ಬೆಳೆದವರು.

ಎನ್‌ಆರ್ ಕಾಲೋನಿಯಲ್ಲಿ ನೆಲೆಸಿದ್ದ ಕೃಷ್ಣ ಸ್ವಾಮಿನಾಥನ್, ಬಿಷಪ್ ಕಾಟನ್ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ. ನಂತರ ಉತ್ತರ ಕರ್ನಾಟಕದ ವಿಜಯಪುರದಲ್ಲಿನ ಸೈನಿಕ ಶಾಲೆಯಲ್ಲಿ ಶಿಕ್ಷಣ ಪಡೆದವರು ಎಂಬುದು ಗಮನಾರ್ಹ. ಆ ನಂತರದಲ್ಲಿ ರಾಷ್ಟ್ರೀಯ ರಕ್ಷಣಾ ಅಕಾಡೆಮಿ(ಎನ್‌ಡಿಎ) ಪ್ರವೇಶ ಪರೀಕ್ಷೆಯಲ್ಲಿ ಮೊದಲ ಯತ್ನದಲ್ಲೇ ತೇರ್ಗಡೆ ಹೊಂದಿ ವ್ಯಾಸಂಗ ಮುಗಿಸಿ 1987ರಲ್ಲಿ 19ನೇ ವಯಸ್ಸಿನಲ್ಲೇ ನೌಕಾಪಡೆ ಸೇರಿದರು.

ದೇಶದ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗೆ ಭಾರತೀಯ ನೌಕಾಪಡೆ ಸದಾ ಸಜ್ಜಾಗಿದ್ದು, ಪ್ರಸ್ತುತ ಸಂಕೀರ್ಣ ಮತ್ತು ಅನಿಶ್ಚಿತ ಭದ್ರತಾ ಪರಿಸ್ಥಿತಿಯ ನಡುವೆಯೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತಿದೆ. ಯುದ್ಧ ಸಾಮರ್ಥ್ಯವನ್ನು ಅತ್ಯುನ್ನತ ಮಟ್ಟದಲ್ಲಿ ಕಾಯ್ದುಕೊಳ್ಳುವುದು ನನ್ನ ಮೊದಲ ಆದ್ಯತೆಯಾಗಿರುತ್ತದೆ. ನೌಕಾಪಡೆ ಆಧುನೀಕರಣ ಮತ್ತು ಸಾಮರ್ಥ್ಯ ವೃದ್ಧಿಗೆ ಒತ್ತು ನೀಡಲಾಗುವುದು. ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ನೌಕಾಪಡೆಯ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸಲಾಗುವುದು ಎಂದು ಅಡ್ಮಿರಲ್ ಕೃಷ್ಣ ಹೇಳಿದ್ದಾರೆ.

ಇದಕ್ಕೂ ಮೊದಲು ಕೃಷ್ಣ ಸ್ವಾಮಿನಾಥನ್ ಅವರು ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿದ್ದರು. 'ಐಎನ್‌ಎಸ್ ವಿಕ್ರಮಾದಿತ್ಯ' ಯುದ್ಧನೌಕೆಯಲ್ಲಿ ಕಮಾಂಡರ್ ಆಗಿದ್ದರು.

ಈವರೆಗೆ ನೌಕಾಪಡೆ ಮುಖ್ಯಸ್ಥರಾಗಿದ್ದ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಮೇ 30ರಂದು ನಿವೃತ್ತರಾದರು.

ವಿಯೆಟ್ನಾಂ: ಬ್ರಹ್ಮೋಸ್ ಖರೀದಿ

ಸಿಂಗಪುರ: ಪಾಕಿಸ್ತಾನ ವಿರುದ್ಧ ಭಾರತ 2025ರ ಮೇ 7ರಿಂದ 10ರವರೆಗೆ ನಡೆಸಿದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆಯಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸಿದ 'ಬ್ರಹ್ಮೋಸ್' ಕ್ಷಿಪಣಿಗಳಿಗೆ ಈಗ ವಿವಿಧ ದೇಶಗಳಿಂದ ಬೇಡಿಕೆ ಬರುವುದು ಹೆಚ್ಚುತ್ತಿದೆ. ಈಗ ವಿಯೆಟ್ನಾಂ ಕೂಡಾ ಬ್ರಹ್ಮೋಸ್ ಖರೀದಿಸಲು ಮುಂದೆ ಬಂದಿದ್ದು, ಭಾರತದ ಜತೆ ಒಪ್ಪಂದಕ್ಕೆ ಸಹಿಹಾಕಿದೆ ಎಂದು ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿ ದ್ದಾರೆ. ಸಿಂಗಪುರಕ್ಕೆ ಭೇಟಿ ನೀಡಿರುವ ರಾಜೇಶ್ ಕುಮಾರ್ ಸಿಂಗ್, ಅದಲ್ಲದೇ, ಇಂಡೋನೇಷ್ಯಾ ಕೂಡಾ ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಆಸಕ್ತಿ ತೋರಿದ್ದು, ಆ ದೇಶದ ಸರಕಾರದ ಜತೆಗಿನ ಮಾತುಕತೆ ಅಂತಿಮ ಹಂತದಲ್ಲಿದೆ ಎಂದೂ ತಿಳಿಸಿದ್ದಾರೆ. ಭಾರತದ ಬ್ರಹ್ಮೋಸ್ ಕ್ಷಿಪಣಿಯನ್ನು ಖರೀದಿಸಲು ಮೊದಲು ಆಸಕ್ತಿ ತೋರಿದ್ದು ಫಿಲಿಪ್ಪೀನ್ಸ್. 2022ರಲ್ಲಿ ಫಿಲಿಪ್ಪೀನ್ಸ್ 3500 ಕೋಟಿ ರು.ಗಳ ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿತು.

ಮರಾಠಾ ಮೀಸಲಾತಿ ಜಾರಿಗೆ ಆಗ್ರಹಿಸಿ ಶನಿವಾರ ಬೆಳಗ್ಗೆ ಜಲ್ನಾ ಜಿಲ್ಲೆ ಅಂತರವಾಲಿ ಸಾರತಿ ಗ್ರಾಮದಲ್ಲಿ ಅನಿರ್ದಿಷ್ಟಾವಧಿ ನಿರಶನ ಆರಂಭಿಸಿದ್ದ ಮರಾಠಾ ಹೋರಾಟಗಾರ ಮನೋಜ್ ಜಾರಂಗೆ ಅವರು ರಾಜ್ಯ ಸರಕಾರದ ಪ್ರತಿನಿಧಿಗಳ ಜತೆ ವಿಸ್ತೃತ ಮಾತುಕತೆ ನಡೆಸಿ 12 ಅಂಶಗಳ ಪ್ರಸ್ತಾವನೆ ಸಲ್ಲಿಸಿ ಉಪವಾಸವನ್ನು ಭಾನುವಾರ ಅಂತ್ಯಗೊಳಿಸಿದ್ದಾರೆ. ಸರಕಾರದ ಪ್ರತಿನಿಧಿಗಳು, ಹೋರಾಟದ ಸಂಗಾತಿಗಳು ಜಾರಂಗೆಗೆ ಹಣ್ಣಿನ ರಸ ಕುಡಿಸಿದರು.

ಚಿತ್ರನಟ ಅಜಿತ್‌ಗೆ ಮಾತೃ ವಿಯೋಗ

ಚೆನ್ನೈ: ತಮಿಳು ಚಿತ್ರರಂಗದ ಖ್ಯಾತ ನಟ ಅಜಿತ್ ಕುಮಾರ್ ಅವರ ತಾಯಿ ಮೋಹಿನಿ ಮಣಿ(89) ಅವರು ಕೆಲ ವರ್ಷಗಳ ಅನಾರೋಗ್ಯದ ಕಾರಣ ನಿದ್ರೆಯಲ್ಲಿರುವಾಗಲೇ ಶನಿವಾರ ಬೆಳಗ್ಗೆ ನಿಧನರಾದರು. ತಾಯಿಯ ಸಾವಿನ ಸುದ್ದಿ ತಿಳಿದಾಗ ನಟ ಅಜಿತ್ ಕುಮಾರ್ ದುಬೈನಲ್ಲಿದ್ದರು. ತಕ್ಷಣವೇ ಚೆನ್ನೈಗೆ ಮರಳಿ, ಅಮ್ಮ ಅಂತಿಮ ಸಂಸ್ಕಾರದ ವಿಧಿವಿಧಾನಗಳನ್ನು ಕೈಗೊಂಡರು. ತಮಿಳುನಾಡು ಮುಖ್ಯಮಂತ್ರಿ-ಚಿತ್ರನಟ ಜೋಸೆಫ್ ವಿಜಯ್ ಹಾಗೂ ನಟಿ ತ್ರಿಷಾ ಕೃಷ್ಣನ್ ಮತ್ತು ಚಿತ್ರರಂಗದ ಹಲವು ಗಣ್ಯರು ಚೆನ್ನೈನಲ್ಲಿನ ಅಜಿತ್ ನಿವಾಸಕ್ಕೆ ತೆರಳಿ ಸಂತಾಪ ಸೂಚಿಸಿದರು. ಕಣ್ಣೀರುಗರೆಯುತ್ತಿದ್ದ ಅಜಿತ್‌ರನ್ನು ತಬ್ಬಿ ಹಿಡಿದ ಸಿಎಂ ವಿಜಯ್ ಸಾಂತ್ವನ ಹೇಳಿದರು.

ಕಡಲಿಗೆ ಇಳಿಯದಂತೆ ಮೀನುಗಾರರಿಗೆ ಸೂಚನೆ| ರಾಜ್ಯದ 15 ಜಿಲ್ಲೆಗೆ ಯೆಲ್ಲೋ ಅಲರ್ಟ್

ಮುಂಗಾರು: ದಕ್ಷಿಣದ 4 ರಾಜ್ಯಗಳಲ್ಲಿ 4 ದಿನ ಭಾರೀ ಮಳೆ

ದೆಹಲಿ: ಅರಬ್ಬೀ ಸಮುದ್ರ, ಲಕ್ಷದ್ವೀಪ ದ್ವೀಪಗಳು, ಬಂಗಾಳಕೊಲ್ಲಿಯ ಹೆಚ್ಚಿನ ಭಾಗಗಳು ಮತ್ತು ಈಶಾನ್ಯ ಬಂಗಾಳಕೊಲ್ಲಿಗೆ ಅದಾಗಲೇ ನೈಋತ್ಯ ಮಾನ್ಸೂನ್ ಮಾರುತಗಳ ಪ್ರವೇಶವಾಗಿದ್ದು, ದಕ್ಷಿಣ ಭಾರತದೆಲ್ಲೆಡೆ ಮಳೆಯಾಗುತ್ತಿದೆ. ಮುಂದಿನ 4-5 ದಿನಗಳಲ್ಲಿ ಕೇರಳ, ಕರ್ನಾಟಕ, ತಮಿಳುನಾಡು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಮುಂಗಾರು ಮಾರುತಗಳು ಮುಂದುವರಿಯಲಿವೆ ಎಂದು ಭಾರತೀಯ ಹವಾಮಾನ ಇಲಾಖೆ ಭಾನುವಾರ ತಿಳಿಸಿದೆ.

ಮುಂಗಾರು ಅವಧಿಯಲ್ಲಿನ ಮಳೆಗಾಲದ ಚಟುವಟಿಕೆ ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಕಂಡುಬರುತ್ತಿದೆ. ಮುಂದಿನ 4 ದಿನಗಳೂ ಈ ಭಾಗಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಸೋಮವಾರ ಕರ್ನಾಟಕದ 15 ಜಿಲ್ಲೆಗಳಿಗೆ, ಮಂಗಳವಾರ 13 ಜಿಲ್ಲೆಗಳಿಗೆ ಮತ್ತು ಬುಧವಾರ 19 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ರಾಜ್ಯದ ಬಹುತೇಕ ಭಾಗಗಳಲ್ಲಿ 4 ದಿನ ಮಳೆಯಾಗಲಿದೆ. ಆಂಧ್ರಪ್ರದೇಶದ ರಾಯಲಸೀಮಾದಲ್ಲಿ ಗುಡುಗು ಸಹಿತ ಮಳೆಯಾಗಲಿದ್ದು, ಗಂಟೆಗೆ 50-60 ಕಿ.ಮೀ ವೇಗದಲ್ಲಿ ಬಲವಾದ ಗಾಳಿ ಬೀಸಲಿದೆ ಎಂದು ಮುನ್ಸೂಚನೆಯಲ್ಲಿ ಹೇಳಲಾಗಿದೆ.

ದೇಶದ ಪಶ್ಚಿಮ ಭಾಗದಲ್ಲಿನ ಚಂಡಮಾರುತದ ಪ್ರಭಾವದಿಂದ ಭಾರತದ ಬಹಳಷ್ಟು ಕಡೆಗಳಲ್ಲಿ ಸೋಮವಾರ ಗುಡುಗು-ಮಿಂಚು-ಬಲವಾದ ಗಾಳಿ ಸಮೇತ ಮಳೆಯಾಗಲಿದೆ. ದಕ್ಷಿಣ ಭಾರತದಿಂದ ಆರಂಭಗೊಂಡು ಪೂರ್ವ ಮತ್ತು ವಾಯುವ್ಯ ಭಾರತದವರೆಗೂ ಹಲವು ರಾಜ್ಯಗಳಲ್ಲಿ ಗುಡುಗು-ಮಿಂಚು ಸಹಿತ ಮಳೆಯಾಗಲಿದೆ. ಕೆಲವೆಡೆ ಆಲಿಕಲ್ಲು ಸಮೇತ ಮಳೆಯಾಗಲಿದೆ. ಗಂಟೆಗೆ 70-80 ಕಿ.ಮೀ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ.

ಈಶಾನ್ಯದ ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದಲ್ಲಿಯೂ ಸೋಮವಾರ ಭಾರೀ ಮಳೆಯಾಗಲಿದೆ. ಅಸ್ಸಾಂ ಮತ್ತು ಮೇಘಾಲಯದಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ಬಂಗಾಳಕೊಲ್ಲಿ ಮತ್ತು ಅರಬ್ಬಿ ಸಮುದ್ರ ಪ್ರಕ್ಷುಬ್ಧವಾಗಿದ್ದು, ಕರಾವಳಿ ಪ್ರದೇಶಗಳ ಮೀನುಗಾರರು ಎಚ್ಚರಿಕೆ ವಹಿಸಬೇಕು ಎಂದು ಐಎಂಡಿ ಮುನ್ಸೂಚನೆ ನೀಡಿದೆ.



ಭಾನುವಾರ ಮಧ್ಯಾಹ್ನ 3.30ರ ವೇಳೆ ದಾಖಲಾದ ಉಪಗ್ರಹ ಚಿತ್ರದಲ್ಲಿ ಮುಂಗಾರು ಮೋಡಗಳ ಚಲನೆ

ಎಸ್‌ಐಆರ್‌ಗೆ ಸಹಕರಿಸಿ: ನವೀನ್ ಪಟ್ನಾಯಕ್ ಕರೆ

ಭುವನೇಶ್ವರ: ಒಡಿಶಾ ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ, ಬಿಜು ಜನತಾ ದಳ ನಾಯಕ ನವೀನ್ ಪಟ್ನಾಯಕ್ ಅವರು ಭಾನುವಾರ ಪಾಲ್ಗೊಂಡರು. ತಮ್ಮ 'ನವೀನ್ ನಿವಾಸ್'ಗೆ ಆಗಮಿಸಿದ ಮತದಾರರ ಪಟ್ಟಿಯ 'ಎಸ್‌ಐಆರ್' ಪ್ರಕ್ರಿಯೆಯ ಬೂತ್ ಮಟ್ಟದ ಅಧಿಕಾರಿಯ ತಂಡಕ್ಕೆ ತಮ್ಮ ಹಾಗೂ ಕುಟುಂಬದ ಸದಸ್ಯರೆಲ್ಲರ ಮಾಹಿತಿ ನೀಡುವ ಮೂಲಕ ಒಡಿಶಾ ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕರೂ ಆಗಿರುವ ನವೀನ್ ಪಟ್ನಾಯಕ್ ಅವರು ಸಹಕಾರ ನೀಡಿದರು. ಅಲ್ಲದೇ, ಕೇಂದ್ರ ಚುನಾವಣಾ ಆಯೋಗ ಕೈಗೊಂಡಿರುವ 'ಎಸ್‌ಐಆರ್' ಪ್ರಕ್ರಿಯೆಗೆ ಸಹಕಾರ ನೀಡುವಂತೆ, ಆ ಮೂಲಕ ತಮ್ಮ ಮತದಾನದ ಹಕ್ಕನ್ನು ದೃಢಪಡಿಸಿಕೊಳ್ಳುವಂತೆ ರಾಜ್ಯದ ಮತದಾರರಿಗೆ ಕರೆ ನೀಡಿದರು. ಮೇ 30ರಂದು ಒಡಿಶಾದಲ್ಲಿ 'ಎಸ್‌ಐಆರ್' ಪ್ರಕ್ರಿಯೆಯ ಎರಡನೇ ಹಂತ (ಮನೆ ಮನೆ ಭೇಟಿ) ಶುರುವಾಗಿದ್ದು, ಜೂನ್ 28ರವರೆಗೂ ಮುಂದುವರಿಯಲಿದೆ.

ಟಿಎಂಸಿ ಮಾಜಿ ಶಾಸಕಿ ಬೆಂಬಲಿಗರಿಂದಲೇ ಹಲ್ಲೆ: ಬಿಜೆಪಿ

ಅಭಿಷೇಕ್ ಮೇಲೆ ಹಲ್ಲೆ: 7 ಆರೋಪಿ ಸೆರೆ

ಕೋಲ್ಕತ್ತ: ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಸಂಸದ ಅಭಿಷೇಕ್ ಬ್ಯಾನರ್ಜಿ ಮೇಲೆ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾಪುರದಲ್ಲಿ ಶನಿವಾರ ಸ್ಥಳೀಯರು ಕೋಳಿಮೊಟ್ಟೆ, ಕಲ್ಲು, ಚಪ್ಪಲಿಗಳಿಂದ ಹಲ್ಲೆ ನಡೆಸಿದ್ದರು. ಕಡೆಗೆ ಪೊಲೀಸರು ತಮ್ಮದೇ ಹೆಲ್ಮೆಟ್ಟನ್ನು ಅಭಿಷೇಕ್ ಅವರ ತಲೆಗೆ ಹಾಕಿ ಸ್ಥಳದಿಂದ ಕಷ್ಟಪಟ್ಟು ಕರೆದೊಯ್ದು ಪಾರು ಮಾಡಿದ್ದರು.

ಉದ್ರಿಗ್ತ ಗುಂಪಿನಲ್ಲಿ ಕೆಲವು ಮಹಿಳೆಯರೂ ಇದ್ದು, ಕೋಳಿಮೊಟ್ಟೆಗಳನ್ನು ಅಭಿಷೇಕ್ ಮೇಲೆ ಎಸೆದಿದ್ದರು. ಪರಿಣಾಮ ಅಭಿಷೇಕ್ ಧರಿಸಿದ್ದ ಹೆಲ್ಮೆಟ್, ಮುಖ-ಎದೆ, ಭುಜದ ಮೇಲೆಲ್ಲಾ ಕೋಳಿಮೊಟ್ಟೆ ಲೋಳೆ ಅಂಟಿತ್ತು. ತೊಟ್ಟಿದ್ದ ಬಿಳಿಯ ಅಂಗಿ ಹಳದಿ ಬಣ್ಣಕ್ಕೆ ತಿರುಗಿತ್ತು.

ಈ ಹಲ್ಲೆ ಪ್ರಕರಣವನ್ನು ಸ್ಥಳದಲ್ಲಿದ್ದ ಹಲವರು ತಮ್ಮ ಮೊಬೈಲ್ ಕ್ಯಾಮೆರಾಗಳಲ್ಲಿ ಚಿತ್ರೀಕರಿಸಿದ್ದರು. ಈ ದೃಶ್ಯಾವಳಿಗಳನ್ನು ಆಧರಿಸಿಯೇ 7 ಆರೋಪಿಗಳನ್ನು ಬಂಧಿಸಿರುವುದಾಗಿ ರಾಜ್ಯ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಬಿಜೆಪಿ ಆರೋಪ: ಬಿಜೆಪಿ ಕಾರ್ಯಕರ್ತರೇ ಸಂಚು ಹೂಡಿ ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ. ಆದರೆ, ಬಂಧಿತರಲ್ಲಿ ಇಬ್ಬರು ಆರೋಪಿಗಳು ಟಿಎಂಸಿ ಪಕ್ಷದ ನಾಯಕಿ, ಮಾಜಿ ಶಾಸಕಿ ಲವ್ಲಿ ಮೈತ್ರಾ ಅವರ ಬೆಂಬಲಿಗರಾಗಿದ್ದಾರೆ ಎಂದು ಬಿಜೆಪಿ ನಾಯಕ, ಕೇಂದ್ರ ಸಚಿವ ಸುಕಾಂತ್ ಮಜುಂದಾರ್ ಗುರುತಿಸಿದ್ದಾರೆ. ಟಿಎಂಸಿ ನಾಯಕರಲ್ಲೇ ಪರಸ್ಪರ ದ್ವೇಷವಿದೆ. ಅವರ ಕಡೆಯವರೇ ಸಂದರ್ಭ ನೋಡಿಕೊಂಡು ಥಳಿಸಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸಿ ಎಂದು ಸಚಿವರು ರಾಜ್ಯ ಪೊಲೀಸರಿಗೆ ಸೂಚಿಸಿದ್ದಾರೆ.

ಮಮತಾ ಕಿಡಿ: ರಾಹುಲ್ ಖಂಡನೆ

ತಮ್ಮ ಸೋದರಳಿಯನ ಮೇಲೆ ಬಿಜೆಪಿಯವರೇ ದಾಳಿ ನಡೆಸಿದ್ದಾರೆ. ಅದರಿಂದ ಅಭಿಷೇಕ್ ದೇಹದಲ್ಲಿ ರಕ್ತ ಹೆಪ್ಪುಗಟ್ಟಿದೆ. ಆದರೆ, ಆಸ್ಪತ್ರೆ ವೈದ್ಯರು ಒಳರೋಗಿಯಾಗಿ ದಾಖಲಿಸಿಕೊಳ್ಳದೇ ವಾಪಸ್ ಕಳುಹಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ, ಟಿಎಂಸಿ ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಭಾನುವಾರ ಸುದ್ದಿ ಮಾಧ್ಯಮ ಪ್ರತಿನಿಧಿಗಳೆದುರು ಕಿಡಿಕಾರಿದ್ದಾರೆ.ಸೋನಾಪುರದಲ್ಲಿ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಮೇಲೆ ನಡೆದಿರುವ ಹಲ್ಲೆ ಖಂಡನೀಯ. ಒಬ್ಬ ಸಂಸದನ ಮೇಲಿನ ಹಲ್ಲೆ ಆ ವ್ಯಕ್ತಿಗಷ್ಟೇ ಅಲ್ಲ, ಆತನನ್ನು ಚುನಾಯಿಸಿದ ಲೋಕಸಭಾ ಕ್ಷೇತ್ರದ ಎಲ್ಲಾ ಜನತೆಯ ಮೇಲಿನ ಹಲ್ಲೆಯಾಗಿದೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ಮಾಧ್ಯಮದಿಂದಾಗಿ ಜಿರಳೆ ಬಗ್ಗೆ ಯುವಜನರ ಒಲವು'

ಕೊಟ್ಟಾಯಂ: ಮಾಧ್ಯಮಗಳು ಧನಾತ್ಮಕವಾದ ಸುದ್ದಿಗಳಿಗೆ ಆದ್ಯತೆ ನೀಡಬೇಕು, ಋಣಾತ್ಮಕ ಅಂಶಗಳಿಗೆ ಪ್ರಾಮುಖ್ಯತೆ ನೀಡಬಾರದು ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಕೇರಳದಲ್ಲಿನ ದಿನಪತ್ರಿಕೆ 'ದೀಪಿಕಾ' ಸಂಸ್ಥೆಯ 140ನೇ ವಾರ್ಷಿಕೋತ್ಸವದಲ್ಲಿ ಭಾನುವಾರ ಭಾಗಿಯಾಗಿದ್ದ ಉಪ ರಾಷ್ಟ್ರಪತಿ, ಋಣಾತ್ಮಕ ಪತ್ರಿಕೋದ್ಯಮದ ಕಾರಣವಾಗಿಯೇ ದೇಶದ ಯುವಜನತೆ 'ಜಿರಳೆ'ಗಳ ಸುದ್ದಿಯತ್ತ ಗಮನ ಕೊಡುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ದೇಶದಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಬಿತ್ತರಿಸದೇ, ಸಾಧನೆಗಳನ್ನು ಎತ್ತಿ ತೋರದೇ, ನಕಾರಾತ್ಮಕವಾದ 'ಜಿರಳೆ' ಕರೆಗಳಿಗೆ ಸುದ್ದಿ ಮಾಧ್ಯಮಗಳು ಗಮನ ಕೊಡುವುದರಿಂದಲೇ 'ಸಿಜೆಪಿ'ಯಂತಹ ಅಭಿಯಾನಗಳು ಶುರುವಾಗುವಂತಾಗಿದೆ ಎಂದು ಬೇಸರ ಹೊರಹಾಕಿದರು.

ಕೇರಳಂಗೆ ಭಾನುವಾರ ಆಗಮಿಸಿದ ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಅವರನ್ನು ವಿಮಾನ ನಿಲ್ದಾಣದಲ್ಲಿ ಸಿಎಂ ಸತೀಶನ್ ಸ್ವಾಗತಿಸಿದರು.

ಕಾಯ್ದಿರಿಸಿದ ಆಸನ: ರೈಲ್ವೆಗೆ 20000 ದಂಡ

ದೆಹಲಿ: ಪ್ರಯಾಣಕ್ಕೂ ಕೆಲ ದಿನ ಮೊದಲೇ ಟಿಕೆಟ್ ಬುಕ್ ಮಾಡಿದ್ದರೂ ನಿಗದಿತ ಆಸನ ಖಾಲಿ ಇರದ ಕಾರಣಕ್ಕೆ ನಿಂತುಕೊಂಡೇ ಪ್ರಯಾಣಿಸಿದ ಪ್ರಯಾಣಿಕರಿಗೆ 20 ಸಾವಿರ ರು. ಪರಿಹಾರ ಧನ ಪಾವತಿಸುವಂತೆ ಭಾರತೀಯ ರೈಲ್ವೆಗೆ ಬಿಹಾರದ ಬೋಜಪುರಿ ಜಿಲ್ಲಾ ಗ್ರಾಹಕರ ವೇದಿಕೆ ಆದೇಶಿಸಿದೆ.

ಉತ್ತರ ಪ್ರದೇಶ ರಾಜ್ಯದ ವಿದ್ಯಾಚಲದಿಂದ ಬಿಹಾರದ ಅರಾಗೆ ನಾಲ್ವರು ಗೆಳೆಯರು 2022ರಲ್ಲಿ ರೈಲಿನಲ್ಲಿ ಪ್ರಯಾಣಿಸಿದ್ದರು. ಪ್ರಯಾಣಕ್ಕೆ ಹಲವು ದಿನಗಳು ಮೊದಲೇ 1876 ರು. ಪಾವತಿಸಿ ಟಿಕೆಟ್ ಮುಂಗಡ ಕಾಯ್ದಿರಿಸಿದ್ದರು. ಬಿ4 ಬೋಗಿಯ ಆಸನ ಸಂಖ್ಯೆ 58, 62, 63, 68 ಕಾಯ್ದಿರಿಸಲಾಗಿತ್ತು. ಆದರೆ, ರೈಲ್ವೆ ಸಿಬ್ಬಂದಿಗಳು ಕುಳಿತಿದ್ದು, ಆಸನ ಬಿಟ್ಟು ಕೊಡಲು ನಿರಾಕರಿಸಿದರು. ಟಿಟಿಇಗೆ ದೂರು ನೀಡಿದರೆ, 'ನೀವೇ ಸ್ವಲ್ಪ ಸರಿಹೋಗಿಸಿಕೊಳ್ಳಿ' ಎಂದು ಹೇಳಿದ್ದಾರೆ. ಗ್ರಾಹಕರ ಕುಂದುಕೊರತೆ ದೂರವಾಣಿ ಸಂಖ್ಯೆ ಸಂಪರ್ಕಕ್ಕೆ ಸಿಗಲಿಲ್ಲ. ನಾಲ್ವರು ಗೆಳೆಯರು ತಮ್ಮ ಆಸನಗಳಲ್ಲಿ ಕುಳಿತಿದ್ದವರ ವಿಡಿಯೊ ಚಿತ್ರೀಕರಿಸಿ ಜಾಲತಾಣ ಮೂಲಕ ರೈಲ್ವೆ ಇಲಾಖೆ ಗಮನಸೆಳೆದಿದ್ದಾರೆ. ಬಳಿಕ ಬಿಹಾರದ ಬೋಜಪುರಿ ಜಿಲ್ಲಾ ಗ್ರಾಹಕರ ವೇದಿಕೆಗೆ ದೂರು ದಾಖಲಿಸಿದ್ದಾರೆ.

ಗ್ರಾಹಕರ ವ್ಯಾಜ್ಯ ಪರಿಹಾರ ವೇದಿಕೆ, ಪ್ರಯಾಣಿಕರಿಗೆ ಆಸನ ಖಚಿತಪಡಿಸುವುದು ರೈಲ್ವೆ ಜವಾಬ್ದಾರಿ. ತನ್ನ ಜವಾಬ್ದಾರಿ ನಿರ್ವಹಿಸದ ತಪ್ಪಿಗೆ ರೈಲ್ವೆಗೆ 20 ಸಾವಿರ ರು. ದಂಡ ವಿಧಿಸಲಾಗಿದೆ. ಆ ಹಣವನ್ನು ಪರಿಹಾರ ರೂಪದಲ್ಲಿ ಸಂತ್ರಸ್ತ ಪ್ರಯಾಣಿಕರಿಗೆ ಪಾವತಿಸಿ ಎಂದು ಆದೇಶಿಸಿದೆ.

ಸಮಾಚಾರ ಸಣ್ಣದಲ್ಲ

ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ ಇಂದು

ಹೊಸಪೇಟೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ವಿಜಯನಗರ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಹಿರಿಯ ಸಾಹಿತಿಗಳಾದ ಎಸ್.ಎಸ್.ಹಿರೇಮಠ ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ ಸಮಾರಂಭವನ್ನು ಜೂ.1ರಂದು ಬೆಳಗ್ಗೆ 11ಕ್ಕೆ ವಿಜಯನಗರ ಮಹಾವಿದ್ಯಾಲಯದ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹಿರಿಯ ಸಾಹಿತಿ ಡಾ. ರಹಮತ್ ತರೀಕೆರೆ, ಅಧ್ಯಕ್ಷತೆ ವಹಿಸಲಿದ್ದು, ಪುಸ್ತಕ ಲೋಕಾರ್ಪಣೆಗೊಳಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷೆ ಡಾ. ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬರಹಗಾರರು ಮತ್ತು ಸಾಮಾಜಿಕ ಕಾರ್ಯಕರ್ತ ಬಿ. ಪೀರ್ಬಾಷಾ, ಮಣಿಪಾಲ್ ವಿಶ್ವವಿದ್ಯಾಲಯ ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ. ಫಣಿರಾಜ್, ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷರು ಮಲ್ಲಿಕಾರ್ಜುನ್ ಎನ್. ಮೆಟ್ರಿ, ಪ್ರಾಚಾರ್ಯ ಮಹಾಂತೇಶ್ ಎನ್. ಆರಾಧ್ಯಮಠ, ಎಸ್.ಎಸ್. ಹಿರೇಮಠರ ಧರ್ಮಪತ್ನಿ ಯೋಗಿತಾ ಎಸ್. ಹಿರೇಮಠ ಭಾಗವಹಿಸಲಿದ್ದಾರೆ.

ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹೊಸಪೇಟೆ: 2026-27ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಸತಿ ನಿಲಯ ಪ್ರವೇಶಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 31 ಕೊನೆ ದಿನವಾಗಿದೆ. ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ಇಲಾಖೆ ವೆಬ್ ಸೈಟ್ ನಲ್ಲಿ ಅರ್ಜಿ ಸಲ್ಲಿಸಬಹುದು. ಸಲ್ಲಿಸಿದ ಅರ್ಜಿಯೊಂದಿಗೆ ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಫೋಟೋ, ಬ್ಯಾಂಕ್ ಪಾಸ್ ಬುಕ್, ಹಿಂದಿನ ವರ್ಷದ ಅಂಕಪಟ್ಟಿ ದಾಖಲೆಗಳೊಂದಿಗೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9901147362, 7353139094 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜಿಟಿಟಿಸಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಹೊಸಪೇಟೆ: ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಕರ್ನಾಟಕ ಸರಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು, ಈಗಾಲೇ ಡಿಪ್ಲೊಮೊ ಕೋರ್ಸುಗಳಿಗೆ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದೆ. ಅರ್ಜಿ ಸಲ್ಲಿಸಲು ಜೂನ್ 10 ಕೊನೆಯ ದಿನವಾಗಿದೆ. ಎಐಸಿಟಿಇ ನವದೆಹಲಿಯಿಂದ ಅನುಮೋದಿತಗೊಂಡ ಡಿಟಿಡಿಎಂ (ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್), ಡಿಎಂಸಿಹೆಚ್ (ಡಿಪ್ಲೊಮಾ ಇನ್ ಮೆಕಾಟ್ರಾನಿಕ್ಸ್), ಡಿಪಿಎಂ (ಡಿಪ್ಲೊಮಾ ಇನ್ ಪ್ರಿಸಿಷಿಯನ್ ಮ್ಯಾನ್ಯುಫ್ಯಾಕ್ಚರಿಂಗ್) ಕೋರ್ಸ್ಗಳು ಲಭ್ಯವಿದ್ದು, ವಿದ್ಯಾರ್ಹತೆಯು 10ನೇ ತರಗತಿ ಉತ್ತೀರ್ಣರಾವರು ಅರ್ಜಿ ಸಲ್ಲಿಸಬಹುದು. ತರಬೇತಿಯೂ 3+1 ವರ್ಷ ಅವಧಿಯಾಗಿದೆ. ಸೈನ್ಸ್, ಐಟಿಐ ಪಾಸಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ವರ್ಷಕ್ಕೆ ಪ್ರವೇಶ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ 8105640142, 9902397658, 9964730789, 9902457876, 9845416198ಗೆ ಸಂಪರ್ಕಿಸಬಹುದಾಗಿದೆ ಎಂದು ಸರಕಾರಿ ಉಪಕರನಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಹೊಸಪೇಟೆ: ಮೌಲಾನಾ ಆಜಾದ್ ಮಾದರಿ ಪದವಿ ಪೂರ್ವ ಕಾಲೇಜು ಶಾಲೆಯಲ್ಲಿ ಖಾಲಿ ಇರುವ ಕನ್ನಡ, ಇಂಗ್ಲೀಷ್, ಭೌತಶಾಸ್ತ್ರ ರಸಾಯನಶಾಸ್ತ್ರ ಜೀವಶಾಸ್ತ್ರ ಪಿಯುಸಿ ಅತಿಥಿ ಉಪನ್ಯಾಸಕರು ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆಗೆ ಇಂಗ್ಲೀಷ್, ಹಿಂದಿ, ಉರ್ದು, ದೈಹಿಕ ಶಿಕ್ಷಕರ ಹುದ್ದೆ ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅನುಭವಿಗಳಿಗೆ ಪ್ರಥಮಾದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ:9945951963, 7026653165 ಗೆ ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಪ್ರಲ್ಹಾದ್ ಜೋಶಿ} ಕೇಂದ್ರ ಸಚಿವ

ಡಿ. ಕೆ. ಶಿವಕುಮಾರ್ ಸಿಎಂ ಆಗುವುದರಿಂದ ಏನೋ ಬಹಳ ವ್ಯತ್ಯಾಸ ಆಗಲಿದೆ ಎಂದು ನನಗೆ ಅನಿಸಲ್ಲ, ಕಾಂಗ್ರೆಸ್ ಪಕ್ಷದ ಲೀಡರೇ ಕರಪ್ಟ್ ಇರುವುದು, ಆತನಿಗೆ ಒಂದು ವಿಷನ್ ಇಲ್ಲ. 56 ವರ್ಷದ ಯುವಕ ಲೀಡರ್‌ಇದಾರೆ. ಅವರಿಗೆ ವಿಷನ್ ಇಲ್ಲ. ಅವರು ದೇಶದ ಇಂಟ್ರೆಸ್ಟ್ ವಿರುದ್ಧ ಮಾತಾಡಿದ್ದನ್ನು ಕಂಡಿದ್ದೇವೆ. ಕಾಂಗ್ರೆಸ್ ಪಕ್ಷಕ್ಕೆ, ಕರ್ನಾಟಕ ಒಂದು ಎಟಿಎಂ ಆಗಿದೆ. ಅದು ಮುಂದುವರೆಯಲಿದೆ.

ಜಾಗೃತಿ ಕಾರ್ಯಾಗಾರ, ಅಧಿಕಾರಿಗಳೊಂದಿಗೆ ಸಂವಾದ | ಮಾಹಿತಿ ಹಕ್ಕು ಆಯುಕ್ತ ವೆಂಕಟಸಿಂಗ್ ಹೇಳಿಕೆ

ಪಾರದರ್ಶಕ ಮಾಹಿತಿ ನೀಡಿಕೆಗೆ ಆಯೋಗ ಬದ್ಧ

ಹೊಸಪೇಟೆ: ಸಾರ್ವಜನಿಕರಿಗೆ ಅತ್ಯಂತ ಪಾರದರ್ಶಕ ಹಾಗೂ ತ್ವರಿತವಾಗಿ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ಮಾಹಿತಿ ಆಯೋಗವು ಸಕ್ರಿಯವಾಗಿ ಮತ್ತು ದಕ್ಷತೆಯಿಂದ ಕೆಲಸ ನಿರ್ವಹಿಸುತ್ತಿದೆ ಎಂದು ಕಲಬುರ್ಗಿ ಪೀಠದ ಮಾಹಿತಿ ಹಕ್ಕು ಆಯುಕ್ತ ಬಿ. ವೆಂಕಟಸಿಂಗ್ ತಿಳಿಸಿದರು.

ಜಿಲ್ಲಾಡಳಿತದ ಸಹಯೋಗದೊಂದಿಗೆ ಹೊಸಪೇಟೆ ನಗರದ ಒಳಾಂಗಣ ಕ್ರೀಡಾಂಗಣ ಸಭಾಂಗಣದಲ್ಲಿ ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತ ಜಾಗೃತಿ ಕಾರ್ಯಾಗಾರ ಹಾಗೂ ಅಧಿಕಾರಿಗಳೊಂದಿಗಿನ ಸಂವಾದ ಕಾರ್ಯಕ್ರಮದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

ಮಾಹಿತಿ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ಅಧಿಕಾರಿಗಳಲ್ಲಿರಬಹುದಾದ ಗೊಂದಲಗಳು, ಅನುಮಾನಗಳು ಹಾಗೂ ಸಮಸ್ಯೆಗಳನ್ನು ನಿವಾರಿಸಿ, ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ತಲುಪುವಂತೆ ಮಾಡಲು ಇಂತಹ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈಗಾಗಲೇ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮೊದಲ ಹಂತದ ಕಾರ್ಯಾಗಾರಗಳು ಯಶಸ್ವಿಯಾಗಿ ಮುಕ್ತಾಯಗೊಂಡಿವೆ ಎಂದು ವಿವರಿಸಿದರು.

ಆಯೋಗದ ಪ್ರಗತಿಯ ಹಂಚಿಕೊಂಡ ಆಯುಕ್ತರು 2025ರ ಫೆಬ್ರವರಿಯಲ್ಲಿ ಆರು ಜನ ಆಯುಕ್ತರು ಅಧಿಕಾರ ಸ್ವೀಕರಿಸಿದ ಬಳಿಕ ಮತ್ತು ಕಳೆದ ಅಕ್ಟೋಬರ್‌ತಿಂಗಳಿನಲ್ಲಿ ನಾನು ಸೇರಿದಂತೆ ಇನ್ನು ಮೂವರು ಆಯುಕ್ತರು ಅಧಿಕಾರ ವಹಿಸಿಕೊಂಡ ನಂತರ ಆಯೋಗದ ಕಾರ್ಯಕ್ಷಮತೆ ಮತ್ತಷ್ಟು ಇಮ್ಮಡಿಗೊಂಡಿದೆ. ಆರು ಜನ ಆಯುಕ್ತರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಆಯೋಗದಲ್ಲಿ 56,000 ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದವು. ಆದರೆ ಕೇವಲ ಒಂದು ವರ್ಷದ ಅವಧಿಯಲ್ಲಿ ಆಯೋಗವು ಸುಮಾರು 40,000 ಅರ್ಜಿಗಳನ್ನು ವಿಲೇವಾರಿ ಮಾಡುವ ಮೂಲಕ ದಾಖಲೆ ಬರೆದಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಲಬುರ್ಗಿ ಪೀಠದ ಮಾಹಿತಿ ಹಕ್ಕು ಆಯುಕ್ತ ಬಿ. ವೆಂಕಟಸಿಂಗ್ ಮಾತನಾಡಿದರು.

ಕಲಬುರ್ಗಿ ಪೀಠದ ವ್ಯಾಪ್ತಿಗೆ ಬರುವ ರಾಯಚೂರು, ಕಲ್ಬುರ್ಗಿ, ಬಳ್ಳಾರಿ, ವಿಜಯನಗರ, ಯಾದಗಿರಿ, ಕೊಪ್ಪಳ, ಬೀದರ್‌ಜಿಲ್ಲೆಗಳಲ್ಲಿ ಅಧಿಕಾರ ವಹಿಸಿಕೊಂಡಾಗ ಕಲಬುರ್ಗಿ ಪೀಠದಲ್ಲಿ 6,200 ಅರ್ಜಿಗಳು ಬಾಕಿ ಇದ್ದವು. 2025 ರ ನವೆಂಬರ್‌24 ರಿಂದ ವಿಚಾರಣೆ ಆರಂಭಿಸಿ, ಇಂದಿನವರೆಗೆ ನಡೆಸಿದ 101 ದಿನಗಳ ಕಲಾಪಗಳಲ್ಲಿ ಒಟ್ಟು 3,537 ಪ್ರಕರಣ ವಿಚಾರಣೆಗೆ ಎತ್ತಿಕೊಳ್ಳಲಾಗಿದೆ. ಇದರಲ್ಲಿ 1,548 ಪ್ರಕರಣಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಮಾಹಿತಿ ಒದಗಿಸಲಾಗಿದೆ ಎಂದು ತಿಳಿಸಿದರು.

ವಿವಿಧ ಜಿಲ್ಲೆಗಳಲ್ಲಿ ಬಾಕಿ ಇರುವ ಅರ್ಜಿಗಳ ವಿವರ: ಪ್ರಸ್ತುತ ಕಲಬುರ್ಗಿ ಪೀಠದ ವ್ಯಾಪ್ತಿಯಲ್ಲಿ ವಿಚಾರಣೆಗೆ ಬಾಕಿ ಇರುವ ರಾಯಚೂರು: 2,337 ಅರ್ಜಿಗಳು. ಕಲಬುರ್ಗಿ 1,318, ಬಳ್ಳಾರಿ 835, ಕೊಪ್ಪಳ 650 ವಿಜಯನಗರ 611, ಯಾದಗಿರಿ 580, ಬೀದರ್400 ಅರ್ಜಿಗಳು ಬಾಕಿ ಇವೆ.

> 2010 ರಿಂದ 2020 ರವರೆಗೆ ಬಾಕಿ ಉಳಿದಿದ್ದ ಹಳೆಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ಮಾರ್ಚ್ ಮತ್ತು ಡಿಸೆಂಬರ್‌ತಿಂಗಳಿನಲ್ಲಿ ವಿಶೇಷ ಅಭಿಯಾನವನ್ನು ಕೈಗೊಳ್ಳಲಾಗಿತ್ತು. ಈ ಮೂಲಕ ಹಳೆಯ ಪ್ರಕರಣಗಳಲ್ಲಿ ಶೇಕಡಾ 75 ರಷ್ಟು ಪ್ರಕರಣ ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದ್ದು, ಪ್ರಸ್ತುತ 2023 ಮತ್ತು 2024ನೇ ಸಾಲಿನ ಪ್ರಕರಣಗಳ ವಿಚಾರಣೆ ಪ್ರಗತಿಯಲ್ಲಿದೆ.
>
> -ಬಿ. ವೆಂಕಟಸಿಂಗ್, ಕಲಬುರ್ಗಿ ಪೀಠದ ಮಾಹಿತಿ ಹಕ್ಕು ಆಯುಕ್ತ

ಕಲ್ಯಾಣ ಕರ್ನಾಟಕ ಭಾಗದ ಬೀದರ್, ಬಳ್ಳಾರಿ, ಕೊಪ್ಪಳ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯಾಗಾರಗಳು ಮುಗಿದಿದ್ದು, ವಿಜಯನಗರ ಜಿಲ್ಲೆಯು ಐದನೇ ಜಿಲ್ಲೆಯಾಗಿದೆ. ಮುಂದಿನ ದಿನಗಳಲ್ಲಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲೂ ಕಾರ್ಯಾಗಾರ ಹಮ್ಮಿಕೊಳ್ಳುವ ಮೂಲಕ ಮಾಹಿತಿ ಹಕ್ಕು ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು. ಇಡೀ ಭಾರತ ದೇಶದಲ್ಲೇ ಕರ್ನಾಟಕ ಮಾಹಿತಿ ಆಯೋಗವು ಅತ್ಯಂತ ತತ್ಪರತೆ ಮತ್ತು ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎಂದು ಹೆಮ್ಮೆಯಿಂದ ತಿಳಿಸಿದರು.

ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಕಾರ್ಯಾಗಾರದಲ್ಲಿ ಭಾಗವಹಿಸಿದ ಅಧಿಕಾರಿಗಳೊಂದಿಗೆ ನೇರ ಸಂವಾದ ನಡೆಸಿದರು. ಈ ವೇಳೆ ಕಾಯ್ದೆಯ ಬಗ್ಗೆ ಅಧಿಕಾರಿಗಳಿಗೆ ಇರುವ ಗೊಂದಲ, ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದೀನ ಹಾಗೂ ಡಾ. ಹರೀಶಕುಮಾರ, ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಇದ್ದರು.

ಬೇಜವಾಬ್ದಾರಿ ಅಧಿಕಾರಿಗಳಿಗೆ ದಂಡದ ಬಿಸಿ

ಮಾಹಿತಿ ನೀಡಲು ವಿಳಂಬ ಮಾಡುವ ಅಥವಾ ನಿರ್ಲಕ್ಷ್ಯತೆ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ 101 ದಿನಗಳ ಅವಧಿಯಲ್ಲಿ ಮಾಹಿತಿ ನೀಡಲು ನಿರಾಕರಿಸಿದ ಅಧಿಕಾರಿಗಳಿಗೆ ಒಟ್ಟು 4,33,000 ರೂಪಾಯಿಗಳ ದಂಡ ವಿಧಿಸಲಾಗಿದೆ. ಅಷ್ಟೇ ಅಲ್ಲದೆ, ಮಾಹಿತಿ ಪಡೆಯಲು ವಿಳಂಬವಾಗಿ ಅರ್ಜಿದಾರರು ಅನುಭವಿಸಿದ ಆರ್ಥಿಕ ಮತ್ತು ಸಮಯದ ನಷ್ಟವನ್ನು ಸರಿದೂಗಿಸಲು 38,000 ರೂಪಾಯಿಗಳ ಪರಿಹಾರವನ್ನು ಅರ್ಜಿದಾರರಿಗೆ ಕೊಡಿಸುವ ಮೂಲಕ ಆಯೋಗವು ದಕ್ಷತೆ ಮೆರೆದಿದೆ ಎಂದು ಕಲಬುರ್ಗಿ ಪೀಠದ ಮಾಹಿತಿ ಹಕ್ಕು ಆಯುಕ್ತ ಬಿ. ವೆಂಕಟಸಿಂಗ್ ಎಂದು ಹೇಳಿದರು.

ಹೂನೂರಿ ಗ್ರಾಮದ ಸರಕಾರಿ ಪ್ರೌಢ ಶಾಲೆ ದುರಸ್ತಿಗೆ ಆಗ್ರಹ

ಜೀವ ಭಯದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ

ಹೂನೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯ ನೋಟ

ಬಸವರಾಜ ಹೂನೂರು ಮುದಗಲ್:

ಪಟ್ಟಣ ಸಮೀಪದ ಹೂನೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯ ಕೊಠಡಿಗಳು ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ ಕಾರಣ ಜೀವ ಭಯದಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಹೂನೂರು, ತುರಡಗಿ, ಕಿಡದೂರು, ಆರ್ಯಭೋಗಾಪೂರು ಗ್ರಾಮದ ಸುಮಾರು 60 ವಿದ್ಯಾರ್ಥಿಗಳು ಈ ಸರಕಾರಿ ಪ್ರೌಢ ಶಾಲೆಯಲ್ಲಿ 8 ನೇ ತರಗತಿಯಿಂದ 10 ನೇ ತರಗತಿ ತರಗತಿವರಗೆ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಪ್ರೌಢ ಶಾಲಾ ಕೊಠಡಿಗಳನ್ನ 2012-13 ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಸಂಪೂರ್ಣ ಶಿಥಿಲಗೊಂಡು ಸಿಮೆಂಟ್ ತುಣುಕುಗಳು ವಿದ್ಯಾರ್ಥಿಗಳ ಮೇಲೆ ಬೀಳುತ್ತಿವೆ. ಮಳೆ ಬಂದರೆ ಸಾಕು ಸೋರುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಜೀವ ಕೈಯಲ್ಲಿ ಹಿಡಿದುಕೊಂಡು ಕಲಿಯಬೇಕಾದ ಅನಿವಾರ್ಯತೆ ಎದುರಾಗಿದೆ. ಶಾಲಾ ಶಿಕ್ಷಕರು ಜೀವದ ಹಂಗು ತೊರೆದು ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಪಾಠ ಮಾಡಬೇಕಾಗಿದೆ ಎಂದು ಪಾಲಕರ ದೂರಿದ್ದಾರೆ.



> ಶಿಥಿಲಗೊಂಡ ಹೂನೂರು ಗ್ರಾಮದ ಶಾಲೆಯ ಕೊಠಡಿ ನಿರ್ಮಾಣ ಮಾಡುವಂತೆ ಶಾಸಕ ಮಾನಪ್ಪ ವಜ್ಜಲ್ ಅವರಿಗೆ ಮನವಿ ಪತ್ರ ಸಲ್ಲಿಸಿದ್ದೇವೆ.
>
> -ಬಸವರಾಜ ಚಲುವಾದಿ, ಹಳೆ ವಿದ್ಯಾರ್ಥಿ

ಈ ಕೂಡಲೇ ಸಂಬಂಧಪಟ್ಟ ಜನ ಪ್ರತಿನಿಧಿಗಳು ಹಾಗೂ ಇಲಾಖೆ ಅಧಿಕಾರಿಗಳು ಗಮನಹರಿಸಿ, ಹೊಸ ಕೊಠಡಿಗಳು ನಿರ್ಮಾಣ ಮಾಡುವುದರ ಜೊತೆಗೆ ಶೌಚಾಲಯ, ಕುಡಿಯವ ನೀರು, ಕ್ರೀಡಾ ಸೌಲಭ್ಯಗಳು ಒದಗಿಸಿ ಸರಕಾರಿ ಶಾಲಾ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ಬೃಹತ್ ಉದ್ಯೋಗ ಮೇಳ ಜೂ.2ರಂದು

ಹೂವಿನಹಡಗಲಿ: ಜೂ.2 ರಂದು ಶಾಸಕ ಕೃಷ್ಣ ನಾಯಕ್ ರವರ ಜನ್ಮ ದಿನಾಚರಣೆಯ ಅಂಗವಾಗಿ ಪಟ್ಟಣದ ಜಿ.ಬಿ.ಆರ್‌ಕಾಲೇಜಿನಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ್‌ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಮಹಿಳಾ ಮತ್ತು ಯುವ ಉದ್ಯಮಿ ಕಾರ್ಯಕ್ರಮದಡಿ ಮಹಿಳಾ ಸಬಲೀಕರಣ, ಯುವ ಉದ್ಯೋಗ ಮತ್ತು ಸ್ವಯಂ ಉದ್ಯೋಗ ತರಬೇತಿ, ಕೌಶಲ್ಯಾಭಿವೃದ್ಧಿ, ಸ್ಟಾರ್ಟಪ್ ಹಾಗೂ ಸಣ್ಣ ಉದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡಲು 100ಕ್ಕೂ ಹೆಚ್ಚು ಕಂಪನಿಗಳು ಈ ಮೇಳದಲ್ಲಿ ಭಾಗವಹಿಸುತ್ತಿವೆ ಎಂದರು.

ಹೂವಿನಹಡಗಲಿ ಪಟ್ಟಣದ ಪತ್ರಿಕಾ ಭವನದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಪೂಜಾರ್‌ಮಾತನಾಡಿದರು.

ಜೂನ್ 2 ರಂದು ಬೆಳಗ್ಗೆ 9 ಗಂಟೆಗೆ ಉದ್ಯೋಗ ಮೇಳ ಆರಂಭವಾಗಲಿದ್ದು, ಯುವಜನತೆ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಬಿಜೆಪಿ ಅಲ್ಪಸಂಖ್ಯಾತ ಮೋಚಾರ್ಯ ಅಧ್ಯಕ್ಷರಾದ ಮಂಜುನಾಥ್ ಜೈನ್, ಉಪಾಧ್ಯಕ್ಷರಾದ ಈ.ಟಿ.ಲಿಂಗರಾಜ್, ಉಪಾಧ್ಯಕ್ಷ ಶಿವಕುಮಾರ್, ಅಧ್ಯಕ್ಷ ಭರ್ಮಜ್ಜ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಮೀರಾಬಾಯಿ, ಕಾರ್ಯದರ್ಶಿ ಭಾಗ್ಯಮ್ಮ ಉಪಸ್ಥಿತರಿದ್ದರು.

ಈಶ್ವರ ಖಂಡ್ರೆಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

ಸುದ್ದಿಗೋಷ್ಠಿಯಲ್ಲಿ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಅಧ್ಯಕ್ಷ ಚಂದ್ರಶೇಖರ ಪಾಟೀಲ್ ಮಿರ್ಜಾಪುರು ಮಾತನಾಡಿದರು.

ರಾಯಚೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆಯವರಿಗೆ ಉಪಮುಖ್ಯಮಂತ್ರಿ ಸ್ಥಾನನೀಡಬೇಕು ಎಂದು ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಅಧ್ಯಕ್ಷ ಚಂದ್ರಶೇಖರ ಪಾಟೀಲ್ ಮಿರ್ಜಾಪುರು ಒತ್ತಾಯಿಸಿದರು. ಸುದ್ದಿಗೋಷ್ಠಿ ಮಾತನಾಡಿದ ಅವರು, ಕಳೆದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಕೆಪಿಸಿಸಿ ಸೇರಿದಂತೆ ಸಚಿವರಾಗಿ ಕಾರ್ಯನಿರ್ವ ಹಿಸಿರುವ ಈಶ್ವರ ಖಂಡ್ರೆಯವರು ಶ್ರದ್ದೆ ಮತ್ತು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದ್ದಾರೆ. ನೂತನವಾಗಿ. ಡಿ.ಕೆ. ಶಿವುಕುಮಾರ ನೇತೃತ್ವದಲ್ಲಿ ರಚನೆಯಾಗುವ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಹೇಳಿದರು. ಅಲ್ಲದೇ ಸಿಂಧನೂರು ವಿಧಾನಸಭಾ ಕ್ಷೇತ್ರರಿಂದ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಂಪನಗೌಡ ಬಾದರ್ಲಿಯವರಿಗೆ ಸೇವಾ ಹಿರಿತನ ಪರಿಗಣಿಸಿ ಸಚಿವ ಸ್ಥಾನ ನೀಡಬೇಕು. ಪ್ರಸ್ತುತ ರಚನೆಯಾಗಲಿರುವ ಸಚಿವ ಸಂಪುಟದಲ್ಲಿ ಸಮಾಜದ 10 ರಿಂದ 11 ಜನರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಭೀಮರೆಡ್ಡಿ ಕಲ್ಲೂರು, ಸೋಮನಾಥ ಗಣದಿನ್ನಿ, ಡಾ.ಪರಮೇಶ್ವರಪ್ಪ ಸಾಲಿಮಠ, ಪ್ರತಿಭಾ ಗೋನಾಳ ಉಪಸ್ಥಿತರಿದ್ದರು.

ಸರಕಾರಕ್ಕೆ ಕರವೇ ಜಿಲ್ಲಾಧ್ಯಕ್ಷ ಗಿರೀಶ ಆಗ್ರಹ

ಅಕ್ರಮ ಮದ್ಯ ಮಾರಾಟಕ್ಕೆ ಬ್ರೇಕ್ ಹಾಕಿ

ಕೊಪ್ಪಳ: ತಾಲೂಕಿನ ಬೂದಗುಂಪ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಮಿತಿಮೀರಿದ್ದು, ಗ್ರಾಮಸ್ಥರ ನೆಮ್ಮದಿ ಹಾಳಾಗಿದೆ. ಧಾರ್ಮಿಕ ಸ್ಥಳಗಳಾದ ದೇವಸ್ಥಾನ, ಮಸೀದಿ ಹಾಗೂ ಗ್ರಂಥಾಲಯದ ಮುಂದೆಯೇ ರಾಜಾರೋಷವಾಗಿ ಮದ್ಯ ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಬಿ.ಗಿರಿಶಾನಂದ ಆರೋಪಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿ, ಬೂದಗುಂಪ ಗ್ರಾಮದಲ್ಲಿ ಪಾನ್ ಶಾಪ್ ನಲ್ಲೂ ಮದ್ಯ ಮಾರಾಟ ಮಾಡುತ್ತಿದ್ದಾರೆ. ಮೇಲ್ನೋಟಕ್ಕೆ ಪಾನ್ ಶಾಪ್ ವ್ಯಾಪಾರ ಎಂದು ಹೇಳುತ್ತಾರೆ. ಆದರೆ, ಅಬಕಾರಿ ನಿಯಮ ಗಾಳಿಗೆ ತೂರಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಇದನ್ನು ಪ್ರಶ್ನಿಸುವ ಸಾರ್ವಜನಿಕರಿಗೆ ಹಲ್ಲೆ ಮಾಡಿ, ಬೆದರಿಕೆ ಹಾಕುತ್ತಿದ್ದಾರೆ ಎಂಬ ದೂರುಗಳು ಕೇಳಿಬಂದಿವೆ.

ಗ್ರಾಮದ ಹೃದಯ ಭಾಗದಲ್ಲೇ ಇಷ್ಟೆಲ್ಲ ಅವಾಂತರ ನಡೆದರೂ ಅಬಕಾರಿ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದಾರೆ. ಇದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಪ್ರಭಾವಿಗಳ ಬೆಂಬಲವೇ ಈ ಅಕ್ರಮಕ್ಕೆ ಶ್ರೀರಕ್ಷೆಯಾಗಿದೆಯೇ ಎಂಬ ಪ್ರಶ್ನೆ ಎದ್ದಿದೆ ಎಂದು ದೂರಿದ್ದಾರೆ.

ಕೊಪ್ಪಳ ತಾಲೂಕು ಬೂದಗುಂಪ ಗ್ರಾಮದಲ್ಲಿ ಪಾನ್ ಶಾಪ್ ನಲ್ಲೂ ಮದ್ಯ ಮಾರಾಟ ಮಾಡುತ್ತಿರುವುದು.

ಗ್ರಾಮದ ಪ್ರಮುಖ ವೃತ್ತದಲ್ಲಿನ ಶಿವ ದೇವಸ್ಥಾನ, ಮಸೀದಿ ಮತ್ತು ಸಾರ್ವಜನಿಕ ಗ್ರಂಥಾಲಯದ ಸುತ್ತಮುತ್ತಲೇ ಅಕ್ರಮ ಮದ್ಯದ ಅಡ್ಡೆಗಳು ತಲೆಯೆತ್ತಿವೆ. ಮುಂಜಾನೆ ಮತ್ತು ಸಂಜೆ ವೇಳೆ ಭಕ್ತರು ಹಾಗೂ ವಿದ್ಯಾರ್ಥಿಗಳು ಮದ್ಯಪಾನಿಗಳ ಕಿರಿಕಿರಿಗೆ ಬೇಸತ್ತು ಹೋಗಿದ್ದಾರೆ. ಭಕ್ತಿ ಮತ್ತು ಜ್ಞಾನದ ಕೇಂದ್ರದ ಜಾಗ ಕಿಡಿಗೇಡಿಗಳ ತಾಣವಾಗಿ ಮಾರ್ಪಟ್ಟಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ದೇವಸ್ಥಾನಕ್ಕೆ ಬರುವ ಮಹಿಳೆಯರು ಹಾಗೂ ಗ್ರಂಥಾಲಯಕ್ಕೆ ಬರುವ ಓದುಗರು ಭಯದಲ್ಲಿ ಬದುಕುವಂತಾಗಿದೆ. ಮದ್ಯದ ಅಮಲಿನಲ್ಲಿ ಕಿಡಿಗೇಡಿಗಳು ಅಸಭ್ಯವಾಗಿ ವರ್ತಿಸುವುದು ಮತ್ತು ದಾರಿಹೋಕರಿಗೆ ತೊಂದರೆ ಕೊಡುವುದು ನಿತ್ಯವೂ ನಡೆಯುತ್ತಿದೆ. ಇದರಿಂದ ಜನರು, ನಮಗೆ ಮನೆ ಬಿಟ್ಟು ಹೊರ ಬರಲು ನಮಗೆ ಭಯ ಆಗುತ್ತಿದೆ ಎಂದು ಗ್ರಾಮದ ಮಹಿಳೆಯರು ತಮ್ಮ ಅಳಲು ತೋಡಿಕೊಂಡಿದ್ದಾರೆ ಎಂದು ಪ್ರಕಟಣೆಯಲ್ಲಿ ದೂರಿದ್ದಾರೆ.

213ನೇ ದಿನದ ಬಲ್ಡೋಟ ವಿರೋಧಿ ಧರಣಿ ಯಶಸ್ವಿ

ಕೊಪ್ಪಳ: ನಗರಸಭೆ ಮುಂದೆ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ನಡೆಯುತ್ತಿರುವ 213ನೇ ದಿನದ ಧರಣಿ ಯಶಸ್ವಿಯಾಯಿತು. ನಗರಕ್ಕೆ ಹೊಂದಿಕೊಂಡು 54 ಸಾವಿರ ಕೋಟಿ ಹೂಡಿಕೆಯಲ್ಲಿ ಬಲ್ಡೋಟ ಕಂಪನಿ ಇಂಟಿಗ್ರೇಟೆಡ್ ಸ್ಟೀಲ್, ಕಲ್ಲಿದ್ದಲು ಸುಟ್ಟು ವಿದ್ಯುತ್ ಮತ್ತು ಡಾಂಬರು ತಯಾರಿಸುವ ಕಾರ್ಖಾನೆ ಸ್ಥಾಪನೆ ಮಾಡಲು ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಿದ್ದಂತೆ, ಈ ಕುರಿತು ಎಚ್ಚೆತ್ತುಕೊಂಡ ಗವಿಶ್ರೀಗಳು ಧರ್ಮಾದೇಶ ಮಾಡಿ, ಈ ಬೃಹತ್ ಹೂಡಿಕೆ ಅವಳಿ ನಗರ ಮತ್ತು ಸುತ್ತಲಿನ ಹಳ್ಳಿಗಳ ಜನರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ತಡೆಯಬೇಕಾದರೆ ಈ ಒಡಂಬಡಿಕೆ ರದ್ದುಗೊಳಿಸಿದ ಆದೇಶ ಪತ್ರವನ್ನು ಜನಪ್ರತಿನಿಧಿಗಳು ತರಬೇಕೆಂದು, ನಗರದ ಪೂರ್ವ ಭಾಗದಲ್ಲಿ 2011ರಿಂದ ಬಲ್ಡೋಟ ಮಾಲಿಕತ್ವದ ಎಂಎಸ್ಪಿಎಲ್ ಪೆಲ್ಲೆಟ್ ಘಟಕದ ಕಂದು ಧೂಳು ನಗರದ ಅರ್ಧ ಭಾಗ ಬಾಧಿಸುತ್ತಿದೆ. ನಗರದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತಿದ್ದು ಈ ಘಟಕ ಬಂದ್ ಮಾಡಿ ಜನರ ಆರೋಗ್ಯ ಕಾಪಾಡಬೇಕೆಂದು, ಬಲ್ಡೋಟ ಕಂಪನಿಯು ಬಸಾಪುರ ಗ್ರಾಮದ ಸಾರ್ವಜನಿಕ ಕೆರೆಯನ್ನು ಅನಧಿಕೃತವಾಗಿ ವಶಪಡಿಸಿಕೊಂಡಿದ್ದು, ಕೆರೆಯ ಸುತ್ತ ಕಂಪನಿ ಹಾಕಿದ ಕಾಂಪೌಂಡ್ ತೆರವು ಮಾಡಿ ಜಾನುವಾರು ನೀರು ಕುಡಿಯಲು ಅವಕಾಶ ಮಾಡಿಕೊಡಬೇಕೆಂದು ಧರಣಿಯಲ್ಲಿ ಆಗ್ರಹಿಸಿದ್ದಾರೆ. ನಿವೃತ್ತ ಪ್ರಾಚಾರ್ಯ ಎಲ್.ಎಫ್ .ಪಾಟೀಲ, ಸಂಚಾಲಕ ಮಲ್ಲಿಕಾರ್ಜುನ ಬಿ. ಗೋನಾಳ, ರಾಜಶೇಖರ ಏಳುಬಾವಿ, ರಂಗಕರ್ಮಿ ಲಕ್ಷ್ಮಣ ಪೀರಗಾರ, ಶರಣು ಶೆಟ್ಟರ್, ಮಹಾದೇವಪ್ಪ ಮಾವಿನಮಡು, ಬಸವರಾಜಪ್ಪ ಶೆಟ್ಟರ್, ಭೀಮಪ್ಪ ಯಲಬುರ್ಗಾ, ಶಿವಪ್ಪ ಜಲ್ಲಿ, ಮುತ್ತುರಾಜ ತೋಟದ ಇದ್ದರು.

ನಕಲಿ ರಸಗೊಬ್ಬರ ಅಂಗಡಿ, ಬಂಕ್‌ಗಳ ಮೇಲೆ ದಾಳಿ

ಮುದಗಲ್: ಮುಂಗಾರು ಬಿತ್ತನೆ ಕಾರ್ಯ ಚುರುಕುಗೊಂಡಿರುವ ಹಿನ್ನೆಲೆ ರೈತರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳಲು ಲಿಂಗಸುಗೂರು ತಹಸೀಲ್ದಾರ್‌ಸತ್ಯಮ್ಮ ಅವರ ನೇತೃತ್ವದ ಅಧಿಕಾರಿಗಳ ತಂಡ ಮುದಗಲ್ ಪಟ್ಟಣದ ವಿವಿಧ ಬೀಜ, ರಸಗೊಬ್ಬರ ಅಂಗಡಿಗಳು ಹಾಗೂ ಪೆಟ್ರೋಲ್ ಬಂಕ್‌ಗಳಿಗೆ ದಿಢೀರ್‌ಭೇಟಿ ನೀಡಿ ಪರಿಶೀಲನೆ ನಡೆಸಿತು.

> ಅವಧಿ ಮೀರಿದ ಬೀಜ, ರಸಗೊಬ್ಬರ ಹಾಗೂ ಕೀಟ ನಾಶಕಗಳನ್ನು ಮಾರಾಟ ಮಾಡಬಾರದು. ಇಂತಹ ಅಕ್ರಮ ಚಟುವಟಿಕೆಗಳು ಕಂಡು ಬಂದರೆ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ರೈತರಿಗೆ ಸೇವೆ ನೀಡುವಲ್ಲಿ ನಿರ್ಲಕ್ಷ್ಯ ತೋರಿದ ಅಂಗಡಿಗಳ ವಿರುದ್ಧ ಕ್ರಮ ಕೈಗೊಂಡು ಅಗತ್ಯವಿದ್ದರೆ ಪರವಾನಗಿಯನ್ನೇ ರದ್ದುಪಡಿಸಿ.
>
> -ಸತ್ಯಮ್ಮ, ತಹಸೀಲ್ದಾರ್

ಪರಿಶೀಲನೆ ವೇಳೆ ಅಂಗಡಿ ಮಾಲೀಕರಿಗೆ ಹಾಗೂ ಪೆಟ್ರೋಲ್ ಬಂಕ್ ನಿರ್ವಾಹಕರಿಗೆ ಅಗತ್ಯ ಸೂಚನೆಗಳನ್ನು ನೀಡಿದ ತಹಸೀಲ್ದಾರ್, ಗ್ರಾಹಕರಿಗೆ ತೊಂದರೆ ಉಂಟಾಗದ ರೀತಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮಾಡಬೇಕು ಎಂದು ಸೂಚಿಸಿದರು. ಯಾವುದೇ ಕಾರಣಕ್ಕೂ ಕೃತಕ ಅಭಾವ ಸೃಷ್ಟಿಸಿ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟು ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ, ಮುಂಗಾರು ಬಿತ್ತನೆಗೆ ಅಗತ್ಯವಾದ ಬೀಜ ಮತ್ತು ರಸಗೊಬ್ಬರಗಳ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ನಿಗದಿತ ದರದಲ್ಲೇ ಮಾರಾಟ ಮಾಡಬೇಕು ಎಂದು ಅಂಗಡಿ ಮಾಲೀಕರಿಗೆ ಸೂಚನೆ ನೀಡಿದರು.

ಲಿಂಗಸುಗೂರು ತಹಸೀಲ್ದಾರ್‌ಸತ್ಯಮ್ಮ ಅವರ ನೇತೃತ್ವದ ಅಧಿಕಾರಿಗಳ ತಂಡ ಮುದಗಲ್ ಪಟ್ಟಣದ ವಿವಿಧ ಬೀಜ, ರಸಗೊಬ್ಬರ ಅಂಗಡಿಗಳು ಹಾಗೂ ಪೆಟ್ರೋಲ್ ಬಂಕ್‌ಗಳಿಗೆ ದಿಢೀರ್‌ಭೇಟಿ ನೀಡಿ ಪರಿಶೀಲನೆ ನಡೆಸಿತು.

ಸರಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬೆಲೆ ವಸೂಲಿ ಮಾಡಿದರೆ ಅಥವಾ ರೈತರಿಗೆ ಅನಗತ್ಯ ತೊಂದರೆ ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪರಿಶೀಲನಾ ಕಾರ್ಯಾಚರಣೆಯಲ್ಲಿ ಕೃಷಿ ಇಲಾಖೆ ಅಧಿಕಾರಿ ಶ್ರೀಶೈಲ ಬಿರಾರ್, ನಾಡ ತಹಸೀಲ್ದಾರ್‌ತುಳಜರಾಮ ಸಿಂಗ್, ತಹಸೀಲ್ದಾರ್ ಕಚೇರಿ ಸಿಬ್ಬಂದಿ ಅಮರೇಶ, ಗ್ರಾಮ ಆಡಳಿತಾಧಿಕಾರಿ ದೀಪಿಕಾ ರಾಠೋಡ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮಂತ್ರಿ ಸ್ಥಾನ ನೀಡಲು ಒತ್ತಡ ಹಾಕಿದ್ದೇವೆ

ಕೊಪ್ಪಳ: ಮೂರು ಬಾರಿ ಶಾಸಕರಾಗಿರುವ ಕೊಪ್ಪಳ ಶಾಸಕ ರಾಘವೇಂದ್ರ, ಹಿಟ್ನಾಳ ಅವರನ್ನು ಮಂತ್ರಿ ಮಾಡಬೇಕು ಎಂದು ಒತ್ತಾಯ ಮಾಡಿದ್ದೇವೆ. ಈ ಬಾರಿ ಮಂತ್ರಿ ಮಾಡಬೇಕು ಎಂದು ನಿಯೋಜಿತ ಸಿಎಂ ಡಿಸಿಎಂಗೂ ಮನವರಿಕೆ ಮಾಡಿದ್ದು, ಸ್ಥಾನ ನೀಡುವ ಭರಸವೆ ಇದೆ ಎಂದು ಸಂಸದ ರಾಜಶೇಖರ ಹಿಟ್ನಾಳ ಹೇಳಿದರು.

ಕೊಪ್ಪದಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, ಈಗಾಗಲೇ ಸಚಿವ ಸ್ಥಾನದ ಹಂಚಿಕೆ ಪ್ರಕ್ರಿಯೆ ಆರಂಭವಾಗಿದೆ. ಸಹೋದರ ರಾಘವೇಂದ್ರ, ಮೂರು ಬಾರಿ ಶಾಕರಾಗಿ, ಎರಡು ಬಾರಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಕೆಲಸ ಮಾಡಿರುವ ಅನುಭವ ಹೊಂದಿದ್ದಾರೆ. ಈ ಭಾಗದ ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಈ ಎಲ್ಲ ಕಾರಣಕ್ಕೆ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸ ಇದೆ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯ ಅವರು ಹಿಟ್ನಾಳ ಕುಟುಂಬಕ್ಕೆ ಬಹಳಷ್ಟು ಆತ್ಮೀಯರು. ಡಿ.ಕೆ. ಶಿವಕುಮಾರ ಕೂಡಾ ಆತ್ಮೀಯರು. ಎಲ್ಲರಿಗೂ ಒತ್ತಡ ಹಾಕುವ ಕೆಲಸ ಮಾಡಿದ್ದೇವೆ. ನಮ್ಮನ್ನು ಗುರುತಿಸುತ್ತಾರೆ ಎಂಬ ವಿಶ್ವಾಸ ಇದೆ. ಈ ಹಿಂದೆ ನಮ್ಮ ಸಮಾಜದವರೇ ಸಿಎಂ ಆಗಿದ್ದರಿಂದ ಬೇರೆ ಸಮಾಜಕ್ಕೆ ಅವಕಾಶ ಕೊಡಲು ರಾಘವೇಂದ್ರ ಹಿಟ್ನಾಳಗೆ ಅವಕಾಶ ನೀಡಿರಲಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ನಮ್ಮ ಸಮಾಜದ 5 ಶಾಸಕರಿದ್ದಾರೆ. ಅದರಲ್ಲಿ ಇಬ್ಬರಿಗೆ ನಿಗಮ- ಮಂಡಳಿ ಅಧ್ಯಕ್ಷ ಸ್ಥಾನ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಘವೇಂದ್ರ ಹಿಟ್ನಾಳ ಒಬ್ಬರೆ ಇರೋದು. ಇದರಿಂದ ಮಂತ್ರಿ ಸ್ಥಾನ ಕೊಡುವ ವಿಶ್ವಾಸ ಇದೆ ಎಂದರು.

> ಅನೇಕ ವರ್ಷದಿಂದ ಕೊಪ್ಪಳ ಕ್ಷೇತ್ರದಿಂದ ಯಾರೂ ಮಂತ್ರಿ ಆಗಿಲ್ಲ. ಪಕ್ಷ ಹಾಗೂ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಬೇಕಿದೆ. ಹೈಕಮಾಂಡ್ ಯಾರಿಗೂ ಭರವಸೆ ಕೊಡುವುದಿಲ್ಲ. ಬದಲಾಗಿ ತೀರ್ಮಾನ ತೆಗೆದು ಕೊಳ್ಳುತ್ತದೆ. ನಮ್ಮದು ರಾಷ್ಟ್ರೀಯ ಪಕ್ಷ. ಇಲ್ಲಿ ಬಹಳಷ್ಟು ಸೀನಿಯರ್‌ಲೀಡರ್ಸ್ ಇದ್ದಾರೆ. ಆದರೂ, ಈ ಭಾರಿ ಸಚಿವ ಸ್ಥಾನ ಸಿಗುವ ವಿಶ್ವಾಸ ಇದೆ.
>
> -ರಾಜಶೇಖರ ಹಿಟ್ನಾಳ, ಸಂಸದ

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಸೂರ್ಯವಂಶಿ
ರಾಜಸ್ಥಾನ

ಪರ್ಪಲ್ ಕ್ಯಾಪ್
ರಬಾಡ
ಗುಜರಾತ್

IPL T20 2026

ಟಾಸ್ ಗೆದ್ದ ಆರ್‌ಸಿಬಿ

ಗಿಲ್ ಔಟ್, ಆರ್‌ಸಿಬಿಗೆ 1ನೇ ವಿಕೆಟ್

ಸಾಯಿ ಔಟ್, ಆರ್‌ಸಿಬಿಗೆ 2ನೇ ಬಲಿ

ದಂತಕಥೆ ಡಿವಿಲಿಯರ್ಸ್ ಜೊತೆ ಕೊಹ್ಲಿ

ಮೋದಿ ಮೈದಾನದಲ್ಲಿ ಕೊಹ್ಲಿ ಕೂಗು

ಕೊಹ್ಲಿ ಜನತಾ ಪಾರ್ಟಿ ಬ್ಯಾನರ್

ಗುಜರಾತ್ ತವರು ನೆಲದಲ್ಲೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹವಾ
ಸತತ 2ನೇ ಪ್ರಶಸ್ತಿ | ಭುವಿ, ರಸಿಖ್ ಪ್ರಭಾವಿ ದಾಳಿ, ಕೊಹ್ಲಿ ಅಜೇಯ 75 ರನ್

ಆರ್‌ಸಿಬಿಗೆ 2ನೇ ಕಪ್, ಕೊಹ್ಲಿ ಕಿಂಗ್

ಅಹ್ಮದಾಬಾದ್: ತುಂಬಿತುಳುಕುತ್ತಿದ್ದ ನರೇಂದ್ರ ಮೋದಿ ಮೈದಾನ, ಕಿವಿಗಡಚಿಕ್ಕುವ ಅಭಿಮಾನಿಗಳ ಸದ್ದು, ಗುಜರಾತ್ ಟೈಟಾನ್ಸ್ ತವರು ನೆಲದಲ್ಲೂ ಕೊಹ್ಲಿ ಕೊಹ್ಲಿ ಕೂಗಿನ ನಡುವೆ ಭಾನುವಾರ ಐಪಿಎಲ್ ಫೈನಲ್ ಆರಂಭವಾಯಿತು. ಆರ್‌ಸಿಬಿ ಟಾಸ್ ಗೆದ್ದು ಕ್ಷೇತ್ರರಕ್ಷಣೆ ಆಯ್ದು ಕೊಂಡಿತು. ಆರ್‌ಸಿಬಿ ಬೌಲರ್‌ಗಳ ಸಂಘಟಿತ ದಾಳಿಗೆ ನಲುಗಿದ ಗುಜರಾತ್ 20 ಓವರ್ ಮುಗಿದಾಗ 8 ವಿಕೆಟ್‌ಗೆ 155 ರನ್ ಗಳಿಸಿತು. ಚೇಸಿಂಗ್ ಕಿಂಗ್ ಕೊಹ್ಲಿ ಅಸಾಧಾರಣ ಬ್ಯಾಟಿಂಗ್ ಪರಿಣಾಮ 18 ಓವರ್‌ಗಳಲ್ಲೇ 5 ವಿಕೆಟ್ 161 ರನ್ ಗಳಿಸಿದ ಆರ್‌ಸಿಬಿ 5 ವಿಕೆಟ್‌ಗಳಿಂದ ಜಯ ಸಾಧಿಸಿತು. ಇದರೊಂದಿಗೆ ಸತತ 2ನೇ ವರ್ಷವೂ ಕಪ್ ಎತ್ತಿಕೊಂಡಿತು. ಇನ್ನೂ 12 ಎಸೆತ ಬಾಕಿಯಿದ್ದಂತೆ ಐಪಿಎಲ್ ಸಾಮ್ರಾಟನಾಯಿತು.

ಗುಜರಾತ್ ಬ್ಯಾಟಿಂಗ್ ವಿಭಾಗ ಸಂಪೂರ್ಣ ಆತ್ಮವಿಶ್ವಾಸ ಕಳೆದುಕೊಂಡಂತೆ ಆಡಿತು. 2ನೇ ಕ್ವಾಲಿಫೈಯರ್‌ನಲ್ಲಿ ರಾಜಸ್ಥಾನ್ ವಿರುದ್ಧ ಅಬ್ಬರಿಸಿದ್ದ ಶುಭಮನ್ ಗಿಲ್-ಸಾಯಿ ಸುದರ್ಶನ್ ಜೋಡಿ ಮೊದಲನೇ ವಿಕೆಟ್‌ಗೆ 167 ರನ್ ಒಗ್ಗೂಡಿಸಿತ್ತು. ಭಾನುವಾರ ಇಬ್ಬರ ಆಟದಲ್ಲೂ ಆ ಜಾದೂ ಕಾಣಲಿಲ್ಲ. 22 ರನ್‌ಗಳಾಗಿದ್ದಾಗ ನಾಯಕ ಗಿಲ್ ಬರೀ 10 ರನ್ ಗಳಿಸಿ ಹೊರ ನಡೆದರು. ಈ ಆಘಾತದಲ್ಲಿದ್ದಾಗಲೇ ತಂಡದ ಮೊತ್ತ 26 ರನ್‌ಗಳಾಗಿದ್ದಾಗ ಸಾಯಿ ಸುದರ್ಶನ್ 2ನೇ ವಿಕೆಟ್ ರೂಪದಲ್ಲಿ ಔಟಾದರು. 55 ರನ್‌ಗೆ ನಿಶಾಂತ್ ಸಿಂಧು ಹೊರ ನಡೆದಾಗ ಗುಜರಾತ್ ಬ್ಯಾಟಿಂಗ್ ಕುಸಿಯುವುದು ಖಚಿತವಾಯಿತು.

ಮುಂದೆ ತಂಡದ ಪರ ಹೋರಾಟವನ್ನು ಜಾರಿಯಲ್ಲಿಟ್ಟಿದ್ದು ವಾಷಿಂಗ್ಟನ್ ಸುಂದರ್ ಮಾತ್ರ. ಅವರು 37 ಎಸೆತಗಳಲ್ಲಿ 5 ಬೌಂಡರಿ ಸಮೇತ 50 ರನ್ ಸಿಡಿಸಿದರು. ವಿಶೇಷವೆಂದರೆ ಗುಜರಾತ್ ಇನಿಂಗ್ಸ್‌ನಲ್ಲಿ ಮೂವರು ತಲಾ 7 ರನ್ ಗಳಿಸಿದರು. ರಾಹುಲ್ ತೆವಾತಿಯಾ, ಜೇಸನ್ ಹೋಲ್ಡರ್, ರಶೀದ್ ಖಾನ್ ಈ ವಿಶಿಷ್ಟ ಸಾಧಕರು!

ಆರ್‌ಸಿಬಿ ಬೌಲಿಂಗ್ ದಾಳಿ ಶ್ರೇಷ್ಠವಾಗಿತ್ತು. ತಂಡದ ಪ್ರಮುಖ ವೇಗಿ ಭುವನೇಶ್ವರ್ ಕುಮಾರ್ 29 ರನ್ ನೀಡಿ 2 ವಿಕೆಟ್ ಪಡೆದರು. ಜೋಶ್ ಹೇಜಲ್‌ವುಡ್ 37 ರನ್ ನೀಡಿ 2 ವಿಕೆಟ್ ಕಿತ್ತರು. ಜಮ್ಮುಕಾಶ್ಮೀರದ ವೇಗದ ಬೌಲರ್ ರಸಿಖ್ ಸಲಾಮ್ ದಾರ್ 27 ರನ್ ನೀಡಿ 3 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್
ಗುಜರಾತ್ 20 ಓವರ್, 155/8 (ವಾಷಿಂಗ್ಟನ್ ಸುಂದರ್ 50, ನಿಶಾಂತ್ ಸಿಂಧು 20, ರಸಿಖ್ ಸಲಾಮ್ 27ಕ್ಕೆ 3, ಭುವನೇಶ್ವರ್ ಕುಮಾರ್ 29ಕ್ಕೆ 2, ಜೋಶ್ ಹೇಜಲ್‌ವುಡ್ 37ಕ್ಕೆ 2). ಆರ್‌ಸಿಬಿ 18 ಓವರ್, 161/5 (ಕೊಹ್ಲಿ 75, ವೆಂಕಟೇಶ್ ಅಯ್ಯರ್ 32, ರಶೀದ್ ಖಾನ್ 25ಕ್ಕೆ 2)

ಸೂರ್ಯವಂಶಿಗೆ ಆರೇಂಜ್ ಕ್ಯಾಪ್ ಐಪಿಎಲ್ ಇತಿಹಾಸದ ಕಿರಿಯ ಸಾಧಕ

15 ವರ್ಷದ ವೈಭವ್ ಸೂರ್ಯವಂಶಿ ಇತಿಹಾಸ ಸೃಷ್ಟಿಸಿದ್ದಾರೆ. ಗರಿಷ್ಠ ರನ್ ಗಳಿಕೆಗೆ ಸಿಗುವ ಆರೇಂಜ್ ಕ್ಯಾಪ್ ಗೆಲ್ಲುವ ಮೂಲಕ, ಈ ಸಾಧನೆ ಮಾಡಿದ ಕಿರಿಯ ಬ್ಯಾಟರ್ (16 ಪಂದ್ಯ, 776) ಎನಿಸಿದರು. ಫೈನಲ್‌ನಲ್ಲಿ ಆರೇಂಜ್ ಕ್ಯಾಪ್ ಪಡೆಯುವ ಅವಕಾಶ ಗುಜರಾತ್ ಬ್ಯಾಟರ್‌ಗಳಾದ ಗಿಲ್, ಸುದರ್ಶನ್‌ಗೆ ಇತ್ತು. ಇಬ್ಬರೂ ಕಡಿಮೆ ಮೊತ್ತಕ್ಕೆ ಔಟಾಗಿ ಅವಕಾಶ ಕಳೆದುಕೊಂಡರು.

ರಸಿಖ್‌ಗೆ ಸಲಾಮ್

2026ರ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಅತ್ಯಂತ ಪ್ರಭಾವಿ ದಾಳಿ ನಡೆಸಿದ ಬೌಲರ್‌ಗಳಲ್ಲಿ ರಸಿಖ್ ಸಲಾಮ್ ಕೂಡ ಒಬ್ಬರು. ಅಂತಿಮ ಪಂದ್ಯದಲ್ಲಿ ಅವರು ತಮ್ಮ ಬೌಲಿಂಗ್‌ನಲ್ಲಿ ಜಾದೂ ಮಾಡಿದರು. ತಂಡಕ್ಕೆ ಅಗತ್ಯವಿದ್ದ ಸಂದರ್ಭದಲ್ಲಿ ಉತ್ತಮವಾಗಿ ದಾಳಿ ನಡೆಸಿದ ಅವರು 27 ರನ್ ನೀಡಿ 3 ವಿಕೆಟ್ ಪಡೆದರು. ನಿಶಾಂತ್ ಸಿಂಧು, ರಾಹುಲ್ ತೆವಾತಿಯಾ, ರಶೀದ್ ಖಾನ್ ರಸಿಖ್ ದಾಳಿಗೆ ಔಟಾಗಿ ಹೊರ ನಡೆದರು.

20 ಕೋಟಿ ರು.
ವಿಜೇತ ತಂಡಕ್ಕೆ ಸಿಕ್ಕ ಪ್ರಶಸ್ತಿ ಮೊತ್ತ

12.5 ಕೋಟಿ ರು.
ರನ್ನರ್ ಅಪ್ ತಂಡಕ್ಕೆ ಸಿಕ್ಕ ಪ್ರಶಸ್ತಿ ಮೊತ್ತ

ಭುವಿ ಮತ್ತೆ ಪ್ರಭಾವಿ

ಈ ಬಾರಿ ಐಪಿಎಲ್‌ನಲ್ಲಿ ಆರ್‌ಸಿಬಿ ಬೌಲಿಂಗನ್ನು ಘಾತಕಗೊಳಿಸಿದ್ದೇ ವೇಗಿ ಭುವನೇಶ್ವರ್ ಕುಮಾರ್. ತಂಡದ ನಂಬಿಕೆಯನ್ನು ಉಳಿಸಿಕೊಂಡ ಅನುಭವಿ ವೇಗಿ ಅಂತಿಮ ಪಂದ್ಯದಲ್ಲಿ 29 ರನ್ ನೀಡಿ 2 ವಿಕೆಟ್ ಪಡೆದರು. ಎಂತಹದ್ದೇ ಸಂದರ್ಭದಲ್ಲೂ ಎದುರಾಳಿ ಬ್ಯಾಟರ್‌ಗಳು ದೊಡ್ಡ ಹೊಡೆತಕ್ಕೆ ಮುಂದಾಗದಂತೆ ದಾಳಿ ನಡೆಸುವುದು ಭುವನೇಶ್ವರ್ ಸಾಮರ್ಥ್ಯ. ಭಾನುವಾರದ ಪಂದ್ಯದಲ್ಲೂ ಅವರು ತಮ್ಮ ಕರಾಮತ್ತನ್ನು ತೋರಿ ಸಾಯಿ ಸುದರ್ಶನ್‌ರ ಮಹತ್ವದ ವಿಕೆಟ್ ಪಡೆದರು.

ಮರೆಯಲಾಗದ ಇನಿಂಗ್ಸ್‌ಗಳು

1 **2ನೇ ಕ್ವಾಲಿಫೈಯರ್, ಗಿಲ್ 104:** ರಾಜಸ್ಥಾನ್ ವಿರುದ್ಧದ 2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ನಾಯಕ ಶುಭಮನ್ ಗಿಲ್ 104 ರನ್ ಬಾರಿಸಿ ತಂಡವನ್ನು ಫೈನಲ್ ಗೊಯ್ದರು. ಸೂರ್ಯವಂಶಿಯ ಸ್ಫೋಟಕ ಬ್ಯಾಟಿಂಗ್‌ನೆದುರು ಗಿಲ್ ತೊಡೆತಟ್ಟಿ ಗೆದ್ದರು.

2 **ಕೆ.ಎಲ್.ರಾಹುಲ್ 152 ರನ್:** ಐಪಿಎಲ್ ಇತಿಹಾಸದಲ್ಲೇ ಅದ್ಭುತ ಇನಿಂಗ್ಸ್‌ಗಳಲ್ಲೊಂದನ್ನು ಈ ಬಾರಿ ಕೆ.ಎಲ್. ರಾಹುಲ್ ಬಾರಿಸಿದ್ದಾರೆ. ಏ.25ರಂದು ಪಂಜಾಬ್ ವಿರುದ್ಧ ಡೆಲ್ಲಿ ಪರ ಅವರು 67 ಎಸೆತಗಳಲ್ಲಿ 152 ರನ್ ಚಚ್ಚಿದರು. ಭಾರತೀಯನೊಬ್ಬ ಐಪಿಎಲ್‌ನಲ್ಲಿ 150 ರನ್ ದಾಟಿದ ಮೊದಲ ಉದಾಹರಣೆಯಿದು. ಆದರೂ ಡೆಲ್ಲಿ ಸೋತುಹೋಯಿತು.

3 **ಅಭಿಷೇಕ್ ಶರ್ಮಾ 135 ರನ್:** ಏ.21ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಹೈದರಾಬಾದ್ ಬ್ಯಾಟರ್ 68 ಎಸೆತಗಳಲ್ಲಿ 135 ರನ್ ಚಚ್ಚಿದರು. ಯಾವುದಕ್ಕೂ ಜಗ್ಗದೇ ಅಸಾಮಾನ್ಯವಾಗಿ ಅವರು ಬಾರಿಸುತ್ತಿದ್ದ ಹೊಡೆತ ರೀತಿ, ಈ ಇನಿಂಗ್ಸ್‌ನಲ್ಲಿ ಈ ಕೂಟದ ಸ್ಮರಣೀಯ ಇನಿಂಗ್ಸ್ ಸಾಲಿಗೆ ಸೇರಿಸಿದೆ.

ಮರೆಯಲಾಗದ ಬೌಲಿಂಗ್ ದಾಳಿ

1 **ವರುಣ್ ಚಕ್ರವರ್ತಿ, 14ಕ್ಕೆ 3:** ಏ.19ರಂದು ಕೋಲ್ಕತಾ ಪರ ಸ್ಪಿನ್ನರ್ ವರುಣ್ ಚಕ್ರವರ್ತಿ 14 ರನ್ ನೀಡಿ 3 ವಿಕೆಟ್ ಪಡೆದರು. ಇದು ರಾಜಸ್ಥಾನ್ ರಾಯಲ್ಸ್ ತಂಡದ ಮಧ್ಯಮಕ್ರಮಾಂಕದ ಬ್ಯಾಟಿಂಗನ್ನು ನೆಲಕಚ್ಚಿಸಿತು.

2 **ಜೇಸನ್ ಹೋಲ್ಡರ್, 24ಕ್ಕೆ 4:** ಗುಜರಾತ್ ಆಲ್‌ರೌಂಡರ್, ವೇಗಿ ಜೇಸನ್ ಹೋಲ್ಡರ್ ಮೇ 3ರಂದು ಪಂಜಾಬ್ ಕಿಂಗ್ಸ್‌ನ 4 ವಿಕೆಟ್ ಕಿತ್ತಿದ್ದರು. 24 ರನ್ ನೀಡಿ ಅವರು ಮಾಡಿದ ಜಾದೂವಿನಿಂದ ಗುಜರಾತ್ ಗೆದ್ದಿತ್ತು.

3 **ರಸಿಖ್ ಸಲಾಮ್, 24ಕ್ಕೆ 4:** ಆರ್‌ಸಿಬಿ ವೇಗಿ ರಸಿಖ್ ಸಲಾಮ್ ತಮ್ಮ ವೇಗದ ದಾಳಿಯಲ್ಲಿ 24 ರನ್ ನೀಡಿ 4 ವಿಕೆಟ್ ಪಡೆದರು. ಈ ಘಾತಕ ದಾಳಿಯಿಂದ ಲಖನೌ ವಿರುದ್ಧ ಆರ್‌ಸಿಬಿಗೆ ಮಹತ್ವದ ಜಯ ಲಭಿಸಿತು.

ಸೂರ್ಯವಂಶಿ ಎಂಬ ಸುಂಟರಗಾಳಿ

2025ರ ಐಪಿಎಲ್‌ನಲ್ಲಿ 14 ವರ್ಷದ ವೈಭವ್ ಸೂರ್ಯವಂಶಿ ಶತಕ ಬಾರಿಸಿದ್ದಾಗ ಅದನ್ನೊಂದು ಆಕಸ್ಮಿಕ ಎಂದು ಬಹುತೇಕರು ಅಂದುಕೊಂಡಿದ್ದರು. ಅದಾದ ನಂತರ ಇತರೆ ಕ್ರಿಕೆಟ್‌ನಲ್ಲಿ ಸೂರ್ಯವಂಶಿ ಅಬ್ಬರ ನೋಡಿದ್ದವರು ಈ ಬಾಲಕನಲ್ಲಿ ಏನೋ ಅಸಾಮಾನ್ಯವಾದದ್ದು ಇದೆ ಎಂದುಕೊಂಡಿದ್ದರು. ಈ ಬಾರಿಯ ಐಪಿಎಲ್‌ನಲ್ಲಿ ಸೂರ್ಯವಂಶಿಯ ಆಟ ನೋಡಿದವರು ಈತನೊಬ್ಬ ಅಸಾಮಾನ್ಯ ಎಂದು ಮಾತಿಲ್ಲದೇ ಒಪ್ಪಿಕೊಂಡಿದ್ದಾರೆ. ಇವರು ಒಟ್ಟು ಮೂರು ಬಾರಿ ಶತಕ ತಪ್ಪಿಸಿಕೊಂಡಿದ್ದಾರೆ (ಮೇ 19, 93 ರನ್, ಎದುರಾಳಿ ಲಖನೌ , ಮೇ 27, 97 ರನ್, ಎದುರಾಳಿ ಹೈದರಾಬಾದ್, ಮೇ 29, 96 ರನ್, ಎದುರಾಳಿ ಗುಜರಾತ್). ಅವರೆಂದೂ ಶತಕ ತಪ್ಪಿಸಿಕೊಂಡಿ ದ್ದಕ್ಕೆ ಬೇಸರಿಸಿಲ್ಲ. ಏಪ್ರಿಲ್ 25ರಂದು ಇವರು ಹೈದರಾಬಾದ್ ಬರೀ 37 ಎಸೆತಗಳಲ್ಲಿ 103 ರನ್ ಬಾರಿಸಿ ಎಲ್ಲರನ್ನೂ ದಂಗುಬಡಿಸಿದರು. ಇಡೀ ವಿಶ್ವಕ್ರಿಕೆಟ್ ಲೋಕದಲ್ಲಿ ಇವರು ಭಾರೀ ಚರ್ಚೆಗೆ ಕಾರಣವಾಗಿದ್ದಾರೆ.

18 ವರ್ಷ ಕಾದಿದ್ದ ಆರ್‌ಸಿಬಿ

ಐಪಿಎಲ್‌ನಲ್ಲಿ ಮೊದಲ ಪ್ರಶಸ್ತಿ ಗೆಲ್ಲಲು ಆರ್‌ಸಿಬಿ 18 ವರ್ಷ ತೆಗೆದುಕೊಂಡಿತ್ತು. 2025ರಲ್ಲಿ ಮೊದಲ ಪ್ರಶಸ್ತಿ ಗೆಲ್ಲುವ ಮುನ್ನವೇ ಆರ್‌ಸಿಬಿ 3 ಬಾರಿ ಫೈನಲ್ ಆಡಿತ್ತು. ಒಮ್ಮೆಯೂ ಯಶಸ್ಸು ಸಿಕ್ಕಿರಲಿಲ್ಲ. ಅಂತೂ ಕಳೆದ ವರ್ಷ ತಂಡದ ಪ್ರಶಸ್ತಿ ಬರ ನೀಗಿತು. ತಂಡದ ಪರ ದೀರ್ಘಕಾಲ ಆಡಿದ ವಿರಾಟ್ ಕೊಹ್ಲಿಗೆ ಪ್ರಶಸ್ತಿ ಗೆಲ್ಲದೇ ನಿವೃತ್ತರಾಗುವ ಆತಂಕ ಎದುರಾ ಗಿತ್ತು. ಅಂತೂ ಅವರು ಪ್ರಶಸ್ತಿ ಗೆದ್ದು ದುಃಖ ಇಲ್ಲ ಮಾಡಿ ಕೊಂಡಿದ್ದರು.

ಚೆನ್ನೈ, ಮುಂಬೈ ಯಶಸ್ವಿ ತಂಡ

ಐಪಿಎಲ್‌ನ ಅತಿ ಯಶಸ್ವಿ ತಂಡಗಳ ಪಟ್ಟಿ ಮಾಡಿದರೆ ಮೊದಲ ಸ್ಥಾನ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸಿಕ್ಕುತ್ತದೆ. 10 ಫೈನಲ್‌ಗಳಲ್ಲಿ ಆಡಿರುವ ಅದು 5 ಬಾರಿ ಪ್ರಶಸ್ತಿ ಗೆದ್ದಿದೆ. ಈ ಎಲ್ಲ ಸಾಧನೆಗಳು ಆಗಿರುವುದು ಧೋನಿ ನಾಯಕತ್ವದಲ್ಲೇ. ಇನ್ನು ಮುಂಬೈ ಇಂಡಿಯನ್ಸ್ 6 ಫೈನಲ್‌ಗಳಲ್ಲಿ ಆಡಿದ್ದರೆ, ಐದು ಬಾರಿ ಪ್ರಶಸ್ತಿ ಗೆಲ್ಲಲು ಯಶಸ್ವಿಯಾಗಿದೆ. ಅರ್ಥಾತ್ ಆಡಿರುವ 6 ಫೈನಲ್‌ಗಳಲ್ಲಿ ಮುಂಬೈ ಗೆದ್ದಿರುವ ಟ್ರೋಫಿಗಳ ಸಂಖ್ಯೆಯನ್ನು ಗಣಿಸಿದರೆ, ಶೇಕಡವಾರು ಫಲಿತಾಂಶ ಮುಂಬೈಯದ್ದೇ ಜಾಸ್ತಿಯಾಗುತ್ತದೆ. ಆದರೆ ಚೆನ್ನೈ ಸತತವಾಗಿ ಅಂತಿಮ ಹಂತದವರೆಗೆ ಪ್ರವೇಶ ಮಾಡಿರುವುದು ಬಹಳ ದೊಡ್ಡ ಸಾಧನೆ.

ಪ್ರಶಸ್ತಿ ವಿಜೇತ ತಂಡಗಳು

2008 ರಾಜಸ್ಥಾನ್ ರಾಯಲ್ಸ್	2010 ಚೆನ್ನೈ ಸೂಪರ್ ಕಿಂಗ್ಸ್	2012 ಕೆಕೆಆರ್	2014 ಕೆಕೆಆರ್	2016 ಎಸ್‌ಆರ್‌ಎಚ್	2018 ಚೆನ್ನೈ ಸೂಪರ್ ಕಿಂಗ್ಸ್	2020 ಮುಂಬೈ ಇಂಡಿಯನ್ಸ್	2022 ಗುಜರಾತ್ ಟೈಟಾನ್ಸ್	2024 ಕೆಕೆಆರ್
2009 ಡೆಕ್ಕನ್ ಚಾರ್ಜರ್ಸ್	2011 ಚೆನ್ನೈ ಸೂಪರ್ ಕಿಂಗ್ಸ್	2013 ಮುಂಬೈ ಇಂಡಿಯನ್ಸ್	2015 ಮುಂಬೈ ಇಂಡಿಯನ್ಸ್	2017 ಮುಂಬೈ ಇಂಡಿಯನ್ಸ್	2019 ಮುಂಬೈ ಇಂಡಿಯನ್ಸ್	2021 ಚೆನ್ನೈ ಸೂಪರ್ ಕಿಂಗ್ಸ್	2023 ಚೆನ್ನೈ ಸೂಪರ್ ಕಿಂಗ್ಸ್	2025 ರಾಯಲ್ ಬೆಂಗಳೂರು

2026 ಆರ್‌ಸಿಬಿ



ಸಹ ಸ್ಪರ್ಧಿ ಯಶ್ ಬಂಧನ, ಹಳೆಯ ಸೇಡಿನಿಂದಲೇ ಗುಂಡಿಕ್ಕಿ ಕೊಲೆ?
ಬೆಂಗಳೂರು ಪ್ಯಾರಾ ಅಥ್ಲೆಟಿಕ್‌ನಲ್ಲಿ ಚಿನ್ನ ಗೆದ್ದಿದ್ದ ಚಿರಾಗ್ ಹತ್ಯೆ

ಘಾಜಿಯಾಬಾದ್: ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ ಗೆದ್ದಿದ್ದ ಚಿರಾಗ್ ತ್ಯಾಗಿ, ಅದಾಗಿ ಎರಡೇ ದಿನಗಳಲ್ಲಿ (ಶನಿವಾರ) ಶವವಾಗಿ ಪತ್ತೆಯಾಗಿದ್ದಾರೆ. ಉತ್ತರಪ್ರದೇಶದ ಘಾಜಿಯಾಬಾದ್‌ನ ಸಾಯಿ ಕುಂಜ್ ಸನಿಹ ಅವರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ. ಶನಿವಾರ ಅವರ ಶವ ಸಿಕ್ಕಿದೆ. ಈ ಪ್ರಕರಣದಲ್ಲಿ ಸಹ ಸ್ಪರ್ಧಿ ಯಶ್ ಖಾತಿಕ್‌ರನ್ನು ಬಂಧಿಸಲಾಗಿದೆ. ಈ ವರ್ಷದ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದಿರುವ ಚಿರಾಗ್ ಹತ್ಯೆಯ ಹಿಂದೆ ಹಳೆಯ ಸೇಡಿದೆ ಎನ್ನಲಾಗಿದೆ.

ಆಗಿದ್ದೇನು?: ಚಿರಾಗ್ ಪುಣೆಯಿಂದ ಶುಕ್ರವಾರ ದೆಹಲಿಗೆ ಬಂದಿದ್ದರು. ಶನಿವಾರ ಬೆಳಗ್ಗೆ ಉತ್ತರಪ್ರದೇಶದ ಮುರಾದ್‌ಬಾದ್‌ನಲ್ಲಿರುವ ಬಸಂತಪುರ ಸೇಥ್ಲಿ ಹಳ್ಳಿಯಲ್ಲಿರುವ ತಮ್ಮ ಪೋಷಕರಿಗೆ ಕರೆ ಮಾಡಿ ಸಂಜೆ ಬರುವುದಾಗಿ ತಿಳಿಸಿದ್ದರು. ಅದಾಗಿ ಕೆಲವೇ ನಿಮಿಷಗಳಲ್ಲಿ ಅವರ ಫೋನ್ ನಿಶ್ಯಬ್ದವಾಗಿದೆ. ನಂತರ ಅವರು ಮೃತಪಟ್ಟಿರುವುದು ಗೊತ್ತಾಗಿದೆ.

ಮೃತದೇಹದ ಪ್ರಾಥಮಿಕ ಪರೀಕ್ಷೆ ಮತ್ತು ಸ್ಥಳದಿಂದ ಸಂಗ್ರಹಿಸಿದ ಪುರಾವೆಗಳ ಅನ್ವಯ ತ್ಯಾಗಿ ಅವರನ್ನು ಗುಂಡಿಕ್ಕಿ ಕೊಂದಿರುವುದು ಗೊತ್ತಾಗಿದೆ ಎಂದು ಡಿಸಿಪಿ ಧವಲ್ ಜೈಸ್ವಾಲ್ ಹೇಳಿದ್ದಾರೆ. ತ್ಯಾಗಿ ಜೊತೆ 5 ವರ್ಷ ತರಬೇತಿ ಪಡೆದಿದ್ದ ಯಶ್ ಖಾತಿಕ್ ಎಂಬ ಪ್ಯಾರಾ ಅಥ್ಲೀಟ್ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಹಿಂದೆ ಕೂಟವೊಂದರ ವೇಳೆ ಖಾತಿಕ್ ವಿರುದ್ಧ ತ್ಯಾಗಿ ದೂರು ನೀಡಿದ್ದರು. ಆಗ ಖಾತಿಕ್ ದಾಖಲೆಗಳು ನಕಲಿ ಎಂದು ಗೊತ್ತಾಗಿತ್ತು. ಹೀಗಾಗಿ ಖಾತಿಕ್ ಅನರ್ಹಗೊಂಡಿದ್ದರು. ಈ ದ್ವೇಷದಿಂದಲೇ ಅವರು ಗುಂಡು ಹಾರಿಸಿರ ಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಪಿಸ್ತೂಲ್‌ನಿಂದ ತ್ಯಾಗಿ ಮೇಲೆ ಗುಂಡು ಹಾರಿಸಿದ್ದಾಗಿ ಖಾತಿಕ್ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಮೂಲ ಗಳು ತಿಳಿಸಿವೆ. ಪಿಸ್ತೂಲ್ ಪತ್ತೆಗೆ ಪೊಲೀಸರ ತಂಡವನ್ನು ನಿಯೋಜಿಸಲಾಗಿದೆ.

ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ | ಫೆಲಿಕ್ಸ್ 8ರ ಘಟ್ಟಕ್ಕೆ
ಸ್ವಿಯಾಟೆಕ್‌ಗೆ ಸೋಲಿನ ಆಘಾತ, ಎಲಿನಾ ಕ್ವಾರ್ಟರ್‌ಗೆ

ಪ್ಯಾರಿಸ್: ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಪುರುಷರ ಸಿಂಗಲ್ಸ್‌ನಲ್ಲಿ ಫೆಲಿಕ್ಸ್ ಅಲಿಯಾಸಿಮ್ 4ನೇ ಸುತ್ತಿನಲ್ಲಿ ಗೆದ್ದು ಕ್ವಾರ್ಟರ್ ಫೈನಲ್‌ಗೇರಿದ್ದಾರೆ. ಅವರು 5-7, 6-1, 7-6, 7-6 ಸೆಟ್‌ಗಳಿಂದ ಬ್ರೆಂಡನ್ ನಕಶಿಮಾರನ್ನು ಹೊರಗಟ್ಟಿದರು. ಮೊದಲ ಸೆಟ್ ಸೋತ ಅವರು ನಂತರ ಸತತ 3 ಸೆಟ್‌ಗಳನ್ನು ಗೆದ್ದರು.

ಮಹಿಳಾ ಸಿಂಗಲ್ಸ್‌ನಲ್ಲಿ ಖ್ಯಾತ ಆಟಗಾರ್ತಿ ಇಗಾ ಸ್ವಿಯಾಟೆಕ್ 4ನೇ ಸುತ್ತಿನಲ್ಲಿ ಸೋತುಹೊರ ಬಿದ್ದರು. ಮಾರ್ತಾ ಕೋಸ್ತ್ಯುಕ್ 7-5, 6-1ರಿಂದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್‌ಗೇರಿದರು. ಎಲಿನಾ ಸ್ವಿಟೋಲಿನಾ 4-6, 6-4, 6-0ಯಿಂದ ಬೆಲಿಂಡಾ ಬೆನ್ಸಿಕ್ ವಿರುದ್ಧ ಗೆದ್ದು ಮುಂದಿನ ಸುತ್ತಿಗೇರಿದರು. ಇನ್ನೊಂದು ಪಂದ್ಯದಲ್ಲಿ ಸೊರಾನಾ ಸರ್ಸ್ಟಿಯಾ 6-3, 7-6ರಿಂದ ವಾಂಗ್ ಕ್ಷಿಯುರನ್ನು ಮಣಿಸಿ 8ರ ಘಟ್ಟಕ್ಕೇರಿದರು.

ವಿಶ್ವವಿಖ್ಯಾತ ಆಟಗಾರರಾದ ಜಾನಿಕ್ ಸಿನ್ನರ್ 2ನೇ ಸುತ್ತಿನಲ್ಲಿ, ನೊವಾಕ್ ಜೊಕೊವಿಚ್ 3ನೇ ಸುತ್ತಿನಲ್ಲೇ ಸೋತು ಕೂಟದಿಂದ ಹೊರ ಬಿದ್ದಿದ್ದಾರೆ.

ಸ್ವಿಯಾಟೆಕ್